ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2025 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:5, Pages:56
December - 2025, Price Rs. 20/-



ತಿರುಮಲೆ ಸ್ವಾಮಿಯವರ ಸ್ವರ್ಣ ರಥೋತ್ಸವ
ವೈಕುಂಠ ಏಕಾದಶಿ 30-12-2025



ತಿರುಮಲೆ
ಸ್ವಾಮಿಯವರ
ಆಲಯದಲ್ಲಿ
ಕೃತ್ತಿಕಾ ದೀಪೋತ್ಸವ
04-12-2025





# ಭಗವದ್ಗೀತೆ

ಅಥ ಚೇತ್ತ್ವಂ ಧರ್ಮ್ಯಮಿಮಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -33)

**ಆದರೂ ನೀನು ಧರ್ಮಸಾಧನವಾದ ಈ ಯುದ್ಧವನ್ನು ಮಾಡದೆ ಹೋದರೆ ನಿನ್ನ ಸ್ವದೇಶಕ್ಕೂ ಕೀರ್ತಿಗೂ ಎರವಾಗಿ ಪಾಪವನ್ನಷ್ಟೆ ಪಡೆಯುವೆ.**

ಏಳು ಮಲೆಯರಸ ಎದ್ದೇಳು ಶ್ರೀನಿವಾಸ ಕ್ಲೇಶ
ದೋಷವ ಬಿಡಿಸಿ ಭಕ್ತರನು ಪೊರೆಯೋ॥

ಬ್ರಹ್ಮೋತ್ಸವಕೆಂದು ಭಕುತಿಯಲಿ ಬಂದಿರುವ
ಪಾಮರ ಭಕುತರ ಪ್ರೇಮದಿ ಹರಸೋ॥

ಉತ್ಸವ ಸ್ವಾಮಿ ಎನ್ನಂತರ್ಯಾಮಿ
ಆರ್ತನ ರಕ್ಷಿಸಿ ಪೊರೆಯ ಬೇಕಿನ್ನು॥

ಇಂದಿರ ರಮಣ ಗೋವಿಂದ ಎಂದು
ಎಂದಿಗೂ ಭಜಿಸುವೆ ಬಂಧು ನೀನೆಂದು॥

ಪದ್ಮಾವತಿ ಪ್ರಿಯ ಪಾರ್ಥಸಾರಥಿ ವಿಟ್ಠಲ
ಪರಿ ಪರಿ ಭಕುತರ ಪ್ರೀತಿಲಿ ಪೊರೆಯೋ ॥

- ಪಾರ್ಥಸಾರಥಿ ವಿಟ್ಠಲ





# ಈಶಾವಾಸ್ಯೋಪನಿಷತ್ತಿನ ಹಿನ್ನೆಲೆ

– ಓಂ ಪ್ರಕಾಶ್ ಭಟ್
9482414444

**'ಈಶಾವಾಸ್ಯೋಪನಿಷತ್'** ಎಂದು ಪ್ರಸಿದ್ಧ ಹೆಸರಿನಿಂದ ಕರೆಯಲ್ಪಡುವ ದಶೋಪನಿಷತ್ತುಗಳಲ್ಲಿ ಚಿಕ್ಕದಾಗಿ 18 ಅಪೂರ್ವ ಮಂತ್ರಗಳನ್ನು ಹೊಂದಿರುವ ಈ ಉಪನಿಷತ್ತಿನ ಪ್ರಾಚೀನ ಹೆಸರು **'ಯಾಜ್ಞೀಯ ಮಂತ್ರೋಪನಿಷತ್'**. ಸೂಕ್ತ, ಮಂತ್ರಗಳಿಗೆ ನಾಮಕರಣ ಆಗುವುದು ಕೆಲವೊಮ್ಮೆ ಆ ಮಂತ್ರಗಳನ್ನು ಕಂಡ ಋಷಿಯಿಂದ ಅಥವಾ ಆ ಮಂತ್ರಪ್ರತಿಪಾದ್ಯ ದೇವತೆಯಿಂದ. ಪ್ರಸ್ತುತ ಉಪನಿಷತ್ತಿನಲ್ಲಿ ಪ್ರತಿಪಾದ್ಯರು ಯಾರೆಂದರೆ 'ಯಜ್ಞ' ನಾಮಕ ಭಗವಂತನ ರೂಪ. ಆದ್ದರಿಂದಲೇ ಈಶಾವಾಸ್ಯೋಪನಿಷತ್ತಿಗೆ ಪ್ರಾಚೀನ ಹೆಸರು "ಯಾಜ್ಞೀಯಮಂತ್ರೋಪನಿಷತ್" ದಶೋಪನಿಷತ್ತುಗಳಲ್ಲಿ ಬಾಕಿ ಉಳಿದಿರುವ ಉಪನಿಷತ್ತುಗಳು ಬ್ರಾಹ್ಮಣಗಳಲ್ಲಿ ಆರಣ್ಯಕಗಳಲ್ಲಿ ಬರುವಂತಹದ್ದಾದರೆ ಈ ಉಪನಿಷತ್ತು ವೇದದ ಮೂಲ ಸಂಹಿತೆಯಲ್ಲಿ, ಮಂತ್ರ ಭಾಗದಲ್ಲಿ ಬರುವಂತಹದ್ದು. ಯಜುರ್ವೇದದಲ್ಲಿ 101 ಶಾಖೆಗಳಿದ್ದು ಅವನ್ನು 89 ಭಾಗಗಳಾಗಿ "ಕೃಷ್ಣ ಯಜುರ್ವೇದ" ಎಂದು ಕರೆದರೆ, ಉಳಿದ 15 ಭಾಗಗಳನ್ನು "ಶುಕ್ಲಯಜು ರ್ವೇದ" ಎಂದು ಕರೆಯುತ್ತಾರೆ. ಈ ಶುಕ್ಲ ಯಜುರ್ವೇದವನ್ನು "ವಾಜಸನೇಯ ಸಂಹಿತೆ" ಎಂದೂ ಕರೆಯುತ್ತಾರೆ. ಇದರಲ್ಲಿ 'ಕಾಣ್ವ' ಮತ್ತು "ಮಾಧ್ಯಂದಿನ" ಎಂದು ಪ್ರಧಾನ ಭಾಗಗಳಾಗಿ ಇರುವವುಗಳು. ಕಾಣ್ವಸಂಹಿತೆಯ 40 ನೇ ಅಧ್ಯಾಯದಲ್ಲಿರುವ ಮಂತ್ರ ಭಾಗವೇ ಈಗ ಪ್ರಸಿದ್ಧವಾಗಿರುವ 'ಈಶಾವಾಸ್ಯೋಪನಿಷತ್'. ದೇವತೆಯ ಮತ್ತು ಋಷಿಯ ಹಿನ್ನೆಲೆ, ಛಂದಸ್ಸು ಮುಂತಾದವುಗಳನ್ನು ತಿಳಿದುಕೊಂಡು ಮಂತ್ರಗಳ ಅರ್ಥಾನುಸಂಧಾನ ಮಾಡಬೇಕು. ಕಣ್ವಮಹರ್ಷಿಗಳಿಗೆ ಯಾಜ್ಞವಲ್ಕ್ಯರಿಂದ ಬಂದದ್ದು. ಯಾಜ್ಞವಲ್ಕ್ಯರಿಗೆ ಸೂರ್ಯನಿಂದ ಬಂದದ್ದು. ಅದಕ್ಕಿಂತ ಮೊದಲು ಯಾರಿಗೆ ದರ್ಶನವಾಯಿತೆಂದು ವೇದವ್ಯಾಸರು ಭಾಗವತದಲ್ಲಿ ತಿಳಿಸಿದ್ದಾರೆ. ಸೃಷ್ಟಿಯ ಆರಂಭದಲ್ಲಿ ಈ ಮಂತ್ರವನ್ನು 'ಸ್ವಾಯಂಭುವ ಮನು' ಕಂಡ. ಹದಿನಾಲ್ಕು ಮನುಗಳಲ್ಲಿ ಮೊದಲನೆಯವನೇ ಇವನು. ಇವನೇ ಮಾನವರ ಮೂಲಪುರುಷ, ಶತರೂಪಾದೇವಿ ಇವನ ಮಡದಿ. ಇವರಿಗೆ ಆಕೂತಿ, ದೇವಹೂತಿ, ಪ್ರಸೂತಿಯರೆಂಬ ಹೆಣ್ಣುಮಕ್ಕಳು. ಆಕೂತಿಯ ಗಂಡ ಶುಚಿಪ್ರಜಾಪತಿ. ಇವರಿಗೆ ಮಗನಾಗಿ ಭಗವಂತನೇ ಯಜ್ಞನಾಮಕ ರೂಪದಿಂದ ಅವತರಿಸಿದ. ಯಜ್ಞನಾಮಕನಾದ ಭಗವಂತನನ್ನು ಮೊಮ್ಮಗನೆಂದು ತಿಳಿಯದೆ ಸಾಕ್ಷಾತ್ ಭಗವಂತನೇ ಎಂದು ಧ್ಯಾನ ಮಾಡಿ ಸಾಕ್ಷಾತ್ಕರಿಸಿಕೊಂಡ ಮಂತ್ರಗಳೇ ಈ ಉಪನಿಷನ್ಮಂತ್ರಗಳು. ಯಾಕೆ ಯಜ್ಞನಾಮಕ ಭಗವಂತನನ್ನು ಪ್ರಾರ್ಥಿಸಿದ ಎನ್ನುವುದಕ್ಕೂ ಒಂದು ಹಿನ್ನೆಲೆಯಿದೆ.

ಮೂಲ ಪುರುಷನಾದ ಸ್ವಾಯಂಭುವಮನು ತಪಗೈಯುತ್ತಿದ್ದಾಗ ಭಗವಂತನ ಸಂಕಲ್ಪಕ್ಕೆ ವಿರುದ್ಧವಾಗಿ, ವ್ಯವಸ್ಥೆಯನ್ನು ಹಾಳು ಮಾಡಲು ರಾಕ್ಷಸರು ಇವನ ಮೇಲೆ ದಾಳಿ ಮಾಡುತ್ತಾರೆ. ಇದು ಸತ್ವ ಮತ್ತು ತಮಸ್ಸಿನ ಸಂಘರ್ಷ. ಸತ್ವ ಮತ್ತು ರಜಸ್ಸು ಸೃಷ್ಟಿ ಮಾಡಲು ಪ್ರಯತ್ನಿಸಿದರೆ ತಮಸ್ಸು ನಾಶಗೊಳಿಸಲು ಪ್ರಯತ್ನಿಸುತ್ತದೆ. ಶಿವನಿಂದ ಅವಧ್ಯತ್ವ ವರ ಪಡೆದ ಆಸುರೀ ಶಕ್ತಿಗಳು ಸೃಷ್ಟಿಯ ಸಾತ್ವಿಕ ಶಕ್ತಿಯನ್ನೇ ಉದ್ವರ್ತನಗೊಳಿಸಬೇಕೆಂದು ಪ್ರಯತ್ನಪಟ್ಟಾಗ ಆ ಆಸುರೀಶಕ್ತಿಗಳಿಂದ ಸ್ವಾಯಂಭುವಮನು ರಕ್ಷಿಸಿಕೊಳ್ಳಲು ತನ್ನ ಮೊಮ್ಮಗನನ್ನೇ ಪ್ರಾರ್ಥನೆ ಮಾಡಿದನು. ಆ ಪ್ರಾರ್ಥನಾ ಮಂತ್ರಗಳೇ ಈ ಉಪನಿಷನ್ಮಂತ್ರಗಳು. ಇದು 'ದರ್ಶನ', ದರ್ಶನ ಪರಂಪರೆಯ ಪ್ರಾರಂಭ. ಪ್ರಾರ್ಥನೆಗೆ ಪ್ರಸನ್ನನಾಗಿ ಭಗವಂತನು ಆ ಆಸುರೀ ಶಕ್ತಿಗಳನ್ನು ಸಂಹರಿಸಿದನು. ಸೃಷ್ಟಿಯ ವಿಸ್ತಾರಕ್ಕೆ ಅನುವು ಮಾಡಿ ಸ್ವಾಯಂಭುವ ಮನುವನ್ನು ಅನುಗ್ರಹಿಸಿದನು.

ಉಪನಿಷತ್ತುಗಳು ನಮ್ಮ ಅಂತರಂಗದ ಬೆಳವಣಿಗೆಗೆ ಅಗತ್ಯವಾದವುಗಳು. ನಮ್ಮ ಅಂತರಂಗದಲ್ಲಿ ಹೃನ್ಮನದಲ್ಲಿ ಹೋರಾಟಗಳು ನಡೆಯುತ್ತಿರುತ್ತವೆ, ಸತ್ ಅಸತ್‌ಗಳ ನಡುವೆ. ಯಾವುದರ ಕೈ ಮೇಲಾಗುತ್ತದೆ ಅದರಂತೆ ನಮ್ಮ ಜೀವನ ನಡೆಯಲಿದೆ. ಹಾಗಾಗಿ ಬದುಕು ಸರಿಯಾಗಿ ಸಾತ್ವಿಕಮಯವಾಗಿ ನಡೆಯಬೇಕೆಂದರೆ ಆಂತರಿಕವಾಗಿ, ಧನಾತ್ಮಕವಾಗಿ, ಸಾತ್ವಿಕವಾಗಿ ನಾವು ಬೆಳೆಯಬೇಕು. ಅದಕ್ಕಾಗಿ ಪ್ರತಿದಿವಸ ಭಗವತ್ತತ್ತ್ವಕ್ಕೆ ಶರಣಾಗಬೇಕು. ಈ ಅಪೂರ್ವ ಮಂತ್ರೋಪನಿಷತ್ತಿನ ಪಾರಾಯಣ ಅರ್ಥಾನು ಸಂಧಾನ ನಡೆಯಬೇಕು.

ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಮಹಾಮಂತ್ರಗಳಾದುದರಿಂದ ಇದು ಮಂತ್ರೋಪನಿಷತ್ ಇದು ಈ ಉಪನಿಷತ್ತಿನ ಹಿನ್ನೆಲೆ. ಇನ್ನು ಈ ಮಂತ್ರಗಳಲ್ಲಿ ಏನಿದೆ, ಹೇಗೆಲ್ಲಾ ಪ್ರಾರ್ಥನೆ ನಡೆದಿದೆ, ಈ ಪ್ರಾರ್ಥನೆಗಳ ಶಕ್ತಿ ಎಂತಹದ್ದು ಎನ್ನುವುದನ್ನು ಮುಂದೆ ಪ್ರತಿ ಮಂತ್ರಗಳ ಮೂಲಕ ಅಧ್ಯಯನ ಮಾಡೋಣ.

(ಮುಂದಿನ ಸಂಚಿಕೆಯಲ್ಲಿ ಮೊದಲ ಮಂತ್ರದ ಚಿಂತನೆ.)

ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಮಾರ್ಗಶಿರ - ಪುಷ್ಯ ಮಾಸ ಸಂಚಿಕೆ

ಸಂಪುಟ:05 ಡಿಸೆಂಬರ್ - 2025 ಸಂಚಿಕೆ:05



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363
ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ವೈಕುಂಠ ಏಕಾದಶಿ | - ಶ್ರೀಮತಿ ಎಸ್. ರೋಹಿಣಿಶರ್ಮಾ | 07 |
| ಜೀವನ ಸಾರ್ಥಕತೆಗೆ ಮಾರ್ಗದರ್ಶಿ ಮಾರ್ಗಶಿರ ಮಾಸ | - ಶ್ರೀಮತಿ ವಾರುಣಿ ಹೊನ್ನಾಳಿ | 10 |
| ಶ್ರೀ ಗುರು ಗೋವಿಂದವಿಠಲ ದಾಸರು | - ಶ್ರೀಧರ ರಾಯಸಂ | 14 |
| ಭಗವದ್ಗೀತೆಯ ಜನ್ಮದಿನ | - ಶ್ರೀಮತಿ ಪಾರಿಜಾತ ಜಿ.ಎಸ್. | 16 |
| ಹರಿಪ್ರಜ್ಞೆ ಪ್ರಚಾರಕ ಶ್ರೀಮದಕ್ಷೋಭ್ಯ ತೀರ್ಥರು | - ಪಿ.ಎಸ್.ಜಿ. | 18 |
| ತೊಂಡರಡಿಪ್ಪೊಡಿ ಆಳ್ವಾರ್ | - ಡಾ॥ ಎನ್.ಕೆ. ರಾಮಶೇಷನ್ | 21 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಜಿ. ಎನ್. ಶ್ರೀನಿವಾಸನ್ | 24 |
| ಶ್ರೀ ಜಿತಾಮಿತ್ರ ತೀರ್ಥರು | - ಡಾ॥ ವೃಂದಾ ಸಂಗಮ್ | 25 |
| ಶ್ರೀಮದನಂತಾರ್ಯ ವಿರಚಿತ ಶ್ರೀ ಗೋದಾ ಚತುಃ ಶ್ಲೋಕಿ | - ಎಸ್. ವಾದಿರಾಜ | 28 |
| ವೈಕುಂಠದೊಡೆಯನನ್ನು ಭೂವೈಕುಂಠಕ್ಕೆ ಕರೆತಂದ ಹರಿದಾಸರು ಶ್ರೀವಿಜಯದಾಸರು | - ವರಾಹ ಹರಿ ವಿಠಲದಾಸರು | 31 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ತಿರುವಾಳಿ - ತಿರುನಗರಿ | - ಸೂರ್ಯವಂಶಿ | 42 |
| ಹೊಯ್ಸಳರ ಕಲಾಕುಸುಮ ಹೊಸ ಹೊಳಲಿನ ಲಕ್ಷ್ಮೀ ನಾರಾಯಣ ದೇವಾಲಯ | - ಕೆಂಗೇರಿ ಚಕ್ರಪಾಣಿ | 44 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಕೋಪದ ಪ್ರಸಂಗದಲ್ಲೂ ಸಂಯಮದ ದೀಪ ಬೆಳಗಬೇಕು | - ಎ.ಆರ್. ರಘುರಾಮ | 48 |
| ಚಿತ್ರಕಥೆ - ತಿರುಮಂಗೈ ಆಳ್ವಾರ್ | - ಆರ್.ಕೆ.ವಿ | 52 |

**ಮುಖಚಿತ್ರ** - ಸ್ವರ್ಣ ರಥದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು - ತಿರುಮಲೆ

**ಹಿಂಬದಿಚಿತ್ರ**- ಶ್ರೀ ಆಂಡಾಳ್ ಉತ್ಸವ ವಿಗ್ರಹ, ಗೋವಿಂದರಾಜಸ್ವಾಮಿ ಆಲಯ, ತಿರುಪತಿ

# ಮುಕ್ತಿದಾಯಕ ವೈಕುಂಠದ್ವಾರ ದರ್ಶನ

**ಶೇಷಾಚಲೇ ಯನ್ಮಾಹಾತ್ಮ್ಯಮನ್ಯಕ್ಷೇತ್ರೇ ನ ತತ್ ಕ್ವಚಿತ್।**
**ತದ್ಗತ ಶ್ರೀನಿವಾಸಸ್ಯ ಮಹಿಮಾ ನಾನ್ಯಗಃ ಶುಭಃ॥**

ಶೇಷಾಚಲವು ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದಿರುವಂತಹಾ ಪುಣ್ಯಕ್ಷೇತ್ರ ! ಈ ದಿವ್ಯ ಕ್ಷೇತ್ರಕ್ಕೆ ಇರುವ ಮಹಿಮೆ ಇತರ ಕ್ಷೇತ್ರಗಳಿಗೆ ಇಲ್ಲವೆಂದೇ ಹೇಳಬಹುದು. ಈ ಪುಣ್ಯ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ವೇಂಕಟೇಶ್ವರನಿಗಿಂತಲೂ ಮಹಿಮಾನ್ವಿತ ವಾದ ದೈವವು ಇನ್ನೆಲ್ಲೂ ಕಂಡು ಬರುವುದಿಲ್ಲ. ಅಂತಹಾ ದೇವದೇವನು ನೆಲೆಯಾಗಿರುವ ಬಂಗಾರದ ಮಹಲು "ಆನಂದ ನಿಲಯ" ವನ್ನು ವೀಕ್ಷಿಸುವುದು, ಅದರಲ್ಲಿ ಅರ್ಚಾಮೂರ್ತಿಯಾಗಿ ನಿಂತು ಎಲ್ಲರಿಗೂ ಅಭಯವನ್ನು ನೀಡುತ್ತಿರುವ ಶ್ರೀನಿವಾಸನ ದಿವ್ಯಮಂಗಳ ವಿಗ್ರಹವನ್ನು ಕಣ್ಣಾರೆ ದರ್ಶಿಸುವುದು ಪೂರ್ವಜನ್ಮದ ಸುಕೃತವೆಂದೇ ಹೇಳಬೇಕು.

ಕಲಿಯುಗ ಭೂಲೋಕ ವೈಕುಂಠವೆನಿಸಿದ ತಿರುಮಲೆಯ ಕ್ಷೇತ್ರದಲ್ಲಿ ವರ್ಷವೆಲ್ಲಾ ನಿತ್ಯೋತ್ಸವಗಳು, ವಾರೋತ್ಸವಗಳು, ಪಕ್ಷೋತ್ಸವಗಳು, ಮಾಸೋತ್ಸವಗಳು, ಸಂವತ್ಸರೋತ್ಸವಗಳು ನಡೆಯುತ್ತಿರುತ್ತಲೇ ಇರುತ್ತವೆ.

"ಮಾಸಾನಾಂ ಮಾರ್ಗಶಿರ್ಷೋऽಹಂ" ಎಂದು ತಿಂಗಳುಗಳೆಲ್ಲದರಲ್ಲೂ 'ಮಾರ್ಗಶಿರ' ವು ಅತ್ಯುತ್ತಮವಾದುದು. ಈ ಮಾಸವು ಶ್ರೀ ಮಹಾವಿಷ್ಣುವಿಗೆ ಅತ್ಯಂತ ಪ್ರೀತಿಕರವಾದುದಾಗಿದೆ. ಈ ತಿಂಗಳಿನಲ್ಲಿ ಮಾಡುವ ಪೂಜೆಗಳೊಂದಿಗೆ ಉಪವಾಸಗಳು ಸಮಸ್ತ ಶುಭಫಲಗಳನ್ನು ಒದಗಿಸುತ್ತವೆ. ಈ ಮಾಸದಲ್ಲಿ ಶ್ರೀಮದ್ಭಗವದ್ಗೀತೆಯು ಅವತರಿಸಿದ್ದು, ವೈಕುಂಠ ಏಕಾದಶಿ, ಹನುಮ ದ್ವ್ರತ ಬರುವುದು. ಪನ್ನಿದರಾಳ್ವಾರರಲ್ಲಿ ಒಬ್ಬರಾದ ತಿರುಮಂಗೈ ಆಳ್ವಾರರ ಶಾತ್ತುಮೊರ, ಹಾಗೇ ತಿರುಪ್ಪಾಣಾಳ್ವಾರ್, ತೊಂಡರಡಿ ಪ್ಪೊಡಿ ಆಳ್ವಾರರ ವರ್ಷ ತಿರುನಕ್ಷತ್ರಗಳು ಬರುವುದು ಅತ್ಯಂತ ಆನಂದದಾಯಕವಾಗಿದೆ.

ಸೂರ್ಯನು ಧನೂರಾಶಿಯಲ್ಲಿ ಪ್ರವೇಶಿಸುವುದರಿಂದ 'ಧನುರ್ಮಾಸ' ಪ್ರಾರಂಭವಾಗುತ್ತದೆ. ಧನುರ್ಮಾಸ ಶ್ರೀ ಮಹಾ ವಿಷ್ಣುವಿನ ಆರಾಧನೆಗೆ ವಿಶೇಷವಾದ ಮಾಸವಾಗಿದೆ. ಪೆರಿಯಾಳ್ವಾರರ ಮಾನಸ ಪುತ್ರಿಯಾದ ಗೋದಾದೇವಿ (ಆಂಡಾಳ್) ಭೂದೇವಿಯ ಅವತಾರ, ಆಕೆ ಆಚರಿಸಿದ ವ್ರತವೇ 'ಧನುರ್ಮಾಸವ್ರತ'.ಈ ವ್ರತವನ್ನೇ 'ಶ್ರೀವ್ರತ' ಎಂದು ಕರೆಯುತ್ತಾರೆ. ಆಂಡಾಳಮ್ಮ ತನ್ನ ಸ್ನೇಹಿತೆಯರೊಂದಿಗೆ ಸೇರಿ ಕೃಷ್ಣನ ಕೀರ್ತನೆ,ಕೃಷ್ಣನ ಧ್ಯಾನದಲ್ಲಿ ಲೀನವಾಗುವ ಉದ್ದೇಶದಿಂದ ನೆರವೇರಿದ 30 ಪಾಶುರಗಳಿರುವ ಗೀತಾವ್ರತವಿದು. ಈ ಮಾಸದಲ್ಲಿ ಗೋದಾದೇವಿ ಕೀರ್ತಿಸಿದ ತಿರುಪ್ಪಾವೈ ಅನ್ನು ತಿರುಮಲೆಯ ಸ್ವಾಮಿಯವರಿಗೆ ಮೇಲ್‌ಕೋಲುಪು(ಸುಪ್ರಭಾತ) ಎಂದು ನಡೆಸಲಾಗುತ್ತದೆ.

ಶ್ರೀನಿವಾಸನ ಸನ್ನಿಧಿಯಲ್ಲಿ 'ವೈಕುಂಠ ಏಕಾದಶಿ'

ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಮಾರ್ಗಶಿರ ಮಾಸದಲ್ಲಿ ಬರುವ ಶುದ್ಧ ಏಕಾದಶಿ ಪರಮ ಪವಿತ್ರವಾದುದಾಗಿದೆ. ಇದನ್ನೇ ವೈಕುಂಠ ಏಕಾದಶಿ ಎಂದು ಕರೆಯುತ್ತಾರೆ. ವೈಕುಂಠ ಏಕಾದಶಿಯ ಪವಿತ್ರ ದಿನದಂದು ಸುಪ್ರಭಾತದ ಸಮಯದಲ್ಲಿ ಶ್ರೀನಿವಾಸನ ಗರ್ಭಗುಡಿಯ ಅತೀ ಸಮೀಪದಲ್ಲಿರುವ ಮಾರ್ಗ "ಮುಕ್ಕೋಟಿ ಪ್ರದಕ್ಷಿಣೆಯ ಮಾರ್ಗ" ವನ್ನು ತೆರೆಯಲಾಗುತ್ತದೆ. ಈ ಮುಕ್ಕೋಟಿ ಪ್ರದಕ್ಷಿಣೆಯ ಮಾರ್ಗದಲ್ಲಿ ಪ್ರವೇಶಿಸುವ ಭಾಗ್ಯವನ್ನು ಭಕ್ತರಿಗೆ ವರ್ಷದಲ್ಲಿ ಹತ್ತು ದಿನಗಳ ಕಾಲ ತಿರುಮಲೆ ತಿರುಪತಿ ದೇವಸ್ಥಾನದವರು ಕಲ್ಪಿಸುತ್ತಿದ್ದಾರೆ. ವೈಕುಂಠ ಪ್ರದಕ್ಷಿಣೆಯ ಮಾರ್ಗದಲ್ಲಿ ಪ್ರವೇಶಿಸುವ ಸೌಭಾಗ್ಯವನ್ನು ಪಡೆಯುವ ಭಕ್ತರ ಪೂರ್ವಜನ್ಮದ ಪಾಪಕರ್ಮಗಳು ತೊಲಗಿ ಹೋಗುತ್ತವೆ. ಇಷ್ಟಾರ್ಥಗಳೆಲ್ಲವೂ ನೆರವೇರುತ್ತವೆ. ಇದೇ ದಿನ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪಸ್ವಾಮಿಯು ಬಂಗಾರದ ರಥದಲ್ಲಿ ತಿರುಮಲೆಯ ಸನ್ನಿಧಿ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬಂದು ಭಕ್ತರಿಗೆ ದರ್ಶನವನ್ನು ನೀಡುತ್ತಾರೆ. ಈ ದೃಶ್ಯವನ್ನು ವರ್ಣಿಸಲು ಅಸಾಧ್ಯವಾದುದು. ಅಕ್ಷರಗಳಿಗೆ ನಿಲಕದ್ದು. ಅದನ್ನು ಸ್ವತಹಾ ದರ್ಶಿಸಿ ಅನುಭವಿಸಬೇಕಾದದ್ದೇ!

ಇನ್ನು ಮಾನವ ವ್ಯಕ್ತಿತ್ವದ ವಿಕಾಸಕ್ಕೆ ಪ್ರತೀಕವಾದದು "ಭಗವದ್ಗೀತೆ" ಸಾಕ್ಷತ್ತು ಶ್ರೀಕೃಷ್ಣನ ಅಮೃತ ವಾಕ್ಯಗಳಾದ 'ಗೀತೆ' ಯು ಮಾರ್ಗಶಿರ ಮಾಸದ ಶುದ್ಧ ಏಕಾದಶಿಯಂದೇ ಅವತರಿಸಿತು. ಈ ಏಕಾದಶಿಯಂದು 'ಗೀತಾಪಾರಾಯಣ' ಮಾಡಬೇಕು. ಇತರರ ಕೈಯಲ್ಲೂ ಮಾಡಿಸಬೇಕು. ಈ ಮಾಸದಲ್ಲೇ ಆಸ್ತಿಕರಿಗೆ ಸನ್ಮಾರ್ಗವನ್ನು ತೋರಿಸಿ,ಧನ್ಯರಾದ ಭಾಗವತೋತ್ತಮರಾದ ತಿರುಮಂಗೈ,ತಿರುಪ್ಪಾಣ್,ತೊಂಡರಡಿಪ್ಪೊಡಿ ಆಳ್ವಾರರ ಶಾತ್ತುಮೊರೈ, ವರ್ಷ ತಿರುನಕ್ಷತ್ರಗಳು ಬರು ವುದು, ಅವರನ್ನು ಸ್ಮರಿಸುವುದು ನಮೆಲ್ಲರ ಕರ್ತವ್ಯವಾಗಿದೆ. ಈ ರೀತಿ 'ಮಾರ್ಗಶಿರ' ಮಾಸದಲ್ಲಿ ಬರುವಂತಹಾ ಹಬ್ಬಗಳು, ಪವಿತ್ರವಾದ ದಿನಗಳ ವಿಶಿಷ್ಟತೆಯನ್ನು, ಪ್ರಾಶಸ್ತ್ಯವನ್ನು ಅರಿತುಕೊಂಡು ಅದಕ್ಕೆ ಸರಿಯಾದ ಸಾಧನೆಯನ್ನು ಆಚರಿಸಿ, ಧನ್ಯರಾಗೋಣ.

**॥ಸರ್ವೇ ಜನಾಃ ಸುಖಿನೋ ಭವಂತು॥**



# ವೈಕುಂಠ ಏಕಾದಶಿ

- ಶ್ರೀಮತಿ ಎಸ್. ರೋಹಿಣಿ ಶರ್ಮಾ
94815 03218

ಶ್ರೀ ವಿಷ್ಣುವಿನ ವಾಸ ವೈಕುಂಠ. ಈ ವೈಕುಂಠವಾಸಿ ವಿಷ್ಣುವಿಗೆ ಕೇಶವ, ಜನಾರ್ದನ, ಅಚ್ಯುತ, ಶ್ರೀನಿವಾಸ, ಹರಿ ನಾರಾಯಣ,ಕೃಷ್ಣ,ಗೋವಿಂದ,ಪದ್ಮನಾಭ,ಜಗನ್ನಾಥ ಮೊದಲಾದ ನೂರಾರು ಹೆಸರುಗಳು. ವಿಷ್ಣುವಿನ ಹತ್ತು ಅವತಾರಗಳಲ್ಲಿ ಆತನ ಗುಣ ಮತ್ತು ಶಕ್ತಿಗಳು ಅಡಕವಾಗಿವೆ. ಬ್ರಹ್ಮಾಂಡವನ್ನೇ ಸೃಷ್ಟಿಸಿರುವ, ರಕ್ಷಿಸುತ್ತಿರುವ ಮತ್ತು ಪರಿವರ್ತಿಸುವ ಗುರುತರ ಜವಾಬ್ದಾರಿ ಆತನದು. ಹಾಗಾಗಿ ಆತನನ್ನು ಸರ್ವಶಕ್ತ ಎಂದು ಕರೆಯುತ್ತಾರೆ. ಭೂಲೋಕದಲ್ಲಿರುವ ಭಕ್ತರನ್ನು ಸಂತುಷ್ಟಗೊಳಿಸಲು ಭಗವಂತ ಮತ್ತು ಭಕ್ತರ ನಡುವೆ ಸೇತುವೆಯಾಗಿ ಬರುವ ದಿನವೇ ಏಕಾದಶಿ. ಇದನ್ನು ಮುಕ್ಕೋಟಿಏಕಾದಶಿ,ಪುತ್ರದಾಏಕಾದಶಿ,ಸಾರ್ವತ್ರಿಕ ಏಕಾದಶಿ ಎಂಬುದಾಗಿಯೂ ಕರೆಯುತ್ತಾರೆ. ಈ ದಿನ ಭಗವಂತನನ್ನು ಆರಾಧಿಸಲು ಭಕ್ತಿ ಸಮರ್ಪಿಸಲು, ಸುಲಭ ಮಾರ್ಗವಾಗಿದೆ. ಎಲ್ಲಾ ಪಂಥದವರನ್ನು ಸನ್ಮಾರ್ಗಕ್ಕೆ ಸಾಗಿಸುವ ದಿಕ್ಸೂಚಿಯಿದು. ಇಂದು ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದೂ ಮುಕ್ತಿಗಾಗಿ ಪರಿತಪಿಸುವವರಿಗೆ ಒಳ ಪ್ರವೇಶಕ್ಕೆ ಸುಲಭದಾರಿ ಸಿಗುತ್ತದೆ ಎಂದೂ ನಂಬಲಾಗಿದೆ.

ಈ ಏಕಾದಶಿಯಲ್ಲಿ ಉಪವಾಸಕ್ಕೆ ಮಹತ್ವ. **'ಉಪ'** ಎಂದರೆ ಹತ್ತಿರ **'ವಾಸ'** ಎಂದರೆ ಸ್ಮರಣೆ. ಏಕಾದಶಿ ಎಂದರೆ ಹನ್ನೊಂದು. ಮೂರು ತತ್ವಗಳನ್ನೊಳಗೊಂಡು ವರ್ಷದಲ್ಲಿ ಒಟ್ಟು ಇಪ್ಪತ್ತನಾಲ್ಕು ಏಕಾದಶಿಗಳು ಬರುತ್ತವೆ. ಶುಕ್ಲಪಕ್ಷ - ಕೃಷ್ಣ ಪಕ್ಷಗಳಲ್ಲಿ ಈ ಎಲ್ಲಾ ಏಕಾದಶಿಗಳನ್ನು ಆಚರಣೆ ಮಾಡಲು ಎಲ್ಲರಿಗೂ ಅವಕಾಶವಿರುವುದಿಲ್ಲ. ವೈಕುಂಠ ಏಕಾದಶಿಯು ಮಂಗಳಕರ ದಿನ. ಇದು ವರ್ಷದ ಮೊದಲ ಮತ್ತು ಪ್ರಮುಖ ಹಬ್ಬವಾಗಿದೆ. ಚಾಂದ್ರಮಾನ ರೀತಿಯಲ್ಲಿ ಬರುವ ತಿಥಿಗಳಲ್ಲಿ ಹನ್ನೊಂದನೇ ದಿನವೇ ವೈಕುಂಠ ಏಕಾದಶಿ. ಈ ಏಕಾದಶಿಗಳನ್ನು ತಪ್ಪದೆ ಆಚರಿಸುವವರಿಗೆ ಉಳಿದ ಏಕಾದಶಿಯನ್ನು ಆಚರಿಸಿದ ಫಲವೇ ಲಭ್ಯವಾಗುತ್ತದೆ ಎಂದೂ ನಂಬಲಾಗಿದೆ.

**ಯಾನಿ ಕಾನಿ ಚ ಪಾಪಾನಿ ಬ್ರಹ್ಮತ್ಯಾಳ ತಾನಿ ಚ**
**ಅನ್ನಮಾಶ್ರಿತ್ಯ ತಿಷ್ಠಂತಿ ಇತಿ ವೇದವಿದೋ ವಿದುಃ**
**ತಸ್ಮಾದನ್ನಂ ತ್ಯಜೇತ್ ಸಂಪ್ರಾಪ್ತೇ ಹರಿವಾಸರೇ**

ಬ್ರಹ್ಮಹತ್ಯಾ ಮುಂತಾದ ಪಂಚಮಹಾಪಾತಕಗಳು ನಾವು ತಿನ್ನುವ ಆಹಾರವನ್ನು ಪ್ರವೇಶಿಸುವುದರಿಂದ ಆ ದಿನ ಆಹಾರ ಸೇವನೆಯು ನಿಷಿದ್ಧ ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ. ಈ ಉಪವಾಸ ಆಚರಣೆಯು ಆಧ್ಯಾತ್ಮ ಸಾಧಕರಿಗೆ ವಿಶೇಷ ಫಲವನ್ನು ಕೊಡುತ್ತದೆ ಎಂಬ ನಂಬಿಕೆಯೂ ಇದೆ. ಷೋಡಶರೂಪವಾದ ಚಂದ್ರನ ಹನ್ನೊಂದನೆಯ ಕಿರಣವು ಏಕಾದಶಿಯಂದು ಕ್ಷಿತಿಜ ಕಕ್ಷೆಯ ಮೇಲಿರುತ್ತದೆ. ಸೂರ್ಯನು ಉತ್ತರಾಯಣದಿಂದ ದಕ್ಷಿಣಾಯನವನ್ನು ಪ್ರವೇಶಿಸುವ ಮುನ್ನ ಪ್ರತಿವರ್ಷ ಮೊದಲು ಬರುವ ಏಕಾದಶಿಯೇ ವೈಕುಂಠ ಏಕಾದಶಿ. ವೈಕುಂಠದಲ್ಲಿ ಆ ದಿನ ಉತ್ತರದ ಬಾಗಿಲು ತೆರೆದಿರುತ್ತಾರೆ. ಏಕೆಂದರೆ "ಮುರಾ" ಎಂಬ ರಾಕ್ಷಸನನ್ನು ಶ್ರೀಹರಿಯು ರಕ್ಷಿಸಿದ್ದರಿಂದ ದೇವತೆಗಳಿಗೆ ಉತ್ತರ ದ್ವಾರದಲ್ಲಿಯೇ ದರ್ಶನ ಕೊಡುತ್ತಾನೆ. ಆದ್ದರಿಂದಲೇ ಮೂರು ಕೋಟಿ ದೇವತೆಗಳು ಶ್ರೀಮನ್ನಾರಾಯಣನನ್ನು ಪೂಜೆ ಮಾಡಿ ಸಂತುಷ್ಟರಾಗುತ್ತಾರೆ. ಪುರಾಣದ ಪ್ರಕಾರ ವಿಷ್ಣುವು ಲಕ್ಷ್ಮೀದೇವಿಯೊಡಗೂಡಿ ಮುಕ್ಕೋಟಿ ದೇವತೆಗಳೊಂದಿಗೆ ಗರುಡವಾಹನವೇರಿ ಭೂ ಲೋಕಕ್ಕೆ ಬರುತ್ತಾನೆ. ಈ ದಿನ ತಿರುಪತಿ ದೇವಾಲಯದ ಏಳು ಬಾಗಿಲುಗಳನ್ನು ಉತ್ತರ ದಿಕ್ಕಿಗೆ ತೆರೆದಿರುತ್ತದೆ.

ಹೀಗೆಯೇ ಎಲ್ಲಾ ವಿಷ್ಣು ದೇವಾಲಯಗಳಲ್ಲೂ ಉತ್ತರದ್ವಾರದ ಬಾಗಿಲು ತೆರೆದು ಭಕ್ತರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಆ ದಿನ ಉಪವಾಸವಿದ್ದು ಆಚರಿಸುವ ಪೂಜೆಯು ಸಾವಿರಾರು ವರ್ಷಗಳ ತಪಸ್ಸಿನ ಫಲವನ್ನು ನೀಡುತ್ತದೆಯಂತೆ. ಅಂದು ಪೂಜೆ ಮಾಡಿ ಉತ್ತರಾಭಿಮುಖವಾಗಿ ದೇವಾಲಯದ ಒಳ ಪ್ರವೇಶಿಸಿ-ಬಾಗಿ ನಮಿಸಿ ಪೂಜೆ ಮಾಡಿದರೆ ಮೋಕ್ಷ ಸಿಗುವುದೆಂಬ ಬಲವಾದ ನಂಬಿಕೆಯೂ ಹಿಂದೂಗಳಲ್ಲಿದೆ.

ಈ ವ್ರತವನ್ನು ಆರಂಭಿಸುವವರು ದಶಮಿಯ ದಿನದಂದೇ ಮಧ್ಯಾಹ್ನ ಮಾತ್ರ ಊಟಮಾಡಿ ಸಾಯಂಕಾಲ ಮನೆ ಮುಂದೆ ಸಾರಿಸಿ, ರಂಗೋಲಿ ಹಾಕಿ, ತಳಿರು ತೋರಣ ಕಟ್ಟಿ, ಸ್ನಾನಾನಂತರ ತುಳಸಿ ಪೂಜೆ ಮಾಡಿ ದೀಪಹಚ್ಚಿ ಮರುದಿನ ಏಕಾದಶಿ ವ್ರತ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಅಂತೆಯೇ ಅರಿಶಿನ ದಾರಕಟ್ಟಿ ಸಂಕಲ್ಪವನ್ನೂ ಮಾಡಿಕೊಳ್ಳುತ್ತಾರೆ. ರಾತ್ರಿಯಿಡೀ ಜಾಗರಣೆಮಾಡಿ ಉಪವಾಸವಿರಬೇಕು. ಒಂದು ತೊಟ್ಟು ನೀರನ್ನೂ ಕುಡಿಯದೇ ನೆಲದ ಮೇಲೆ ಮಲಗಿ ಕಠಿಣ ವ್ರತ ಆಚರಿಸುವವರೂ ಇದ್ದಾರೆ.

ಮರುದಿನ ಸೂರ್ಯೋದಯಕ್ಕೆ ಮೊದಲೇ ಎದ್ದು ತಲೆಗೆ ಒಂದು ಉದ್ಧರಣೆ ಹಾಲು ಹಾಕಿ ತಲೆಸ್ನಾನ ಮಾಡಬೇಕು. ಶುಚಿರ್ಭೂತರಾಗಿ ಶ್ರೀವಿಷ್ಣುವಿನ ಪೂಜೆ ಮಾಡುತ್ತಾರೆ. ಉಪವಾಸ ಮಾಡಲು ಆಗದವರು ಅಕ್ಕಿಯಿಂದ ಮಾಡಿದ ಆಹಾರ ಸೇವಿಸದೆ ಹಣ್ಣು, ಹಾಲಿನ ಸೇವನೆ ಮಾಡಬಹುದು ಅಥವಾ ಹಾಲನ್ನು, ಹಾಲಿನಿಂದ ತಯಾರಿಸಿದ ಪಾಯಸ ಸಿಹಿ ಪದಾರ್ಥಗಳನ್ನು ಸೇವಿಸಬಹುದು. ವಿಷ್ಣು-ಲಕ್ಷ್ಮಿಯರ ಪಟವನ್ನಿಟ್ಟು ಸಂಕಲ್ಪ ಮಾಡಿ ಶ್ರೀವಿಷ್ಣುವಿನ ಅಷ್ಟೋತ್ತರನಾಮ ಸಹಸ್ರನಾಮ ಪಠಿಸುವವರೂ ಇದ್ದಾರೆ

ವಿಷ್ಣುವಿಗೆ ತುಳಸಿಯಿಂದ ಅಭಿಷೇಕಮಾಡಿ, ಆತನಿಗೆ ಪ್ರಿಯವಾದ ಕಮಲ, ಕದಂಬ, ಸೇವಂತಿಗೆ, ಕೇದಗೆ, ವೈಜಯಂತಿ ಹೂಗಳಿಂದ ಪೂಜೆ ಮಾಡುತ್ತಾರೆ. ಕರ್ಪೂರ ದಾರತಿ ಬೆಳಗಿಸಿ ತುಳಸಿ ಕರ್ಪೂರ ಹಾಕಿದ ತೀರ್ಥ ಸೇವನೆ ಮಾಡುತ್ತಾರೆ. ದೇವರಿಗೆ ಹಾಲು ಹಾಕಿ ತಯಾರಿಸಿದ ಹುಗ್ಗಿ, ಸಪಾದ, ಸಜ್ಜಿಗೆ, ಪಾಯಸ, ಬೂಂದಿ ಮುಂತಾದ ಸಿಹಿ ಕಜ್ಜಾಯಗಳನ್ನು ನೈವೇದ್ಯಕ್ಕೆ ಇಡುವ ಪರಂಪರೆಯಿದೆ.

ಶ್ರದ್ಧಾಭಕ್ತಿಗಳಿಂದ ಮಾಡಿದ ದೇವರ ಧ್ಯಾನದಿಂದ ಅದೃಷ್ಟ -ಸಂಪತ್ತು ಮತ್ತು ಯಶಸ್ಸು ಮುಂತಾದ ಭೌತಿಕ ಲಾಭಗಳು ದೊರೆಯುತ್ತವೆ. ಜನನ-ಮರಣ ಚಕ್ರದಿಂದ ಮುಕ್ತಿ ದೊರೆಯುತ್ತವೆ. ಆತ್ಮ ಸಾಕ್ಷಾತ್ಕಾರವಾಗಿ ಆತ್ಮ ಮನಸ್ಸು ಶುದ್ಧವಾಗುತ್ತದೆ. ಅನನ್ಯ ಭಕ್ತಿಯಿಂದ "ಓಂ ನಮೋ ವೇಂಕಟೇಶ" ಮಂತ್ರವನ್ನು ಜಪಿಸಿದರೂ ಸಾಕು, ದೇವರಿಗೆ ಹತ್ತಿರದವರಾಗುತ್ತೇವೆ ಎಂಬ ನಂಬಿಕೆ ನಮ್ಮದು.

ಸಾಯಂಕಾಲ ವಿಷ್ಣುವಿಗೆ ಸಂಬಂಧಿಸಿದ ದೇವಾಲಯಗಳಿಗೆ ಉತ್ತರ ಬಾಗಿಲಿನ ಮೂಲಕ ತಲೆಬಾಗಿಸಿ ಪ್ರವೇಶಿಸಿ ಪೂಜೆ ಮಾಡಿಸಬೇಕು. ಸಾಮಾನ್ಯವಾಗಿ ಅಂದು ಎಲ್ಲಾ ದೇವಸ್ಥಾನಗಳ ಬಾಗಿಲು ಭಕ್ತರಿಗಾಗಿ ತೆರೆದಿರುತ್ತದೆ. ಆ ದಿನ ವಿಷ್ಣುವು ಅದೃಶ್ಯರೂಪದಲ್ಲಿ ಬಂದು ಆಶೀರ್ವದಿಸುತ್ತಾನೆಂಬ ಬಲವಾದ ನಂಬಿಕೆಯಿದೆ. ಮೂರು ದಿನಗಳು ಭಗವಂತನ ಸ್ಮರಣೆಯಲ್ಲಿಯೇ ನಿರತರಾಗಿರಲು ನಾಮಸ್ಮರಣೆ ಭಜನೆ, ನೃತ್ಯ, ತಾಳ ಮದ್ದಲೆಯೇ ಮುಂತಾದ ನಾಮ ಸಂಕೀರ್ತನೆಗಳೊಂದಿಗೆ ಕಾಲ ಕಳೆಯಬೇಕು.ವಿವಿಧ ದೇವಾಲಯಗಳಲ್ಲಿ ಅಂದು ವಿಶೇಷ ಪೂಜೆಗಳು ಯಜ್ಞ ಯಾಗಗಳು ಪ್ರವಚನಗಳ ನಂತರ ಸೇರಿದ ಭಕ್ತರಿಗೆ ಪ್ರಸಾದ ವಿನಿಯೋಗವೂ ಇರುತ್ತದೆ.

ದಶಮಿಯ ದಿನದಿಂದಲೇ ಸಂಕಲ್ಪದೊಂದಿಗೆ ಪೂಜೆ ಪ್ರಾರಂಭಿಸಿದರೆ ದ್ವಾದಶಿ ದಿನನಿಲ್ಕೆ (ನಿಲುಗಡೆ) ಮಾಡಬೇಕು. ಅಂದು ಬೆಳಗ್ಗೆಯೇ ಪೂಜೆ ಮಾಡಿ ವ್ರತವನ್ನು ನಿಲ್ಲಿಸಬೇಕು. ಇದಕ್ಕೆ ಪಾರಣೆ ಎನ್ನುವರು. ಮಧ್ಯಾಹ್ನ ಸಿಹಿ ಅಡುಗೆಯೊಂದಿಗೆ ಐದು ಜನರಿಗಾದರೂ ಊಟ ಹಾಕಿ ಗೋ ಪೂಜೆಯೊಂದಿಗೆ ಸಜ್ಜನರಿಗೆ ದಾನ ಕೊಡಬೇಕು. ಆ ದಿನ ಅಗಸೆ ಸೊಪ್ಪಿನ ಅಡುಗೆ ಮಾಡಬೇಕು. ಸಂಜೆ ಪೂಜೆ ಮಾಡಿ ನಕ್ಷತ್ರ ದರ್ಶನ ಮಾಡಿ ವ್ರತ ನಿಲ್ಲಿಸಬೇಕು.

ಹೀಗೆ ವೈಷ್ಣವರಿಗೆ ವಿಶೇಷವಾದ ವೈಕುಂಠ ಏಕಾದಶಿ ಹಿನ್ನೆಲೆಗೆ ಅನೇಕ ದೃಷ್ಟಾಂತಗಳಿವೆ. **'ಸುಕೇತು ಮಾನ'** ಎಂಬ ರಾಜನಿಗೆ ಮಕ್ಕಳಿಲ್ಲದ ಕಾರಣ ಮುಂದೆ ತನ್ನ ನಂತರ ವಂಶ ಮುಂದುವರೆಸಲು ಯಾರೂ ಇಲ್ಲವೆಂಬ ಚಿಂತೆಯಿಂದ ಕಾಡಿಗೆ ಹೋಗುತ್ತಾನೆ. ಅಲ್ಲಿಯೇ ಋಷಿಮುನಿಗಳನ್ನು ಭೇಟಿ ಮಾಡಿದಾಗ ಅವರು ವೈಕುಂಠ ಏಕಾದಶಿ ಮಾಡಲು ಸಲಹೆ ಕೊಡುತ್ತಾರೆ. ರಾಜನಿಗೆ ಮಕ್ಕಳಾಗಿ ಮುಂದೆ ಅವನ ಸಂತಾನ ಮುಂದುವರೆದು ಸುಖ- ಸಂತೋಷದಿಂದಿದ್ದರು.

ಶ್ರೀ ಕೃಷ್ಣನು ನಂದಗೋಪನನ್ನು ವೈಕುಂಠಕ್ಕೆ ಕರೆದು ಕೊಂಡು ಹೋಗಿ ಹಿಂತಿರುಗಿ ಬಂದಾಗ ವೈಕುಂಠದ ವರ್ಣನೆ ಮಾಡುತ್ತಾನೆ. ಆವಾಗ ಊರಿನ ಗೋಪಾಲಕರು ತಮಗೂ ವೈಕುಂಠ ದರ್ಶನ ಮಾಡಿಸಬೇಕೆಂದು ಆಗ್ರಹಿಸಿ ದಾಗ ಕೃಷ್ಣನು ಅವರೆಲ್ಲರಿಗೂ ಯಮುನಾ ನದೀ ತೀರ ದಲ್ಲಿರುವ ಬ್ರಹ್ಮಕುಂಡ ಎಂಬಲ್ಲಿ ಮುಳುಗಿ ಬರಲು ಹೇಳು ತ್ತಾನೆ. ಆಗ ಅವರಿಗೆಲ್ಲಾ ವೈಕುಂಠ ವೈಭೋಗ ಗೋಚರಿ ಸುತ್ತದೆ. ಆ ದಿನವೇ ವೈಕುಂಠ ಏಕಾದಶಿಯಾಗಿದ್ದು ಏಳೇಳು ಜನ್ಮಗಳ ಪಾಪವನ್ನು ಕಳೆದು ಪುಣ್ಯ ಪ್ರಾಪ್ತವಾಗುತ್ತದೆ.

ಮುರಾ ಎಂಬ ರಾಕ್ಷಸನು ದೇವತೆಗಳಿಗೆ ಬಹಳ ಕಷ್ಟ ಕೊಡುತ್ತಿದ್ದನು. ಇದರಿಂದ ನೊಂದ ದೇವತೆಗಳು ವಿಷ್ಣುವಿ ನಲ್ಲಿ ಮೊರೆಹೋದಾಗ ಸ್ತ್ರೀ ವೇಷಧರಿಸಿ ಮುರನನ್ನು ಶ್ರೀ ಹರಿ ಕೊಲ್ಲುತ್ತಾನೆ. ಆ ಸ್ತ್ರೀ ಗೆ ವಿಷ್ಣುವು ವೈಕುಂಠ ಏಕಾದಶಿ ಪ್ರೀತಿ ಪಾತ್ರಳಾಗೆಂದು ವರ ಕೊಡುತ್ತಾನೆ.

ಮಹಾಭಾರತದಲ್ಲಿ ಬರುವ ಭೀಷ್ಮಾಚಾರ್ಯರು ತಮ್ಮ ಮರಣ ಉತ್ತರಾಯಣ ಕಳೆದು ದಕ್ಷಿಣಾಯನದಲ್ಲಿ ಬರ ಲೆಂದು ವಿಷ್ಣು ಸಹಸ್ರನಾಮ ಕೇಳುತ್ತಾ ವೈಕುಂಠ ಏಕಾದಶಿ ಯಂದೇ ಮರಣ ಹೊಂದಿ ವೈಕುಂಠಕ್ಕೆ ಹೋಗುತ್ತಾರೆ. ಒಂದು ವರ್ಷದಲ್ಲಿ ಬರುವ ಒಟ್ಟು 24 ಏಕಾದಶಿವ್ರತ ಮಾಡಲು ಆಗದವರು ವೈಕುಂಠ ಏಕಾದಶಿ ಆಚರಿಸಿದರೆ ಸಾಕು. ಎಲ್ಲಾ ಏಕಾದಶಿಗಳ ಫಲ ಪ್ರಾಪ್ತವಾಗುತ್ತದೆ. ಅಶಕ್ತರು ಏನೂ ಮಾಡುವುದು ಬೇಡ.

ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ "ನಮಃ ಶಾಂತಾಯ ವಾಸುದೇವಾಯ ನಮಃ" ಎಂದು ಒಂದು ಬಾರಿ ಹೇಳಿ ದರೂ ಸಾಕು. 1000 ಬಾರಿ ಮಾಡಿದ ಫಲ ಸಿಗುತ್ತದೆ. ಆದ್ದರಿಂದ "ವೈಕುಂಠಏಕಾದಶಿ" ಯಂದು ಭಗವಂತನ ನಾಮಸ್ಮರಣೆ, ಧ್ಯಾನ ಸತ್ಸಂಗ ಸುವಿಚಾರಗಳೊಂದಿಗೆ ತನ್ಮಯರಾಗಿ ಭಗವಂತ ನೊಲುಮೆಗೆ ಪಾತ್ರರಾಗೋಣ. ಸದಾ ಸ್ಮರಿಸೋಣ -

"ಓಂ ನಮೋ ಭಗವತೇ ವಾಸುದೇವಾಯ" ನಮ್ಮ ಉಸಿರಿನೊಂದಿಗೆ ಇದನ್ನೂ ಅನುಸಂಧಾನ ಮಾಡೋಣ.

## ತಿರುಮಲೆ ತಿರುಪತಿ ದೇವಸ್ಥಾನಗಳು

# ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸ ಲಾಗಿದೆ.**

**1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತ ಬಾರದು.**

**3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲ ಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಆಸ್ತಮಾ ಹೆಚ್ಚಾಗಬಹುದು.**

**4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯ ವನ್ನು ಕಾಪಾಡಿಕೊಳ್ಳಬಹುದು.**

**5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದು ಕೊಳ್ಳಿ. ಅಲಿಪಿರಿ ನಡೆದುಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.**

**6. ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.**

**7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.**



# ಜೀವನ ಸಾರ್ಥಕತೆಗೆ ಮಾರ್ಗದರ್ಶಿ – ಮಾರ್ಗಶಿರ ಮಾಸ

– ಶ್ರೀಮತಿ ವಾರುಣಿ ಹೊನ್ನಾಳಿ
99160 22982

ಭಾರತೀಯ ಸನಾತನ ಹಿಂದೂ ಪಂಚಾಂಗದ 9 ನೇ ಮಾಸವೇ ಮಾರ್ಗಶಿರ. ಉಳಿದೆಲ್ಲ ತಿಂಗಳು ಒಂದೊಂದು ದೇವರು, ದೇವಿ, ಶಕ್ತಿ , ಸಂಪ್ರದಾಯ, ಮಂಗಳ ಸ್ನಾನ ಮತ್ತು ದೈವಿಕ ಆರಾಧನೆಗಳಿಗೆ ಮನ್ನಣೆ ನೀಡಿವೆ. ಇದರಿಂದ ಭಗವಂತನ ಒಲುಮೆಗೆ ಪಾತ್ರವಾಗುವ, ಬದುಕನ್ನು ಪಾವನಗೊಳಿಕೊಳ್ಳುವ ಪ್ರಕ್ರಿಯೆಗೆ ಪ್ರೇರಕವಾಗಿವೆ. ಆದರೆ ಮಾರ್ಗಶಿರ ಹಾಗಲ್ಲ. ಸ್ವತಃ ಭಗವಾನ್‌ನಾರಾಯಣನು "ನಾನೇ ಈ ಮಾಸವಾಗಿದ್ದೇನೆ" ಎಂದು ಹೇಳಿ ಬಿಟ್ಟಿದ್ದಾನೆ. ಸಂಪೂರ್ಣ ಮಾಸದಲ್ಲಿ ಅವನಿಗೆ ಅವನೇ ತುಂಬಿಕೊಂಡಿರುವಾಗ ಇದಕ್ಕಿಂತ ಭಾಗ್ಯ ಇನ್ನೇನುಬೇಕು?

**ಬೃಹತ್ಸಾಮ ತಥಾ ಸಾಮ್ನಾಂ**
**ಗಾಯತ್ರೀ ಛಂದಸಾಮಹಂ**
**ಮಾಸಾನಾಂ ಮಾರ್ಗಶೀರ್ಷೋಹಂ**
**ಋತೂನಾಂ ಕುಸುಮಾಕರಃ.....**

ವೇದದ ಸ್ತೋತ್ರಗಳಲ್ಲಿ ನಾನು ಬೃಹತ್ ಸಾಮ (ಸಾಮ ವೇದದ ಭಾಗ). ಕಾವ್ಯಾತ್ಮಕವಾಗಿರುವ ಮಂತ್ರಗಳಲ್ಲಿ ನಾನು ಗಾಯತ್ರಿ ಮಂತ್ರ. ಮಾಸಗಳಲ್ಲಿ ನಾನು ಮಾರ್ಗಶಿರ. ಋತುಗಳಲ್ಲಿ ಕುಸುಮ-ಪುಷ್ಪಋತು ಎಂದರೆ ವಸಂತನಾಗಿದ್ದೇನೆ ಎಂದು ಸ್ವತಃ ಭಗವಂತನೇ ಉದ್ಘೋಷ ಮಾಡಿದ್ದಾನೆ. ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಗೀತೋಪದೇಶದಲ್ಲಿ ಹೇಳಿದ ಮಾತಿದು. (ವಿಭೂತಿಯೋಗ. ಶ್ಲೋಕ 35)

ನಾರಾಯಣನಿಗೆ ಇರುವ ಸಾವಿರ ಹೆಸರುಗಳಲ್ಲಿ ಮಾರ್ಗಃ ಎಂಬುದೂ ಒಂದು. ಹಾಗಾಗಿ ಹರಿಯೇ ಸರ್ವೋತ್ತಮನೆಂದು "ನಂಬಿ ಬದುಕಿರೋ...."ಎಂದರು ದಾಸವರೇಣ್ಯರು. ಎಲ್ಲರೂ ಇದನ್ನು ಅರಿತು ಅನುಸರಿಸಿದರೆ ಜೀವನ ಸಾರ್ಥಕ ಎಂದರು ಶಾಸ್ತ್ರಕಾರರು.ಈ ಎಲ್ಲ ಸಂದೇಶ ಸೂಚನೆ ಮತ್ತು ಸತ್ವಯುತ ಆಚರಣೆಗಳಿಗೆ ಅನ್ವರ್ಥವಾಗುವ ಈ ಮಾಸದ ನಿಯಾಮಕ ದೇವನೂ ಕೇಶವನೇ ಆಗಿರುವುದು ಇನ್ನೊಂದು ಧನ್ಯತೆ. 'ದೋಷರಾಶಿಗಳನು ನಾಶ ಮಾಡೋ ಕೇಶವಾ.."ಎಂದು ಪ್ರಾರ್ಥಿಸುತ್ತ ಈಶನ ಚರಣ ಭಜನೆಯನ್ನು ಆಸೆಯಿಂದ ಮಾಡಲು ಇದು ಸಕಾಲ.

ಮಾಸದ ಪರ್ಯಂತ ಬರುವ ಸ್ಕಂದಷಷ್ಠಿ. ಭೀಮ ಜಯಂತಿ,ಗೀತಾಜಯಂತಿ, ಹನುಮದ್ ವ್ರತ, ದತ್ತ ಜಯಂತಿ, ವಿಷ್ಣು ದೀಪೋತ್ಸವ, ಧನುರ್‌ಮಾಸ ಪೂಜಾ,ಎಳ್ಳಮಾವಾಸ್ಯೆ-ಮಾಸ ನಿಯಾಮಕನಿಂದ, ಅವನಿಗಾಗಿ ಮತ್ತು ಅವನದ್ದೇ ಆಗಿವೆ.

ವಿಷ್ಣು ಸಹಸ್ರನಾಮವೂ ಮಾರ್ಗಶಿರದ ಮಹತ್ವವನ್ನು "ರಾಮೋ ವಿರಾಮೋ ವಿರಜೋ ಮಾರ್ಗೋ"... ಎನ್ನುವ ಶ್ಲೋಕಗಳಲ್ಲಿ ಪ್ರತಿಬಿಂಬಿಸಿದೆ. ಮಾರ್ಗಶಿರ ಎಂದರೆ ಅದು ಹೇಮಂತ ಋತು ಅಡಿ ಇಡುವ ಸಮೃದ್ಧ ಕಾಲ. ಅನಂತ ಪುಣ್ಯಗಳ ರಾಶಿಯನ್ನೇ ಲೋಕದ ಜನರಿಗೆ ನೀಡುವ ಪಾವನ ಮಾಸ. ಚುಮು ಚುಮು ಚಳಿಯ ನಡುವೆ ಮಾಸದ ಉದ್ದಕ್ಕೂ ಬರುವ ಹಬ್ಬ. ಹರಿದಿನಗಳು ನಮ್ಮ ಬದುಕಿಗೆ **'ಮಾರ್ಗದರ್ಶಿ'** ಆಗಿವೆ. ಮಾತ್ರವಲ್ಲ, ಧರ್ಮ ಸೂಕ್ಷ್ಮತೆ ನಡುವೆಯೇ ಆರೋಗ್ಯ ಸೂತ್ರವನ್ನೂ ಬೋಧಿಸಿವೆ.

### ಬೆಳಕಿನ ಛಾಯೆಯಡಿ ಅರಳುವ ಕಾಲ

ಲೋಕದ ಎಲ್ಲ ಮನೆಗಳಲ್ಲಿ ದೀಪಗಳನ್ನು ಬೆಳಗಿ ಮನಕ್ಕೆ ಹೊಸ ಬೆಳಕಿನ ದಿಗಂತವನ್ನೇ ತಂದು ತೋರಿದ ಕಾರ್ತಿಕದ ನಂತರ ಅಡಿ ಇಡುವುದೇ ಮಾರ್ಗಶಿರ. ಅಜ್ಞಾನವೆಂಬ ಕತ್ತಲೆ ದೂರವಾದ ನಂತರ ಹತ್ತಿರವಾಗುವುದೇ ಭಗವದ್ ಚಿಂತನೆ. ಆತ್ಮ ಸಾಕ್ಷಾತ್ಕಾರ - ಮೋಕ್ಷ ಸಾಧನೆ. ಆ ದಿಸೆಯಲ್ಲಿ ಮಾರ್ಗಶಿರವು ಭಗವಾನ್ ವಿಷ್ಣುವಿಗೆ ಅತ್ಯಂತ ಪ್ರಿಯಮಾಸ. ಈ ಮಾಸದ ಹುಣ್ಣಿಮೆಯಂದು ಮೃಗಶಿರ ನಕ್ಷತ್ರ ಇರುವ ಕಾರಣ ಮಾಸಕ್ಕೆ ಮಾರ್ಗಶಿರ ಎಂಬ ಹೆಸರು ಬಂತು. ಸೂರ್ಯದೇವ ಧನುರಾಶಿಗೆ ಪ್ರವೇಶಿಸುವ ಪರ್ವಕಾಲ. ಇದನ್ನು ಧನು ಸಂಕ್ರಾಂತಿ ಎಂದೂ ಹೇಳುತ್ತಾರೆ.

### ಗೀತೆ ಬೋಧನೆಯಾದ ಸಂದರ್ಭ:

ಮಹಾಭಾರತದ ರಣರಂಗದಲ್ಲಿ ಶ್ರೀ ಕೃಷ್ಣನಿಂದ ಅರ್ಜುನನಿಗೆ ಭಗವದ್ ಗೀತೆ ಬೋಧನೆ ಆಗಿದ್ದೂ, ವಿಶ್ವರೂಪ ದರ್ಶನವಾಗಿದ್ದು ಇದೇ ಮಾಸದಲ್ಲಿ, ಹಾಗಾಗಿ ಮಾರ್ಗಶಿರ ಶುಕ್ಲ ಏಕಾದಶಿ **'ಗೀತಾ ಜಯಂತಿ'** ಆಚರಣೆ ನೆರವೇರುತ್ತದೆ. ಆ ದಿನವನ್ನು ಮೋಕ್ಷದಾ ಏಕಾದಶಿ ಎಂದು ಹೇಳುತ್ತಾರೆ. ಜೀವಿಗಳ ಭವದ ಸಂಕಟ ಬಂಧನಗಳಿಂದ ಬಿಡುಗಡೆ ಮಾಡಿ ಮನವು ಮೋಕ್ಷ ಸಾಧನೆ ಕಡೆಗೆ ಹೆಜ್ಜೆ ಇಡುವಂತೆ ಪ್ರೇರಣೆ ಮಾಡುವ ವಿಶೇಷ ದಿನವಿದು. ಅಂದ



ಹಾಗೆ ಮಾರ್ಗಶಿರ ಕೃಷ್ಣ ಏಕಾದಶಿಗೂ ತನ್ನದೇ ಆದ ಮಾನ್ಯತೆ ಇದೆ. ಆ ದಿನವನ್ನು ಸಫಲಾ ಅಥವಾ ವಿಮಲಾ ಏಕಾದಶಿ ಎನ್ನುತ್ತಾರೆ. ಅಂದು ಮಾಡುವ ಉಪವಾಸ ಆಚರಣೆ ಮನದ ಬಯಕೆಗಳನ್ನು ಈಡೇರಿಸುತ್ತದೆ ಎನ್ನುತ್ತಾರೆ ಹಿರಿಯರು.

### ಸಪ್ತಗಿರಿ ಒಡೆಯನೊಂದಿಗೆ ನಂಟು:

ಸಪ್ತಗಿರಿ ಒಡೆಯ, ಏಡುಕೊಂಡಲವಾಡ, ವೆಂಕಟರಮಣನಿಗೂ ಮಾರ್ಗಶಿರಕ್ಕೂ ಒಂದು ಅವಿನಾಭಾವ ಸಂಬಂಧ ಇದೆ ಎಂಬುದೂ ಇನ್ನೊಂದು ವಿಶೇಷ. ತಿರುಮಲೆ ಬೆಟ್ಟದಲ್ಲಿ ನೆಲೆಸಿರುವ ಶ್ರೀನಿವಾಸನು ವೆಂಕಟೇಶನ ರೂಪದಲ್ಲಿ ಭೂಮಿಯಲ್ಲಿ ಅವತರಿಸಿದಾಗ ಭೂದೇವಿಯು ಆಂಡಾಳ್ ಎಂಬ ಸಾಮಾನ್ಯ ಕನ್ಯೆ ನಿತ್ಯ ವೆಂಕಟೇಶನಿಗಾಗಿ ಹೂಮಾಲೆ ಸಿದ್ಧ ಮಾಡುತ್ತಿದ್ದಳಂತೆ. ಅದನ್ನು ತಾನೇ ಮೊದಲು ಧರಿಸಿ, ಅಂದವಾಗಿ ಕಾಣುತ್ತದೆಂದು ಖಚಿತವಾದ ನಂತರ ವೆಂಕಟೇಶನ ಕೊರಳಿಗೆ ಸಮರ್ಪಿಸುತ್ತಿದ್ದಳಂತೆ. (ಶಬರಿಯು ರಾಮನಿಗೆ ಹಣ್ಣು ರುಚಿ ನೋಡಿ ಸಮರ್ಪಿಸಿದಂತೆ) ಈ ಮಾಸದಲ್ಲೇ ತನ್ನ ಪ್ರಿಯ ವೆಂಕಟೇಶನಿಗೆ ತಮಿಳಿನಲ್ಲಿ ತಿರುಪ್ಪಾವೈ - 30 ಕವಿತೆಯ ಗ್ರಂಥ ರಚಿಸಿದ್ದಳಂತೆ. ಶ್ರೀವೈಷ್ಣವರು ಇಂದಿಗೂ ನಾಲಾಯರ್ ತಿರುಪ್ಪಾವೈ ಕೃತಿಯನ್ನು ಈ ಮಾಸದಲ್ಲಿ ಪಠಿಸಿ ದೇವರಿಗೆ ಸಮರ್ಪಿಸುವ ಸಂಪ್ರದಾಯವಿದೆ. ಆಂಡಾಳ್ ಪ್ರಬಂಧ ಸಾಲುಗಳನ್ನೇ ಬಳಸಿ ಸ್ವಾಮಿಗೆ ಲಾಲಿ, ಸುಪ್ರಭಾತ ಹೇಳುತ್ತಾರೆ. ಶ್ರೀನಿವಾಸನನ್ನು ಅರ್ಚಿಸಿ ಆರಾಧಿಸುವುದು. ಮೆಚ್ಚಿಸುವುದೂ ಭಕ್ತಿ-ಭಾವದ ಉತ್ತುಂಗವೇ ಆಗಿದೆ. ಮಾರ್ಗಶಿರ ಮಾಸದಲ್ಲಿ ಹಲವರು ಲಕ್ಷ್ಮಿ ಪೂಜೆ ಮಾಡುತ್ತಾರೆ. ಈ ಮಾಸದಲ್ಲಿ ಗುರುವಾರವೂ ಮಹತ್ವವೇ. ವಿಷ್ಣುವಿಗೆ ಅತ್ಯಂತ ಪ್ರಿಯವಾದ ದಿನದಂದು ಲಕ್ಷ್ಮೀ ಪೂಜಿಸುವುದರಿಂದ ಮಾತೆ ಕಾರುಣ್ಯಕ್ಕೆ ಪಾತ್ರರಾಗಬಹುದು. ಇದರಿಂದ ಶ್ರೀನಿಧಿ ಎಂದರೆ ಸಂಪತ್ತು ಹರಿದು ಬರುತ್ತದೆ ಎನ್ನಲಾಗಿದೆ. ವಿವಾಹ ಕಾರ್ಯಕ್ಕೆ ತೊಡಕು ಇದ್ದರೆ ಗುರುವಾರದಂದು ವಿಷ್ಣು, ಜಗನ್ಮಾತೆಯನ್ನು ಭಕ್ತಿಯಿಂದ ಅರ್ಚಿಸಬೇಕು. ಆಗ ಕಲ್ಯಾಣ ಸರಾಗವಾಗುತ್ತದೆ. ಮಾರ್ಗಶಿರ ಮಾಸದಲ್ಲಿ ವಿಷ್ಣು ದೇಗುಲಗಳು ಭಕ್ತರಿಂದ ತುಂಬಿರುತ್ತವೆ.

### ದ್ವಾಪರದಲ್ಲಿ ಇದು ನೂತನ ವರ್ಷ:

ದ್ವಾಪರಯುಗದಲ್ಲಿ ಇದು ಅಗ್ರ ಮಾಸವಾಗಿತ್ತು. ಏಕೆಂದರೆ ಮೃಗಶಿರಾ ನಕ್ಷತ್ರಕ್ಕೆ ಅಗ್ರಹಾಯನಿ ಎಂಬ ಹೆಸರೂ ಇದೆ. ಹಾಗಾಗಿ ಈ ಮಾಸಕ್ಕೆ ಅಗ್ರಹಾಯನ ಎನ್ನುತ್ತಾರೆ. ಅಗ್ರ ಎಂದರೆ ಹಿರಿಯ, ಆಯನ-ಬದಲಾವಣೆ. ಬದುಕಿನ ದೊಡ್ಡ ಸುಧಾರಣೆಗಳಿಗೆ ಮಾಸದ ಧಾರ್ಮಿಕ ವಿಧಿಗಳು ಪ್ರೇರಕವಾಗಿದೆ. ಆದ ಕಾರಣ ದ್ವಾಪರದಲ್ಲಿ ಇದು ಮೊದಲ ಮಾಸವಾಗಿತ್ತು. ಹೊಸ ವರ್ಷದ ಆರಂಭ ಎಂದರೆ ಆಗ ಚೈತ್ರ ಅಲ್ಲ, ಮಾರ್ಗಶಿರವೇ ಆಗಿತ್ತು.

### ದೇವರ ಕಲ್ಯಾಣಕ್ಕೆ ಸಾಕ್ಷಿ:

ಮಾರ್ಗಶಿರ - ಭಾರತೀಯ ಪೌರಾಣಿಕ ಪರಂಪರೆಯ ಎರಡು ಪ್ರಮುಖ ಕಲ್ಯಾಣ (ವಿವಾಹ)ಕ್ಕೆ ಸಾಕ್ಷಿಯಾಗಿ ನಿಂತಿದೆ. ಒಂದು ರುದ್ರ-ಪಾರ್ವತೀ ಕಲ್ಯಾಣ. ಇದಕ್ಕೆ ಶಿವಪುರಾಣ. ರುದ್ರ ಸಂಹಿತೆಗಳು ಉಲ್ಲೇಖ ನೀಡಿವೆ. ಇನ್ನೊಂದು ರಾಮ-ಸೀತಾ ಕಲ್ಯಾಣ. ಮಾರ್ಗಶಿರ ಶುಕ್ಲ ಪಂಚಮೀಯೇ ಈ ಶುಭ ದಿನ. ಮೂಲ ವಾಲ್ಮೀಕಿ ರಾಮಾಯಣ ಇದಕ್ಕೆ ಆಧಾರವಾಗಿದೆ. ಶೈವ-ವೈಷ್ಣವ ಪಂಥೀಯರಿಬ್ಬರೂ ಮಾರ್ಗಶಿರ ಎಂದರೆ ಕಲ್ಯಾಣ-ಮಂಗಳಕರ ತಿಂಗಳಾಗಿದೆ.

### ಈ ಮಾಸದಲ್ಲಿ ಯಾರನ್ನು ಪೂಜಿಸಬೇಕು?

ಮಾರ್ಗಶಿರ ಮಾಸದಲ್ಲಿ ವಿಷ್ಣುವಿನ ಆರಾಧನೆ ಶ್ರೇಷ್ಠ. ಅಂತೆಯೇ ಜಗನ್ಮಾತೆ ಮಹಾಲಕುಮಿ, ಸೂರ್ಯ, ಆಂಜನೇಯ, ದತ್ತಾತ್ರೇಯ ಮತ್ತು ಸುಬ್ರಹ್ಮಣ್ಯಸ್ವಾಮಿ (ಕಾರ್ತಿಕೇಯ)ಯನ್ನು ಪೂಜಿಸುವುದು ಮಂಗಳಕರವಾಗಿದೆ. ಈ ಮಾಸದಲ್ಲಿ ಗರಿಷ್ಠ ಮಟ್ಟದಲ್ಲಿ ಗೀತಾಪಠಣ ಮಾಡುವುದರಿಂದ ಸಕಲ ಪಾಪನಿವಾರಣೆಯಾಗುತ್ತವೆ ಎಂದು ನಂಬಲಾಗಿದೆ. ಈ ಪವಿತ್ರ ದಿನದಂದು ಭಗವದ್ಗೀತೆಯ ಕನಿಷ್ಠ ಒಂದು ಅಧ್ಯಾಯವನ್ನಾದರೂ ಓದಿ ಅದರ ಅರ್ಥವನ್ನು ತಿಳಿಯುವುದು ಪುಣ್ಯಪ್ರದ.



ಮಾಸದ ಗುರುವಾರಗಳಂದು ಮಹಾ ಲಕ್ಷ್ಮೀ ಆರಾಧಿಸಿ ಆಕೆಯ ಒಲುಮೆಗೆ ಪಾತ್ರರಾಗಲೂ ಸುವರ್ಣ ಅವಕಾಶ ಇದೆ. ಇದರಿಂದ ವಧು-ವರರಿಗೆ ಶೀಘ್ರ ಕಂಕಣ ಬಲ ಕೂಡಿ ಬರುತ್ತದೆ. ಹಲವರು ಹಳದಿ ದಾರ ಧರಿಸಿ ಹನುಮದ್ ವ್ರತವನ್ನು ಮಾಡಿ ಜ್ಞಾನ ಧೈರ್ಯ, ಆರೋಗ್ಯ, ಸಂಪತ್ತು, ಸಮೃದ್ಧಿ ಸಾಧಿಸುತ್ತಾರೆ. (ಧರ್ಮರಾಜನಿಗೆ ವೇದವ್ಯಾಸರು ಹನುಮದ್ ವ್ರತದ ನಿಯಮ ಬೋಧಿಸಿದ್ದರು ಎನ್ನುತ್ತದೆ ಮಹಾಭಾರತ) ಮಾರ್ಗಶಿರ ಹುಣ್ಣಿಮೆ ದತ್ತಾತ್ರೇಯ ಜಯಂತಿ. ತ್ರಿಮೂರ್ತಿ ಸ್ವರೂಪದಲ್ಲಿ ಭಗವಾನ್ ವಿಷ್ಣು ಅವತಾರ ತೋರಿದ ಮಹಾ ದಿನ.

### ಕಲಾತ್ಮಕ ನೋಟಗಳು :

ಧನುರ್‌ಮಾಸದಲ್ಲಿ ಒಡಿಶಾ ಮತ್ತು ಆಂಧ್ರದ ವನಿತೆಯರು **'ದ್ವಾರಂ ಮುಗ್ಗುಲು'** ಎಂಬ ಕಲಾತ್ಮಕ ರಂಗೋಲಿಯನ್ನು ಮನೆ ಮುಂದೆ ರಚಿಸಿ ದೇವ - ಗುರುಗಳನ್ನು ಆಹ್ವಾನಿಸುತ್ತಾರೆ. ಧನುರ್ಮಾಸದಲ್ಲಿ **'ತಿರುಪ್ಪಾವೈ'** ಪಾರಾಯಣವನ್ನು ವಿಷ್ಣು ದೇಗುಲಗಳಲ್ಲಿ ಮಾಡುತ್ತಾರೆ. ಸ್ಕಂದಷಷ್ಠಿ ಮರುದಿನ ಮಿತ್ರ ಸಪ್ತಮಿಯಂದು ಸೂರ್ಯಾರಾಧನೆಗೆ ಪುಣ್ಯಕರ.

### ಹುಗ್ಗಿ ಸೇವನೆ ಆರೋಗ್ಯಕ್ಕೂ ಉತ್ತಮ :

ಧನುರ್ಮಾಸದಲ್ಲಿ ಎಲ್ಲಾ ದೈವಗಳೂ ತಮ್ಮ ಆರಾಧ್ಯ ದೇವನಿಗೆ ಸ್ವತಃ ತಾವೇ ಬ್ರಾಹ್ಮೀ ಮುಹೂರ್ತದಲ್ಲಿ ಪೂಜೆ ಮಾಡುತ್ತಾರಂತೆ. ಹಾಗಾಗಿ ಇದನ್ನು ಕರ್ಮಮಾಸ ಎಂದೂ ಹೇಳುತ್ತಾರೆ. ಡಿಸೆಂಬರ್ - ಜನವರಿ ತಿಂಗಳಾದ ಕಾರಣ ಚಳಿಯ ಪ್ರಭಾವ ಈಗ ಹೆಚ್ಚು. ಚಳಿಗಾಲದಲ್ಲಿ ಚರ್ಮ ಶುಷ್ಕವಾಗುತ್ತದೆ. ಅದನ್ನು ತಡೆದುಕೊಳ್ಳಲು ಉಣ್ಣೆ ವಸ್ತ್ರಧಾರಣೆ, ತೈಲಗಳನ್ನು ಲೇಪಿಸುವುದು ಸಹಜ. ಧನುರ್ಮಾಸದ ಆಚರಣೆ ಮಾಡುವ ವೈದಿಕರು ಪ್ರಾತಃಕಾಲ ಎದ್ದು ದೇವರ ಪೂಜೆ, ಹುಗ್ಗಿ ನೈವೇದ್ಯ ಮಾಡಿ ಪ್ರಸಾದ ಸೇವನೆ ಮಾಡುವುದು ಆರೋಗ್ಯದ ಕಾಳಜಿಗೆ ಪ್ರತೀಕವಾಗಿದೆ. ಹುಗ್ಗಿ - ಪೊಂಗಲ್‌ನಲ್ಲಿ ಹೆಸರುಬೇಳೆ, ಕಡಲೇಬೀಜ,ಅವರೆ, ಮೆಣಸು, ಜೀರಿಗೆ, ತುಪ್ಪ ಇತ್ಯಾದಿ ಬಳಸುವುದು ನಮ್ಮ ದೇಹದ ಉಷ್ಣತೆ ಪಾಲನೆಗೆ ಸಹಕಾರಿಯಾಗಿವೆ. ಹಿರಿಯರು ಹೇಳಿದ ಆಚಾರ, ಆಹಾರಗಳು ನಮಗೆ ದೀರ್ಘ ಆಯಸ್ಸು ನೀಡುತ್ತವೆ. ಅನ್ಯ ಆಹಾರಕ್ಕೆ ಮರುಳಾಗದೇ ದೇವರಿಗೆ ನೈವೇದ್ಯವಾದ, ಮಾಸಧರ್ಮ ಹೇಳುವುದನ್ನೇ ಮಹಾಪ್ರಸಾದ ಎಂದು ಸೇವಿಸಿ ಎಂದು ತಿಳಿ ಹೇಳುವುದೇ ಧನುರ್ಮಾಸದ ಆಶಯ.

### ಮುಂಜಾನೆ ಎದ್ದು ಗೋವಿಂದ ಎನ್ನಿ :

ಧನುರ್ ಮಾಸದಲ್ಲಿ ಚಳಿ ಎಂದು ಹೊದ್ದು ಮಲಗದೇ ಬೇಗ ಎದ್ದು, ದೇಹ ದಂಡಿಸಿ ನದಿ ಸ್ನಾನ ಮಾಡಿ ದೇವತಾ ಕಾರ್ಯಗಳನ್ನು ಮಾಡಿದರೆ ಇಷ್ಟಾರ್ಥ ಫಲಿಸುತ್ತವೆ. ಹಾಗಾಗಿಯೇ ಅಯ್ಯಪ್ಪ ಸ್ವಾಮಿ ಭಕ್ತರು ಕಠಿಣವ್ರತಗಳನ್ನು ಇದೇ ಸಂದರ್ಭದಲ್ಲಿ ಆಚರಣೆ ಮಾಡುತ್ತಾರೆ. "ಧನುಷಿ ಧನುರಾಕಾರಃ ಮಕರೇ ಕುಂಡಲಾಕೃತೀಃ"... ಚಳಿ ನಿವಾರಣೆಗೆ ಮಾನವರು ಬಿಲ್ಲಿನಂತೆ ಬಾಗಿ ಮಲಗಲು ಬಯಸುತ್ತಾರೆ. ಇದರಿಂದ ವಿಸರ್ಜನಾ ಕ್ರಿಯೆಗೆ ತೊಡಕಾಗಿ ಅಲರ್ಜಿಗಳು ಎರಗುತ್ತವೆ ಎನ್ನುತ್ತದೆ ಆಯುರ್ವೇದ ಶಾಸ್ತ್ರ. ಹಾಗಾಗಿ ಬ್ರಾಹ್ಮೀ ಮುಹೂರ್ತದಲ್ಲಿ ಸ್ನಾನ, ಪೂಜೆಗೆ ಮಹತ್ವ ನೀಡಲಾಗಿದೆ. ಅಯ್ಯಪ್ಪನ ಭಕ್ತರು ಸೂರ್ಯೋದಯಕ್ಕೆ ಮುನ್ನ ನದಿ ಸ್ನಾನ ಮಾಡುವುದು, ಕಪ್ಪು ವಸ್ತ್ರ ಧರಿಸುವುದರ ಹಿಂದೆ ವೈಜ್ಞಾನಿಕ ಕಾರಣವೂ ಅಡಕವಾಗಿದೆ.

### ಗೀತಾ ಪಠಣದಿಂದ ಅನಂತ ಫಲ :

ಮಾರ್ಗಶಿರ ಪರ್ಯಂತ ಶ್ರೀಮದ್ ಭಗವದ್ಗೀತೆಯನ್ನು ಪಠಿಸಬೇಕು. ಗರಿಷ್ಠ ಸಮಯದವರೆಗೆ ಕೃಷ್ಣನನ್ನು ಆರಾಧಿಸಬೇಕು. ಅಥವಾ "ಓಂ ನಮೋ ಭಗವತೇ ವಾಸುದೇವಾಯ" ಮಂತ್ರವನ್ನು ಮಾಸ ಪೂರ್ಣ ಜಪಿಸಬೇಕು. ತುಳಸಿ ದಳಗಳನ್ನು ಕೃಷ್ಣನಿಗೆ ಅರ್ಪಿಸಿ, ತೀರ್ಥ ಸಹಿತ ಸೇವಿಸಬೇಕು. ಆಗ ಅನಂತ ಶುಭ ಫಲ ಎನ್ನುತ್ತಾರೆ ಹಿರಿಯರು. ಈ ಮಾಸದಲ್ಲಿ ದಾನದೊಂದಿಗೆ ನದಿ ಸ್ನಾನಕ್ಕೂ ಹೆಚ್ಚಿನ ಮಹತ್ವವಿದೆ. ಈ ತಿಂಗಳು ನದಿಗಳಲ್ಲಿ ಸ್ನಾನ ಮಾಡುವ ಅವಕಾಶ ಸಿಕ್ಕರೆ ತಪ್ಪದೇ ಮಾಡಿ, ಶಿವ ಪುರಾಣವು ಬೆಳ್ಳಿ ದಾನಕ್ಕೆ ಸೂಚಿಸಿದರೆ ವಿಶ್ವೇಶ್ವರ ಸಂಹಿತೆ ಅನ್ನದಾನಕ್ಕೆ ಮಹತ್ವ ನೀಡಿದೆ.

### ಏನಿದು ಧನುರ್ಮಾಸ?

ಸೂರ್ಯನು ಧನುರಾಶಿಯಲ್ಲಿ ಗೋಚರಿಸುವ ಸಂದರ್ಭವೇ ಧನುರ್ಮಾಸ. ಧನುರ್ಮಾಸವೂ ಮಾರ್ಗಶಿರದ ಒಂದು ಭಾಗವೇ ಆಗಿದೆ. ಚಳಿಯ ಕಚಗುಳಿ ತಾಳಲಾರದ ಮಾನವ ತನ್ನ ದೇಹವನ್ನು ಬಿಲ್ಲಿನಂತೆ (ಧನುರ್)ಬಾಗಿಸಿ ಮುದುಡಿಕೊಂಡು ಮಲಗುವುದು ಈ ಸಂದರ್ಭದಲ್ಲಿ ವಿಶೇಷ. ಮಾರ್ಗಶಿರ ಮಾಸದ ಮಧ್ಯಂತರದಲ್ಲಿ ಪ್ರಾರಂಭವಾಗುತ್ತದೆ ಧನುರ್ಮಾಸ. ಧನುರ್ಮಾಸವನ್ನು ಧನುಮಾಸ, ಅಧ್ಯಾಯಮಾಸ, ಕೋದಂಡಮಾಸ, ಕಾರ್ತಿಕಮಾಸ, ಖಾರ್ಮಾಸ ಎಂದೂ ಹೇಳು

ತ್ತಾರೆ.ಸೂರ್ಯೋದಯಕ್ಕೆ ಮೊದಲೇ ಎದ್ದು. ಮಂಗಳ ಸ್ನಾನ ಮಾಡಿ ಬ್ರಾಹ್ಮೀಮುಹೂರ್ತದಲ್ಲಿ ದೇವತಾರಾಧನೆ ಮಾಡುವುದು ಈ ಮಾಸದ ನಿಯಮ. ವೆಂಕಟೇಶ ಸ್ತೋತ್ರ ಪಾರಾಯಣವು ಮಹತ್ತರ ಫಲ ನೀಡಲಿದೆ. ಅತಿಶಯ ಸಂಪತ್ತು ಪ್ರಾಪ್ತವಾಗುತ್ತದೆ. ಸೂರ್ಯ ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸಾಗಲು ಒಂದು ತಿಂಗಳ ಸಮಯ ಬೇಕು. ಹಾಗೆಯೇ ಸೂರ್ಯನು ಧನುರಾಶಿಯಲ್ಲಿರುವ ಈ ಅವಧಿಗೆ ಧನುರ್ಮಾಸ ಎನ್ನುತ್ತಾರೆ. ಧನು ರಾಶಿಯಲ್ಲಿ ಸೂರ್ಯ ಇರುವಾಗ ವಿಷ್ಣುವಿಗೆ ಒಂದು ದಿನ ಹುಗ್ಗಿ ನೈವೇದ್ಯ ಮಾಡಿದರೂ ಒಂದು ಸಾವಿರ ವರ್ಷ ದೇವರನ್ನು ಪೂಜೆ ಮಾಡಿದ ಫಲ ಲಭ್ಯ ಪಾಂಚರಾತ್ರಾಗಮ, ಅಗ್ನಿಪುರಾಣ ಮತ್ತು ಸ್ಮೃತಿ ಮುಕ್ತಾವಳಿಗಳು ಹೇಳಿವೆ. ಅದರಂತೆ ವೈದಿಕರು ಧನುರ್ಮಾಸದಲ್ಲಿ ನಿತ್ಯವೂ ಸೂರ್ಯೋದಯಕ್ಕೆ ಮುನ್ನ ಅಗ್ಗಿಷ್ಟಿಕೆಯಲ್ಲಿ ಕೆಂಡದ ಮೇಲೆ ಹುಗ್ಗಿ ಮಾಡಿ ದೇವರಿಗೆ ಸಮರ್ಪಣೆ ಮಾಡಿ ಸ್ವೀಕರಿಸುತ್ತಾರೆ. ಪ್ರತಿ ಮಾಸಕ್ಕೂ ಒಂದಿಲ್ಲೊಂದು ಮಹತ್ವಪೂರ್ಣ ಆಚರಣೆ, ವ್ರತ, ಪದ್ಧತಿ ಅನುಷ್ಠಾನ ಇದ್ದೇ ಇರುತ್ತದೆ. ಅಂತೆಯೇ ಈ ಧನು ಮಾಸಕ್ಕೂ ಅದರದ್ದೇ ಆದ ಕೆಲವು ವಿಶೇಷತೆ ಭೂಷಣ ಪ್ರಾಯವಾಗಿದೆ.

**ಖಗೋಳ ವಿಜ್ಞಾನ ತೋರಿದ ಸತ್ಯ:**

ಧನುರ್ಮಾಸದಲ್ಲಿ ಭೂಮಿಯು ಸೂರ್ಯನಿಗೆ ಕಕ್ಷೆಯಲ್ಲಿ ಅತೀ ಸಮೀಪದಲ್ಲಿ ಇರುತ್ತದೆ. ಪೃಥ್ವಿಯ ಉತ್ತರದ ಭಾಗವು ಸೂರ್ಯನ ವಿರುದ್ಧ ದಿಕ್ಕಿಗೆ ಮುಖ ಮಾಡಿರುತ್ತದೆ. ಸೂರ್ಯ ಕಿರಣಗಳು ಭೂಮಿಗೆ ತಾಗುತ್ತಿದ್ದಂತೆ ಚದುರಿ ಹೋಗುತ್ತವೆ. ಹಾಗಾಗಿ ಭೂಮಿಯ ಈ ಭಾಗಕ್ಕೆ ಸೂರ್ಯನ ಉಷ್ಣ ತಲುಪುವುದಿಲ್ಲ. ಈ ಪರಿಣಾಮದಿಂದ ಚಳಿ ಹೆಚ್ಚಾಗುತ್ತದೆ ಎಂಬುದು ಖಗೋಳ ವಿಜ್ಞಾನ ತೋರಿಸಿದ ಸತ್ಯ ದರ್ಶನ.

**ಅನ್ನದಾನ ಮಹತ್ವ ದೊಡ್ಡದು :**

ಶಿವ ಪುರಾಣದ ವಿಶ್ವೇಶ್ವರ ಸಂಹಿತೆಯು ಮಾರ್ಗಶಿರದಲ್ಲಿ ಆಹಾರ ದಾನದಿಂದ ಅನಂತ ಪುಣ್ಯ ಪ್ರಾಪ್ತಿ ಎಂದು ಸಾರಿ ಹೇಳಿದೆ. “ಮಾರ್ಗಶೀರ್ಷೇ ಅನ್ನದಾಸ್ಯಾವ್ ಸರ್ವ ಮಿಷ್ಟಫಲಂ..” ಹಸಿದವರಿಗೆ ಆಹಾರ ಪದಾರ್ಥ ದಾನ ಮಾಡುವ ವ್ಯಕ್ತಿಯ ವಿವಿಧ ಕರ್ಮಗಳಿಂದ ಮುಕ್ತನಾಗುತ್ತಾನೆ ಎಂಬುದು ಸಂಹಿತೆಯ ಸಂದೇಶ. ಮಾರ್ಗಶಿರದಲ್ಲಿ ಮುಂಜಾನೆ ಶುದ್ಧ ಆಹಾರ ಸೇವಿಸಿ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಹಾರ ದಾನ ಮಾಡುವಾತ ಸಕಲ ಪಾಪದಿಂದ ಮುಕ್ತಿ ಪಡೆಯುತ್ತಾನೆ ಎಂದಿದೆ ಮಹಾಭಾರತದ ಅನುಶಾಸನ ಪರ್ವ. ಆದ್ದರಿಂದ ಈ ಮಾಸದಲ್ಲಿ ಹೆಚ್ಚಾಗಿ ದಾನ ಕಾರ್ಯಮಾಡಿ ಮಾಡಿಸಬೇಕು ಎಂಬುದು ಮಾಸದ ಸಂದೇಶ.



**ಸದ್ಗತಿ :**

ಮೃತರಾದ ಕುಟುಂಬದ ಬಂಧುಗಳ ಆತ್ಮದ ಶಾಂತಿಗಾಗಿ ವಿಶ್ವದ ದೇವತೆಗಳನ್ನು ಮಾರ್ಗಶಿರದಲ್ಲಿ ಪೂಜಿಸಲಾಗುತ್ತದೆ. ಮುಕ್ತಿ ಇಲ್ಲದೆ ಅಲೆದಾಡುವ ಜೀವಿಗಳು ಈ ಮಾಸದಲ್ಲಿ ನಾವು ಮಾಡುವ ಪ್ರಾರ್ಥನೆಯ ಫಲವಾಗಿ ಸದ್ಗತಿ ಹೊಂದುತ್ತಾರೆ ಎನ್ನಲಾಗಿದೆ. ಇದಕ್ಕೆ ಸೂಚಕವಾಗಿ ಮಾರ್ಗಶಿರ ಶುಕ್ಲ ಏಕಾದಶಿಯನ್ನು **“ಮೋಕ್ಷದಾ ಏಕಾದಶಿ”** ಎನ್ನಲಾಗಿದೆ.

**ಮಾರ್ಗಾಳಿ ಮಹೋನ್ನತ ವೇದಿಕೆ**

ದಕ್ಷಿಣ ಭಾರತದ ಕೆಲವು ದೇವಾಲಯ, ಮಠ, ಮಂದಿರಗಳಲ್ಲಿ ಧನುರ್ಮಾಸದಲ್ಲಿ ವಿಶೇಷ ಸಂಗೀತ ಕಛೇರಿ ಹಮ್ಮಿಕೊಳ್ಳುತ್ತಾರೆ.

ಇದನ್ನು **‘ಮಾರ್ಗಾಳಿ ಸಂಗೀತ’** ಎಂದು ಹೇಳುತ್ತಾರೆ. ಚಳಿಯಲ್ಲಿ ಹೊರಗೆ ಓಡಾಡಲು ಸಾಧ್ಯವಾಗದ ಕಾರಣ ಸನ್ನಿದಿಗಳಲ್ಲಿ ಒಂದೆಡೆ ಎಲ್ಲರೂ ಬೆಚ್ಚಗೆ ಕುಳಿತು, ಕುರುಕಲು ತಿಂಡಿ, ಬಿಸಿ ಪ್ರಸಾದ ಸೇವಿಸುತ್ತಾ ಸಂಗೀತ-ನೃತ್ಯವನ್ನು ಮನದೊಳಗೆ ತುಂಬಿಕೊಳ್ಳುವುದು ಸಾಮಾನ್ಯವಾಗಿದೆ.

ಕಲೆ-ಸಾಹಿತ್ಯ ಸಾಂಸ್ಕೃತಿಕ ವೈವಿಧ್ಯಗಳು ಮುಂದಿನ ಪೀಳಿಗೆಗೆ ಸಾಗಲು ಮಾರ್ಗಶಿರ ಎಂಬುದು ಮಹೋನ್ನತ ವೇದಿಕೆಯೂ ಆಗಿದೆ. ಹೇಳಿಕೇಳಿ ಭಗವಂತನ ಮಾಸ. ನಮ್ಮೆಲ್ಲರ ಇಹಪರದ ಬದುಕು ಹಸನಾಗಲೆಂಬುದೇ ಇದರ ಮೂಲ ಆಶಯ.



# ಶ್ರೀ ಗುರು ಗೋವಿಂದವಿಠಲ ದಾಸರು

**- ಶ್ರೀಧರ ರಾಯಸಂ**

ಸಮಾಜದಲ್ಲಿ ಅದ್ಭುತ ಸಾಧನೆಗೈದು ಕೀರ್ತಿಯನ್ನು ಗಳಿಸಿ, ಅನೇಕ ಜನರಿಗೆ ಉಪಕಾರ ಮಾಡಿದ ಆದರ್ಶವಂತ ದಾಸರು, ಸ್ಫೂರ್ತಿದಾಯಕ ಗುರುಗೋವಿಂದ ವಿಠಲದಾಸರ ಸ್ಮರಣೆ ಮಾಡುವುದು ನಮ್ಮ ಕರ್ತವ್ಯ. ಮೈಸೂರಿನ ಕೀರ್ತಿಶೇಷರಾದ ಗುರು ಗೋವಿಂದವಿಠಲದಾಸರು, ಭಕ್ತರಾಗಿ ಶ್ರೀಹರಿಯಲ್ಲಿ ವಾಯುದೇವರಲ್ಲಿ ಶ್ರೀವಾದಿರಾಜರಲ್ಲಿ ಅಪಾರ ಭಕ್ತಿವುಳ್ಳವರಾಗಿ ಅನೇಕ ಜನರಿಗೆ ತಮ್ಮ ಪ್ರಭಾವದಿಂದ ಭಕ್ತರನ್ನಾಗಿ ಮಾಡಿ ಭಗವಂತನ ಪರಮ ಅನುಗ್ರಹಕ್ಕೆ ಪಾತ್ರರಾಗುವಂತೆ ಮಾಡಿದ ದಾಸರು. ಇವರು ಅನೇಕ ಕಡೆ ಸಂಚಾರ ಮಾಡಿ ಅಪೂರ್ವ ಹಸ್ತಪ್ರತಿಗಳನ್ನು ತಂದು ಹಾಗೆಯೇ ಸಂಶೋಧನಾತ್ಮಕ ಕೃತಿಗಳನ್ನು ಹೊರತಂದು ಅನೇಕ ಭಕ್ತರಿಗೆ ಉಪಕರಿಸಿದ ಮಹಾನ್‌ದಾಸರು.

ಹರಿದಾಸವರೇಣ್ಯ ಶ್ರೀವಿಜಯದಾಸರ ಪರಂಪರೆಯಲ್ಲಿ ನಡೆದು ಬಂದ ತಂದೆ ಮುದ್ದು ಮೋಹನದಾಸರ ಶಿಷ್ಯರಾಗಿ ಹರಿದಾಸ ಕುಲತಿಲಕ ಬಿರುದು ಪಡೆದ ಗುರು ಗೋವಿಂದವಿಠಲದಾಸರು ಆದರ್ಶ ಸಾಧಕರಾಗಿ ಹರಿದಾಸರಲ್ಲೊಬ್ಬರಾಗಿ ಪ್ರಸಿದ್ಧರಾದ ಮಹನೀಯರು.

ಗುರುಕೃಪೆಯ ಅಮೃತವನ್ನು ಕುಡಿದು ಭಕ್ತಿಯಲ್ಲಿ ಶಾಸ್ತ್ರದಲ್ಲಿ, ಪದ್ಯರಚನೆ, ಕಾವ್ಯ ಶೈಲಿಯಲ್ಲಿ ಪರಿಣಿತರಾಗಿ ಜನರಿಗೆ ಅಪರೂಪದ ಕೀರ್ತನೆಗಳನ್ನು ಬರೆದು ಹಂಚಿದ ಮಾದರಿಯ ಮಹಾನ್‌ದಾಸರು ! ತಮ್ಮ ಬದುಕಿನ ಪ್ರತಿ ಕ್ಷಣವೂ ಭಗವಂತನ ಸೇವೆಯಲ್ಲಿ ಸಾರ್ಥಕ ಪಡಿಸಿಕೊಂಡು ತಾವು ಸಾಧಕ ದಾಸರಾಗಿ ಇತರರ ಸಾಧನೆಗೂ ಕಾರಣರಾಗಿ, ಅವರ ಆತ್ಮೋದ್ಧಾರಕ್ಕೆ ದಾರಿ ತೋರಿಸಿದ ಗುರುಗೋವಿಂದವಿಠಲದಾಸರು ಸದಾ ಸ್ಮರಣೀಯರು.

ಮಧ್ವಮತದ ಸಿದ್ಧಾಂತದ ಪದ್ಧತಿಯನ್ನು ಪರಿಪಾಲಿಸಿ ಶ್ರೀಹರಿಯ ಭಜನೆ ಮಾಡುತ್ತಾ ಅನೇಕ ಕೃತಿಗಳನ್ನು ಸಂಶೋಧನೆ ಮಾಡಿ ರಾಜ್ಯದ ಮೂಲೆ ಮೂಲೆಗೆ ಸಂಚರಿಸಿ, ಅಪರೂಪದ ದಾಖಲೆಗಳನ್ನು ಸಂಗ್ರಹಿಸಿದ ದಾಸರು! ಗುರುಗೋವಿಂದವಿಠಲ ಅಂಕಿತದಲ್ಲಿ ಸುಮಾರು 700ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿ 250ಕ್ಕೂ ಹೆಚ್ಚು ಭಕ್ತರಿಗೆ ಅಂಕಿತವನ್ನು ನೀಡಿ ಮಹದುಪಕಾರ ಮಾಡಿದ ಮಹಾನುಭಾವರು. ಸ್ವಪ್ನವೃಂದಾ ಆಖ್ಯಾನವನ್ನು ಕನ್ನಡ ತಾತ್ಪರ್ಯ ಸಹಿತ ಪ್ರಕಟಿಸಿ ಶ್ರೀವಾದಿರಾಜ ಗುರುಸಾರ್ವಭೌಮರ ಅನುಗ್ರಹಕ್ಕೆ ಪಾತ್ರರಾದವರು. ದಾಸವರೇಣ್ಯರಾದ ಶ್ರೀಪುರಂದರದಾಸರ ಆರಾಧನೆ ಚಾಚೂ ತಪ್ಪದೆ ನಾನಾ ಭಾಗದಲ್ಲಿ ಜರುಗಿಸಿ ಧರ್ಮಜಾಗೃತಿ ಮಾಡಿ ಹೊಸ ರೂಪ ನೀಡಿದ, ಹರಿದಾಸ ಸಾಹಿತ್ಯ ರಚಿಸಿದ ಗುರು ಗೋವಿಂದ ವಿಠಲ ದಾಸರು ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಸಾತ್ವಿಕ ಪ್ರಭಾವ ಬೀರಿದ ಸಾಧಕರು! ಹರಿವಾಯು ಗುರುಗಳ ಸೇವೆಯಲ್ಲಿ ನಿರಂತರ ತಪವಗೈದು ಅನೇಕ ಹೋಮಗಳನ್ನು ನಡೆಸಿ, ಸಂಪ್ರದಾಯದ ಪರಿಕಾರರಾದರು. ಯಾವ ಪ್ರಚಾರಕ್ಕೆ ಆಸೆ ಪಡೆದ ಹರಿದಾಸ ದೀಪಿಕಾ ಎಂಬ ಮಾಸಪತ್ರಿಕೆ ನಡೆಸಿ ಹರಿದಾಸ ಸಾಹಿತ್ಯದ ರೂವಾರಿಗಳಲ್ಲೊಬ್ಬರು ಎಂದು ಹೆಸರು ಪಡೆದರು. ಇವರ ಬದುಕು, ಬರಹ ಮುಂದಿನ ಪೀಳಿಗೆಗೆ ದಾರಿದೀಪ ಎಂದೇ ಹೇಳಬಹುದು.

ರಘುನಾಥರಾವ್ ಮತ್ತು ಲಕ್ಷ್ಮೀ ಬಾಯಿ ದಂಪತಿಗಳ ಪುತ್ರರಾಗಿ ಗುರುಗೋವಿಂದವಿಠಲ ದಾಸರು 28-8-1894 . ಜಯನಾಮ ಸಂವತ್ಸರ ಶ್ರಾವಣ ಬಹುಳ ದ್ವಾದಶೀ ಮಂಗಳವಾರ ಚಿಕ್ಕಮಗಳೂರಿನಲ್ಲಿ ಜನಿಸಿದರು. ಗುರುಗೋವಿಂದ ದಾಸರು ಚಿಕ್ಕವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಬಾಲ್ಯದಲ್ಲಿ ಬೆಳೆದು ತಮ್ಮ ದೊಡ್ಡಪ್ಪನವರಾದ ರಾಘವೇಂದ್ರ ರಾಯರ ಮನೆಯಲ್ಲಿ ಹೆಗ್ಗಡದೇವನ ಕೋಟೆಯಲ್ಲಿ ಇವರ ಉಪನಯನವಾಯಿತು. ಇವರ ತಾಯಿ ಲಕ್ಷ್ಮಿಬಾಯಿ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ತಮ್ಮ ತಾಯಿಯ ಕಷ್ಟಗಳನ್ನು ಗುರುಗೋವಿಂದ ವಿಠಲ ದಾಸರು ಒಂದು ವಾರ್ಧಿಕಷಟ್ಪದಿಯಲ್ಲಿ ಪದ್ಯವನ್ನೇ ರಚಿಸಿ ಅವರ ಬೆಂದ ಹೃದಯದ ಮಿಡಿತವನ್ನು ಅಭಿವ್ಯಕ್ತಿ ಮಾಡಿದ್ದಾರೆ. ಬಾಲ್ಯದಲ್ಲಿ ಅತಿ ಚುರುಕಾಗಿ ವಿದ್ಯೆಯಲ್ಲಿ ಪ್ರಥಮ ಶ್ರೇಣಿ ವಿದ್ಯಾರ್ಥಿಯಾಗಿ ಬಹುಮಾನಗಳಿಸುವ ಬಾಲಕ ಎಂದು ಹೆಸರುಗಳಿಸಿದವರು. ಧಾರ್ಮಿಕ ಕೃತಿಗಳನ್ನು ವಾಯು ಸ್ತುತಿ, ಸಮುದ್ಧ ವಿಜಯ, ವಿಷ್ಣುಸಹಸ್ರನಾಮ ಭಗವದ್ಗೀತೆ, ಮಣಿ

ಮಂಜರೀ ಪಾರಾಯಣ ಮಾಡುತ್ತಿದ್ದರು. ಶಾಲೆಯಲ್ಲಿ ನಾಟಕ ಗಳಲ್ಲೂ ಪಾತ್ರವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಪ್ರೌಢ ಶಿಕ್ಷಣ ಮುಗಿದ ನಂತರ ಡಿಪ್ಲೋಮಾ ಪರೀಕ್ಷೆ ಪಾಸು ಮಾಡಿ, ಸಬ್ ಓವರ್ಸಿಯರ್ ಆಗಿ ನೇಮಕಗೊಂಡರು. ಮೈಸೂರಿನ ಸಿ. ಎನ್. ಯಾದವ ಮೂರ್ತಿರಾಯರ ಮಗಳಾದ ತುಳಸಮ್ಮ (ಕೃಷ್ಣವೇಣಿ) ಅವರನ್ನು ವಿವಾಹವಾದರು. ಇವರಿಗೆ ಇಬ್ಬರು ಪುತ್ರಿಯರು ಜನಿಸಿದರು. (ಪದ್ಮಾವತಿ ಮತ್ತು ಕಮಲ) ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡಿ ಶಾಸ್ತ್ರಗಳನ್ನು ಅರಿತು ವಿದ್ವಾಂಸರಾದ ಗುರುಗೋವಿಂದದಾಸರಿಗೆ ಸುಬ್ಬರಾಯದಾಸರಿಂದ ಗುರು ಗೋವಿಂದವಿಠಲ ಎಂಬ ಅಂಕಿತ ಪ್ರಮಾಥಿ ನಾಮಸಂವತ್ಸರ ಫಾಲ್ಗುಣ ಬಹುಳ ಪ್ರತಿಪದೆ (24-3-1940) ರಂದು ಪ್ರಾಪ್ತವಾಯಿತು. ಅಂಕಿತ ಪಡೆದ ಗುರು ಗೋವಿಂದದಾಸವಿಠಲದಾಸರು, ನಮಾಮಿ ತಂದೆಯೇ ಮುದ್ದುಮೋಹನಾ ಎಂಬ ಕೃತಿಯನ್ನು ರಚಿಸಿದರು. ಇವರು ಅಂಕಿತ ಪಡೆದು ತಂಬೂರಿ ಹಿಡಿದು ಜ್ಞಾನ ಕಾರ್ಯದ ಮಾರ್ಗ ಕಂಡುಕೊಂಡರು.

ದೇವರಾಯನ ದುರ್ಗದ ನರಸಿಂಹಸ್ವಾಮಿ ದೇವರ ರಥೋತ್ಸವವನ್ನು ತಪ್ಪದೆ ದರ್ಶಿಸಿ, ದೇವರ ಪರಮ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದರು. ಬೆಂಗಳೂರಿನ ವಲ್ಲಭ ರಾಯನ ದೇವನ ಸನ್ನಿಧಿಯಲ್ಲಿ ಜರುಗುತ್ತಿದ್ದ ಪುರಂದರದಾಸರ ಆರಾಧನೆ ಮಾನವಿ ಯಲ್ಲಿ ಜಗನ್ನಾಥದಾಸರ ಆರಾಧನೆ, ಚೀಕಲ ಪರವಿಯಲ್ಲಿ ವಿಜಯದಾಸರ ಕಟ್ಟೆ, ಅಶ್ವತ್ಥನಾರಾಯಣ ದೇವರನ್ನು ಸಂದರ್ಶಿಸುತ್ತಿದ್ದರು. ತಮ್ಮ ತಾಯಿಗೂ ಸಹ ಭಾರ ತೀಶ ಪ್ರಿಯವಿಠಲ ಎಂಬ ಅಂಕಿತ ಮತ್ತು ಪತ್ನಿಗೆ ಲಕ್ಷ್ಮೀಶವಿಠಲ ಎಂಬ ಅಂಕಿತವನ್ನು ಉರಗಾದ್ರಿವಾಸ ವಿಠಲದಾಸರಿಂದ ಕೊಡಿಸಿದರು. ಇವರ ಮನೆಯೇ ಧಾರ್ಮಿಕ ಕೇಂದ್ರವಾಗಿತ್ತು. ಇವರ ಸಾತ್ವಿಕ ನಿಷ್ಠೆ ಅದ್ಭುತವಾಗಿ ಭಕ್ತರಿಂದ ಸಾಧನೆ ಮಾಡಲು ಅಪರೂಪದ ವಾಸಸ್ಥಾನವಾಗಿತ್ತು. ಸೋದೆಗೆ ಶ್ರೀವಾದಿರಾಜರ ಆರಾಧನೆಗೆ ತಪ್ಪದೇ ಹೋಗುತ್ತಿದ್ದರು.

ಪಂಚ ವೃಂದಾವನದ ಮಹಿಮೆಯನ್ನು ತಮ್ಮ ಒಂದು ಕೀರ್ತನೆಯಲ್ಲಿ ಶ್ರೀ ವಾದಿ ರಾಜರನ್ನು ಸ್ತೋತ್ರ ಮಾಡಿ, ಪುನೀತರಾಗುತ್ತಿದ್ದರು. ಅದರಂತೆ, ಹೊಳೆ ಹೊನ್ನೂರು ನಲ್ಲಿರುವ ಶ್ರೀಸತ್ಯಧರ್ಮರ ದರ್ಶನ ಮಾಡಿ ಮೈಸೂರಿಗೆ ವಾಪಸ್ಸಾಗುತ್ತಿದ್ದರು. ಇವರು ಅಸದೃಶ ಮಾತೃ ಭಕ್ತಿ ಪ್ರದರ್ಶಿಸಿ ಒಂದು ಕೀರ್ತನೆಯನ್ನೇ ರಚಿಸಿ ತಾಯಿ ಯನ್ನು ಸ್ಮರಿಸಿದ್ದಾರೆ. ಶ್ರೀವಾದಿರಾಜರ ತೀರ್ಥ ಪ್ರಬಂಧಗ್ರಂಥವನ್ನು ಅನುಸರಿಸಿ ಅನೇಕ ತೀರ್ಥ ಕ್ಷೇತ್ರಗಳನ್ನು ಬದರಿಯಾತ್ರೆಯನ್ನೂ ಮಾಡಿ ವಾಪಸ್ಸಾಗುತ್ತಿದ್ದರು.

ಇವರ ಪತ್ನಿಯೂ ಸಹ ಎರಡು ಬಾರಿ ಇವರ ಜೊತೆಗೆ ಬದರಿಯಾತ್ರೆ ಮಾಡಿ ಧನ್ಯನಾದರು. ಹರಿ ಭಕ್ತಿ ವಿಜಯ ಸಂಪುಟ ಪ್ರಕಟಿಸಿ, ಭಕ್ತರಿಗೆ ಮಹದುಪಕಾರ ಮಾಡಿದ ದಾಸರು ಅನೇಕ ಉಪನಿಷತ್ತುಗಳ ಅನುವಾದ ಮಾಡಿ, ಧರ್ಮ ಪ್ರಚಾರ ಮಾಡಿದ ಮಹನೀಯರು. ಇವರ ಮಾತು, ಮತಿ, ಕೃತಿ, ಜ್ಞಾನ ಅಪರಿಮಿತ ಇವರು ಇತರ ಮಹಾನ್ ಗ್ರಂಥಗಳಾದ ಶ್ರೀವಾದಿರಾಜ ಋಜುತ್ವ ಪ್ರಕಾಶಿಕಾ ಸ್ವಾಪ್ನ ವೃಂದಾ ವನ ಮೂಲ ಮತ್ತು ಕನ್ನಡ ತಾತ್ಪರ್ಯ, ಪಂಜೀಕರಣ, ಮತ್ತು ಸುಂದರಕಾಂಡ ರಾಮಾಯಣ, ಮಾಸಸ್ಮೃತಿ ಮೂಲ ತಾತ್ಪರ್ಯ, ಆಧ್ಯಾತ್ಮ ರಸರಂಜನಿ ಮೂಲ ಕನ್ನಡ ಗದ್ಯಾನುವಾದ ಸಹಿತ ಕನ್ನಡ ಪಂಚರತ್ನ ಅನೇಕ ಸುಳಾದಿಗಳು, ಶ್ರೀಮನ್ಮಧ್ವ ಸಹಸ್ರನಾಮಾವಳೀ, ಅನ್ನಬ್ರಹ್ಮ ರಚಿಸಿದ್ದಾರೆ. ಇವರಲ್ಲಿ ಗುರುಭಕ್ತಿ ಅನನ್ಯ. ಶ್ರೀಗುರು



ಗೋವಿಂದದಾಸರು, ಮಧ್ವರನ್ನು, ಜಯತೀರ್ಥರು, ಶ್ರೀಪಾದರಾಜರು, ವ್ಯಾಸರಾಜರನ್ನು ವಾದಿರಾಜರನ್ನು ಅನೇಕ ರೀತಿಯಲ್ಲಿ ಸ್ಮರಣೆ ಮಾಡಿದ್ದಾರೆ. ಮೈಸೂರಿನಲ್ಲಿ ತಮ್ಮ ಸ್ವಂತ ಗೃಹವನ್ನು ಮಂದಿರವಾಗಿ ಪರಿವರ್ತಿಸಿ, ಸರ್ವಸ್ವವನ್ನು ತ್ಯಾಗ ಮಾಡಿದ ಮಹಾನುಭಾವರು. ಇವರ ಶಿಷ್ಯ ಸಂಪತ್ತು ಹೇರಳವಾಗಿ ಅನೇಕರಿಗೆ ಅಂಕಿತ ನೀಡಿ ಧರ್ಮ ಪ್ರಚಾರ ಮಾಡಲು ಸಹಾಯ ಮಾಡಿದರು. ಅನೇಕ ಊರು ಸಂಚಾರ ಮಾಡಿ, ಯಾಯಾವಾರ ಮಾಡಿ ಸಂಗ್ರಹಿ ಸಿದ ಧನ, ಧಾನ್ಯಗಳನ್ನು ಮಾದ ನೂರಿನ ವಿಷ್ಣುತೀರ್ಥರ ಸನ್ನಿಧಾನಕ್ಕೆ ಒಪ್ಪಿಸುತ್ತಿದ್ದರು. ಗುರುಗೋವಿಂದದಾಸರು ಹರಿಕಥಾಮೃತಸಾರ ಹೋಮ ಜರುಗಿಸಿದ್ದು ವಿಶೇಷ! ಹರಿ ದಾಸ ಕುಲತಿಲಕ ಎಂಬ ಬಿರುದನ್ನು ಶ್ರೀಪೇಜಾವರ ಶ್ರೀವಿಶ್ವೇಶತೀರ್ಥರಿಂದ ಪಡೆದು ಧನ್ಯರಾದರು. ದಾಸ ಧರ್ಮ ಪ್ರವರ್ತಕ, ದಾಸ ಧರ್ಮ ಪ್ರಚಾರಕ ದಾಸೇಷ್ಟ ದಾಯಕ ಎನಿಸಿದರು.

ಗಂಗಾಜಲ ಮತ್ತು ಶ್ರೀವಾದಿರಾಜರ ಪವಿತ್ರ ಮೃತ್ತಿಕಾ ಜಲವನ್ನು ಸೇವಿಸಿ ಗುರುಗೋವಿಂದವಿಠಲ ದಾಸರು ದುಂದುಭಿ ನಾಮಸಂವತ್ಸರ, ಮಾರ್ಗಶಿರ ಬಹುಳ ದ್ವಾದಶೀ ತಿಥಿಯಂದು (11-1-1983) ಅನಂತ ಪುರದಲ್ಲಿ ಹರಿಪಾದ ಸೇರಿದರು. ಇವರ ಆರಾಧನೆ ಮೈಸೂರಿನಲ್ಲಿ ಪ್ರತಿ ವರ್ಷವೂ ಜರುಗುತ್ತದೆ.

# ಭಗವದ್ಗೀತೆಯ ಜನ್ಮದಿನ

- ಶ್ರೀಮತಿ ಪಾರಿಜಾತ ಬಿ.ಎಸ್.
90083 35689



ಓಂ ಪಾರ್ಥಾಯ ಪ್ರತಿಭೋಧಿತಾಂ
ಭಗವತಾ ನಾರಾಯಣೇನ ಸ್ವಯಂ
ವ್ಯಾಸೇನ ಗ್ರಥಿತಾಂ ಪುರಾಣಮುನಿನಾ
ಮಧ್ಯೇಮಹಾಭಾರತಂ
ಅದ್ವೈತಾಮೃತ ವಷಿಣೀಂ ಭಗವತೀಂ
ಅಷ್ಟಾದಶಾಧ್ಯಾಯನೀಂ
ಅಂಬ ತ್ವಾಮನುಸಂದಧಾಮಿ
ಭಗವದ್ಗೀತೆ ಭವದ್ವೇಷಿಣೀಮ್॥

ಹೇ ಮಾತೇ ಭಗವದ್ಗೀತೆ ನೀನು ಸ್ವತಃ ಶ್ರೀಮನ್ ನಾರಾಯಣ ನಿಂದ ಮಧ್ಯಮ ಪಾಂಡವ ಪಾರ್ಥನಿಗೆ ಬೋಧಿಸಲ್ಪಟ್ಟವಳು. ಮಹಾ ಮುನಿ ಶ್ರೀವೇದವ್ಯಾಸರಿಂದ ಮಹಾಭಾರತದ ಮಧ್ಯೆಯಲ್ಲಿ ಸೇರಿಸಲ್ಪಟ್ಟ ವಳು ನೀನು. ಅದ್ವೈತಾಮೃತವನ್ನು ವರ್ಷಧಾರೆಯಾಗಿಸಿರುವವಳು, ಸಂಸಾರದ ಕರ್ಮವನ್ನು ಕಳೆಯುವವಳು, ಅಷ್ಟಾದಶ ಅಧ್ಯಾಯಗಳನ್ನು ಹೊಂದಿರುವವಳು ನೀನು, ಹೇ ತಾಯೇ ನಿನ್ನನ್ನು ಧ್ಯಾನಿಸುವೆನು.

ಹಿಂದೂ ಪಂಚಾಗದ ಪ್ರಕಾರ ಬರುವ ಒಂದೊಂದು ಹುಣ್ಣಿಮೆಯೂ,ಅಮಾವಾಸ್ಯೆಯೂ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಪುಷ್ಯ ಹುಣ್ಣಿಮೆ, ಮಾಘ ಹುಣ್ಣಿಮೆ, ಫಾಲ್ಗುಣ ಹುಣ್ಣಿಮೆ, ಚೈತ್ರಹುಣ್ಣಿಮೆ, ಬುದ್ಧ ಹುಣ್ಣಿಮೆ, ಜೇಷ್ಠ ಹುಣ್ಣಿಮೆ, ಶಿಗಿಹುಣ್ಣಿಮೆ, ಕಾರ್ತಿಕಹುಣ್ಣಿಮೆ, ಮಾರ್ಗಶಿರ ಹುಣ್ಣಿಮೆ, ಹೋಳಿ ಹುಣ್ಣಿಮೆ, ಬನದ ಹುಣ್ಣಿಮೆ,ಗೌರಿಹುಣ್ಣಿಮೆ ಹಾಗೆಯೇ ಸೋಮವತಿ ಅಮಾವಾಸ್ಯೆ, ಶನಿ ಅಮಾವಾಸ್ಯೆ, ಭೀಮನ ಅಮಾವಾಸ್ಯೆ, ಮಹಾಲಯ ಅಮಾವಾಸ್ಯೆ, ಹರಿಯಾಳಿ ಅಮಾವಾಸ್ಯೆ,ದೀಪಾವಳಿ ಅಮಾವಾಸ್ಯೆ, ಭೌಮವತಿ ಅಮಾವಾಸ್ಯೆ, ಮೌನಿ ಅಮಾವಾಸ್ಯೆ, ಶುಕ್ರಗ್ರಹಣಿ ಅಮಾವಾಸ್ಯೆ ಇತ್ಯಾದಿಯಾಗಿ ಆಚರಿಸಲಾಗುತ್ತದೆ. ಅಂತೆಯೇ ವರ್ಷದ 24 ಏಕಾದಶಿಗಳನ್ನು ವಿಶೇಷವಾಗಿ ಪುಷ್ಯ, ಷಟಲಜಯ, ವಿಜಯ, ಅಮಲಕಿ, ಪಾಪಮೋಚನಿ, ಕಾಮ, ವರಊಥಿನಿ,ಮೋಹಿನಿ,ಅಪರಾನಿರ್ಜಲಾ ಯೋಗಿನಿ,ದೇವಶಯನಿ,ಕಾಮಿಕಾ,ಶ್ರಾವಣ ಪುತ್ರದಾ,ಅಜಪರಿವರ್ತಿನಿ, ಇಂದಿರಾ ಪಾಪಾಂಕುಶ, ರಾಮ, ದೇವುತ್ಥಾನ, ಉತ್ಪನ್ನ ಮೋಕ್ಷದ ಸಫಲ ಪುಷ್ಯ ಏಕಾದಶಿಗಳೆಂದು ಆಚರಿಸಲಾಗುತ್ತದೆ. ಇವುಗಳಲ್ಲಿ ಮೋಕ್ಷ ಏಕಾದಶಿಯಿಂದ "ಗೀತಾ ಜಯಂತಿ"ಯನ್ನು ವಿಶೇಷವಾಗಿ ಪ್ರಪಂಚಾದ್ಯಂತ ಆಚರಿಸಲಾಗುತ್ತವೆ.

ಪ್ರಪಂಚದಾದ್ಯಂತ ಆಧ್ಯಾತ್ಮಿಕ ನಂಬಿಕೆಯುಳ್ಳ ಜನರು ಭಗವದ್ಗೀತೆಯ ಸಾರವನ್ನು ಅರಿಯುವ ದಾಹದಿಂದ ಅಧ್ಯಯನ ಪಠನ, ಜ್ಞಾನ ಗ್ರಹಣದ ಮೂಲಕ ಅದರ ಮಹತ್ವವನ್ನು ಪಸರಿಸಿದ್ದಾರೆ.

ಜೀವನದ ಹಾದಿಗೆ ಮಾರ್ಗದರ್ಶಕವಾಗಿ, ಭವದ ಸುಖ-ದುಃಖವನ್ನು ಅನುಭವಿಸುವ, ದೂರ

ಮಾಡಿಕೊಳ್ಳುವ ಭವರೋಗ ವೈದ್ಯದಂತೆ ಪ್ರತಿಯೊಬ್ಬರ ಜೀವ ನಕ್ಕೂ ದೊರೆತಿರುವ ದಿವ್ಯಾಮೃತ ಭಗವದ್ಗೀತೆ. ಶರೀರಾಭಿ ಮಾನ ಇರುವವರೆಗೂ ಇಂದ್ರಿಯಗಳ ಸೆಳೆತದಿಂದ ಪಾರಾ ಗುವುದು ಕಷ್ಟ ಎಂಬ ಭಾವವನ್ನು ಎಳೆಎಳೆಯಾಗಿ ಬಿಡಿಸಿ ಭೌತಿಕ ಬಂಧನದಿಂದ ಬಿಡುಗಡೆ ಪಡೆಯಬೇಕೆಂಬುವವನು ಕೃಷ್ಣ ಪ್ರಜ್ಞೆಯನ್ನರಿಯಬೇಕು ಎಂಬ ಸೂಕ್ಷ್ಮತೆಯನ್ನು ನೀಡಿ ರುವ ಗ್ರಂಥ ಭಗವದ್ಗೀತೆ.

ಹಿಂದೂಗಳ ಪವಿತ್ರ ಗ್ರಂಥವಾದ ಭಗವದ್ಗೀತೆಯ ಜನ್ಮದಿನವನ್ನು ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿ ಯಂದು "ಗೀತಾಜಯಂತಿ"ಯೆಂದು ಆಚರಿಸಲಾಗುತ್ತದೆ. ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಗೀತೆಯನ್ನು ಹೇಳಿದ ದಿನವೇ ಗೀತಾಜಯಂತಿ. ಈ ಏಕಾದಶಿಯನ್ನು ಮತ್ಸ್ಯ ಏಕಾ ದಶಿಯೆಂದು, ಮೋಕ್ಷದ ಏಕಾದಶಿಯೆಂದು ಕರೆಯಲಾಗು ತ್ತದೆ.

ಭಗವದ್ಗೀತೆ ಮಹಾಭಾರತ ಮಹಾಕಾವ್ಯದ ಭೀಷ್ಮ ಪರ್ವದ 23 ನೇ ಅಧ್ಯಾಯದಿಂದ 40 ನೇ ಅಧ್ಯಾಯದ ಮಧ್ಯದಲ್ಲಿ ಬರುವ ಭಾಗವಾಗಿದೆ. 700 ಶ್ಲೋಕಗಳನ್ನು ಹೊಂದಿರುವ ಹಿಂದೂ ಧರ್ಮ ಹಾಗೂ ತತ್ವಶಾಸ್ತ್ರದ ಮುಖ್ಯ ಭಾಗಗಳಲ್ಲಿ ಒಂದಾಗಿದೆ.

ಇದನ್ನು ಗೀತೋಪನಿಷತ್,ಯೋಗೋಪನಿಷತ್ ಹಾಗೂ ಪಂಚಮವೇದ ಎಂದೂ ಕರೆಯಲಾಗುತ್ತದೆ. ನಾಲ್ಕು ವೇದಗಳ ಸಾರಾಂಶವಾಗಿದೆ. ಭಗವದ್ಗೀತೆಯು ಮಹಾಭಾರತ ಯುದ್ಧಕ್ಕೂ ಮುನ್ನ ಪ್ರಾರಂಭವಾಗಿದೆ. ಪಾಂಡವರು ಕೌರವರ ನಡುವಿನ ಕುರುಕ್ಷೇತ್ರ ಯುದ್ಧ ಕಾಲದಲ್ಲಿ ಶ್ರೀ ಕೃಷ್ಣನು ವೀರಾಧಿ ವೀರ ಅರ್ಜುನನ ಮೇಲಿನ ಪ್ರೀತಿಯಿಂದ ಅವನ ಸಾರಥಿ ಯಾಗುತ್ತಾನೆ.

ಯುದ್ಧಭೂಮಿಯ ಮಧ್ಯಕ್ಕೆ ತನ್ನವರಿರುವ ಎರಡೂ ಗುಂಪಿನ ಮಧ್ಯೆ ರಥ ನಿಲ್ಲಿಸಲು ಶ್ರೀ ಕೃಷ್ಣನಿಗೆ ತಿಳಿಸಿ, ಎರಡೂ ಕಡೆಯಿರುವ ತನ್ನವರನ್ನು ನೋಡಲು ತಿಳಿಸುತ್ತಾನೆ. ತಾನು ತನ್ನ ತಾತ, ದೊಡ್ಡಪ್ಪ, ಚಿಕ್ಕಪ್ಪ, ಗುರುಗಳು, ಸೋದರ ಸಂಬಂಧಿಗಳ ವಿರುದ್ಧ ಹೇಗೆ ಯುದ್ಧ ಕೈಗೊಳ್ಳುವುದು, ಬಾಲ್ಯ ದಿಂದ ತನ್ನನ್ನು ಅಪ್ಪಿ ಮುದ್ದಾಡಿ, ಪ್ರೀತಿಯ ಬಾಹುಗಳಲ್ಲಿ ಎತ್ತಾಡಿಸಿದ ರಕ್ತ ಸಂಬಂಧಿಗಳು ಹಾಗೂ ಕೈಹಿಡಿದು ಬಿಲ್ವಿದ್ಯೆ ಕಲಿಸಿದ ಗುರುವರ್ಯರು ಹೀಗೆ ಯಾರನ್ನು ಸೋಲಿಸಲು, ಯಾರನ್ನು ವಧಿಸಲು ತಾನು ಸನ್ನದ್ಧನಾಗಬೇಕು ಎಂದು ಓರ್ವ ಕ್ಷತ್ರೀಯನಾಗಿದ್ದರೂ ತನ್ನ ಕರ್ತವ್ಯ ಮಾಡಲು ಸಾಧ್ಯ ವಾಗದೇ ಮನಸ್ಸು ದುರ್ಬಲಗೊಳ್ಳುತ್ತದೆ.

ಈ ಸಂದರ್ಭದಲ್ಲಿ ಸಾರಥಿಯಾದ ಶ್ರೀ ಕೃಷ್ಣನು ನಿಸ್ವಾರ್ಥ ಕ್ರಿಯೆಯ ಮೂಲ ಧರ್ಮವನ್ನು ಎತ್ತಿ ಹಿಡಿಯುವ ಕ್ಷತ್ರಿಯ ಕರ್ತವ್ಯವನ್ನು ನಿಭಾಯಿಸಲು ಸಲಹೆ ನೀಡುತ್ತಾನೆ. ಆತ್ಮದ ಅಮರತ್ವದ ಬಗ್ಗೆ ತಿಳಿಸುತ್ತ ನಾಲ್ಕು ಮಾರ್ಗಗಳಾದ ಭಕ್ತಿ, ಕರ್ಮ, ಧ್ಯಾನ, ಜ್ಞಾನದ ಮಾರ್ಗ ಕುರಿತು ಬೋಧಿ ಸುತ್ತಾನೆ.

ಆ ಉಪದೇಶದ ವಿವರವನ್ನು ದೂರದಲ್ಲಿ ಕುಳಿತು ವೀಕ್ಷಿಸುತ್ತಿದ್ದ ಸಂಜಯನು ಧೃತರಾಷ್ಟ್ರನಿಗೆ ವಿವರಿಸುತ್ತಾನೆ. ಇದನ್ನು ಮಹಾಮುನಿ ವೇದವ್ಯಾಸ ಮಹರ್ಷಿಯು ಮಹಾ ಭಾರತದ ಭಾಗವಾಗಿ, ವಿಶೇಷ ಮಹತ್ವದ ಅಂಶವಾಗಿ ಸೇರಿಸಿ ದ್ದಾರೆ. ಈ ಭಾಗವೇ ಭಗವದ್ಗೀತೆ.

ಭಗವದ್ಗೀತೆ ಎಲ್ಲಾ ಆಧ್ಯಾತ್ಮ ಸಾರವನ್ನು ಹೊಂದಿರುವ ಮಹಾಗ್ರಂಥವಾಗಿ ಐತಿಹಾಸಿಕ, ಮನಶಾಸ್ತ್ರೀಯ ತತ್ವ ಶಾಸ್ತ್ರೀಯ ಸಾರದ ಮೂಲಕ ತೆರೆದುಕೊಳ್ಳುತ್ತದೆ.

**ಕ್ರೋದಾದ್ ಭವತಿ ಸಮ್ಮೋಹಃ ಸಮ್ಮೋಹಾತ್ಸ್ಮೃತಿ ವಿಭ್ರಮಃ**
**ಸ್ಮೃತಿಭ್ರಂಶಾದ್ ಬುದ್ಧಿನಾಶೋ ಬುದ್ಧಿ ನಾಶಾತ್ರಣಶ್ಯತಿ।**

ಕ್ರೋಧದಿಂದ ಸಂಮೋಹವು ಉಂಟಾಗುತ್ತದೆ. ಸಂಮೋಹದಿಂದ ಸ್ಮೃತಿಯ ಭ್ರಮೆಯುಂಟಾಗುತ್ತದೆ. ಸ್ಮೃತಿ ಯಿಂದ ಬುದ್ಧಿ ನಾಶವಾಗುತ್ತದೆ. ಆಗ ಮನುಷ್ಯ ಐಹಿಕ ಪ್ರಪಂಚದಲ್ಲಿ ಮುಳುಗುತ್ತಾನೆ. ಹೀಗೆ ವಿವಿಧ ರೀತಿಯಲ್ಲಿ ಅರ್ಜುನನಿಗೆ ಉಪದೇಶಿಸುವುದರ ಮೂಲಕ ಭಗವಂತನ ನೇರವಾದ ಮಾತುಗಳಲ್ಲಿ ಮನುಷ್ಯನ ಉತ್ಥಾನ ಹಾಗೂ ಕಲ್ಯಾಣಕ್ಕಾಗಿಯೇ ದೊರೆತ ದಿವ್ಯಾಮೃತ.

ಈ ಎಲ್ಲಾ ಬೋಧನೆಗಳನ್ನು ಅನುಸರಿಸುವ ಮೂಲಕ ಸಾರವನ್ನು ಅರಿಯುವ ಮೂಲಕ ಹಾಗೂ ಮಾನಸಿಕ ದೈಹಿಕ ಬಂಧನಗಳಿಂದ ಮುಕ್ತಿ ಪಡೆಯಬಹುದು. ಮೋಕ್ಷ ಪಡೆಯ ಬಹುದೆಂಬ ನಂಬಿಕೆಯು ಮನುಕುಲಕ್ಕೆ ಸ್ಫೂರ್ತಿಯಾಗಿದೆ. ಇಂತಹ ದಿವ್ಯಾಮೃತವನ್ನು ಶ್ರೀಕೃಷ್ಣನು ವರ್ಷಧಾರೆ ಯಾಗಿಸಿದ ಸುದಿನ, ಗೀತಾಜ್ಞಾನವನ್ನು ನೀಡಿದ ಪವಿತ್ರ ದಿನ ವನ್ನು ಗೀತಾಜಯಂತಿಯಾಗಿ ಭಕ್ತಿ ಭಾವದಿಂದ ಆಚರಿಸ ಲಾಗುತ್ತದೆ.

ಈ ದಿನ ಶ್ರೀಮನ್ ನಾರಾಯಣನನ್ನು ಭಕ್ತಿ ಭಾವದಿಂದ ಪೂಜಿಸಲಾಗುತ್ತದೆ. ವಿದ್ವಾಂಸರು, ಪಂಡಿತರು ಉಪವಾಸ ವ್ರತಾಚರಣೆ ನಡೆಸುತ್ತಾರೆ. ಭಗವದ್ಗೀತೆಯನ್ನು ಶ್ರದ್ಧಾ ಭಕ್ತಿ ಯಿಂದ ಪಠಿಸುತ್ತಾರೆ. ದಾನಧರ್ಮಗಳನ್ನು ಕೈಗೊಳ್ಳುತ್ತಾರೆ. ಭಜನೆ, ಶ್ರೀ ಕೃಷ್ಣ ಸ್ಮರಣೆ ವಿಶೇಷವಾಗಿ ನೆರವೇರುತ್ತದೆ.

# ಹರಿಪ್ರಜ್ಞೆ ಪ್ರಚಾರಕ ಶ್ರೀಮದಕ್ಷೋಭ್ಯತೀರ್ಥರು

**-ಪಿ. ಎಸ್. ಜಿ.**

ಶ್ರೀಮದಾನಂದತೀರ್ಥರ ನಾಲ್ಕನೇ ಶಿಷ್ಯರು. ಶ್ರೀಮಧ್ವಾಚಾರ್ಯರ ಜೀವಮಾನದಲ್ಲಿ ಅವರ ಜೊತೆಗಿದ್ದ ಪ್ರಮುಖ ಶಿಷ್ಯರಾದ ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಕ್ಷೋಭ್ಯತೀರ್ಥರು ಈ ಎಲ್ಲಾ ಮಹಾನುಭಾವರು ಒಂದೊಂದು ರೀತಿಯಿಂದ ಶ್ರೀಹರಿ ವಾಯು ಗುರುಗಳ ಸೇವೆಗೈದಿದ್ದಾರೆ. ಈ ನಾಲ್ಕು ಜನ ಯತಿಪುಂಗವರು ಮಧ್ವಮತವು ಅಚಂದ್ರಾರ್ಕವಾಗಿ ಕಂಗೊಳಿಸುವಂತೆ ಭದ್ರ ವಾದ ತಳಹದಿಯನ್ನು ಹಾಕಿರುವರು. ಪ್ರಕೃತದಲ್ಲಿ ಈ ನಾಲ್ವರ ಪೈಕಿ ಶ್ರೀಅಕ್ಷೋಭ್ಯತೀರ್ಥರು ಮಧ್ವಮತಕ್ಕೆ ಮಾಡಿದ ಅಪರಿಮಿತ ಉಪಕಾರವನ್ನು ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಶ್ರೀ ಅಕ್ಷೋಭ್ಯತೀರ್ಥರು, ಶ್ರೀಪದ್ಮನಾಭತೀರ್ಥರು ಮತ್ತು ಶ್ರೀನರಹರಿತೀರ್ಥರಂತೆ ಪೂರ್ವಾಶ್ರಮದಲ್ಲಿ ರಾಜಕಾರಣ ಧುರಂಧರರೂ, ಶೂರಧೀರರೂ ಆಗಿದ್ದರು. ಹಿಂದೆ ಕದಂಬ ಯಾದವ ರಾಜ್ಯದಲ್ಲಿ ರಾಜಾಶ್ರಯದ ಉನ್ನತಾಧಿಕಾರಿಗಳಾಗಿದ್ದ ಲೌಕಿಕ ವೈದಿಕ ಚತುರ ಮತಿಗಳ ಮನೆತನಗಳಲ್ಲಿ ಇವರ ಮನೆತನವೂ ಒಂದಾಗಿದೆ.

ಭಾರದ್ವಾಜ ಗೋತ್ರದ ಇವರ ವಂಶಕ್ಕೆ ಸ್ವರ್ಣಭಂಡಾರದವರು ಎಂದು ಉಪನಾಮವಿದ್ದೀತು. ಈ ಸ್ವರ್ಣಭಂಡಾರ ಮನೆತನದ ಮುಂದಾಳುಗಳನ್ನು ಬಾದಾಮಿಯ ಚಾಲುಕ್ಯ ರಾಜರು ಜಮಖಂಡಿ ರಾಜ್ಯಕ್ಕೆ ಮಾಂಡಲೀಕರನ್ನಾಗಿ ಮಾಡಿದ್ದರು. ಜಮಖಂಡಿ ಸಂಸ್ಥಾನದ ಮಾಂಡಲೀಕರಾದ ಸ್ವರ್ಣಭಂಡಾರ ಮನೆತನದಲ್ಲಿ ಶ್ರೀಕೇಶವಭಟ್ಟರು ಅತ್ಯಂತ ಸುಪ್ರಸಿದ್ಧರಾಗಿದ್ದರು. ಈ ಮನೆತನದ ವೈಶಿಷ್ಟ್ಯವೆಂದರೆ.

ಈ ರಾಜ ಕುಲದ ಧುರೀಣರೆಲ್ಲರೂ ಶಾಸ್ತ್ರವಿದ್ಯೆ ಮತ್ತು ಶಸ್ತ್ರ ವಿದ್ಯೆ ಎರಡರಲ್ಲೂ ಪಾರಂಗತರಾಗಿರುತ್ತಿದ್ದರು. ರಾಜರಾದರೂ ಋಷಿಗಳಂತೆ ಇರುವುದು ಈ ಮನೆತನದ ಪರಂಪರಾಪ್ರಾಪ್ತವಾದ ಸದ್ಗುಣವಾಗಿತ್ತು.

ಶ್ರೀಕೇಶವಭಟ್ಟರು-ಜನಕರಾಜ ಮತ್ತು ಧರ್ಮರಾಜರಂತೆ ಧರ್ಮವೀರರೂ ಸದಾಚಾರ ಸಂಪನ್ನರೂ-ಆಧ್ಯಾತ್ಮ ವಿದ್ಯಾ ಕೋವಿದರೂ ಆಗಿದ್ದರು. ಶ್ರೀಕೇಶವಭಟ್ಟರ ಪುತ್ರರೇ ಶ್ರೀ ಗೋವಿಂದಭಟ್ಟರು (ಶ್ರೀಅಕ್ಷೋಭ್ಯತೀರ್ಥರು). ಇವರು ವೀರವರೇಣ್ಯರಾದಂತೆ ವಿದ್ವದ್ವರೇಣ್ಯರೂ ಆಗಿದ್ದರು. ಧೈರ್ಯ ಶೌರ್ಯಗಳಂತೆ ವೈರಾಗ್ಯ ದೈವ ಭಕ್ತಿಗಳೂ ಅವರಿಗೆ ಹಿರಿಯರಿಂದ ಬಳುವಳಿಯಾಗಿ ಬಂದಿದ್ದವು. ಶ್ರೀಕೇಶವಭಟ್ಟರ ಅನಂತರ ಅವರು ಶಾಸನ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಸಮರ್ಥ ರೀತಿಯಿಂದ ಆಡಳಿತವನ್ನು ನಡೆಸಿದರು.

ಆದರೆ ಕೆಲವು ದಿನಗಳಲ್ಲಿಯೇ ಶ್ರೀಗೋವಿಂದ ಭಟ್ಟರಿಗೆ ವಿಷಯದಲ್ಲಿ ವೈರಾಗ್ಯ ಹುಟ್ಟಿತು. ಅವರು ಜಾತ್ಯಾವಿರಕ್ತರು. ಅಗತ್ಯಾ ಲೌಕಿಕ ಕಾರ್ಯಾಸಕ್ತರು!! ಗೌತಮ ಬುದ್ಧರಂತೆ ಒಂದಾನೊಂದು ದಿನ ಶ್ರೀಗೋವಿಂದಭಟ್ಟರು ಐಶ್ವರ್ಯ ತುಂಬಿದ ಅಂತಃಪುರವನ್ನೂ ಧನ ಕನಕಗಳಿಂದ ತುಂಬಿದ ಅರಮನೆಯನ್ನೂ ರಾಜೈಶ್ವರ್ಯವನ್ನೂ ತೊರೆದು ತಪಸ್ಸಿಗೆ ಹೊರಟರು.

ಶ್ರೀಗೋವಿಂದಭಟ್ಟರಿಗೆ ರಾಜಕೀಯವೇ ಹೇಸಿಗೆಯಾಗಿ ತೋರಿತು. ಅವರು ತಮ್ಮ ಸ್ವರೂಪವನ್ನು ಉದ್ಧಾರ ಮಾಡಿಕೊಳ್ಳಲು ಯೋಗ್ಯ ಗುರುಗಳ ನಿರೀಕ್ಷೆಯಲ್ಲಿದ್ದರು. ಅಷ್ಟೊತ್ತಿಗಾಗಲೇ ಶ್ರೀಮದಾಚಾರ್ಯರ ಕೀರ್ತಿ ಜಗದ್ವಿಖ್ಯಾತವಾಗಿತ್ತು. ಶ್ರೀಗೋವಿಂದಭಟ್ಟರು ತಮ್ಮ ಚಿಕ್ಕಪ್ಪನಾದ ಧುಂಡೀ ರಾಜನಿಗೆ ಮಾಂಡಲೀಕ ತನವನ್ನು ಒಪ್ಪಿಸಿ ಶ್ರೀಮಧ್ವಾಚಾರ್ಯರ ದರ್ಶನಕ್ಕೆ ಹೊರಟರು.

ಶ್ರೀಮದಾಚಾರ್ಯರ ದರ್ಶನವಾದ ಕೂಡಲೇ ಶ್ರೀ ಗೋವಿಂದಭಟ್ಟರಿಗೆ ಶ್ರೀಆಚಾರ್ಯಮಧ್ವರಲ್ಲಿ ಅಸದೃಶ ಭಕ್ತಿ ಹುಟ್ಟಿತು. ಶ್ರೀಮದಾಚಾರ್ಯರ ವಾಗ್ವರಿಯನ್ನೂ ತತ್ತ್ವೋಪದೇಶವನ್ನೂ ಕೇಳಿ ಸ್ವೀಕರಿಸಬೇಕೆಂದು ಬಹುವಾಗಿ ಪ್ರಾರ್ಥಿಸಿಕೊಂಡರು.

### ಶ್ರೀ ಗೋವಿಂದಭಟ್ಟರು ಶ್ರೀ ಅಕ್ಷೋಭ್ಯತೀರ್ಥರಾಗಿ ವಿರಾಜಿದ್ದು

ಶ್ರೀಗೋವಿಂದಭಟ್ಟರು ವಿಷಯ ವೈಮುಖ್ಯ ಅಧ್ಯಯನಾಭಿಮುಖ್ಯ, ವೈರಾಗ್ಯ ಪ್ರಾಮುಖ್ಯಗಳನ್ನು ಕಂಡು ಸುಪ್ರೀತ

ರಾದ ಶ್ರೀಮದಾಚಾರ್ಯರು ಅವರಿಗೆ ತಮ್ಮೆಲ್ಲ 37 ಗ್ರಂಥಗಳನ್ನೂ ಅಮೂಲಾಗ್ರವಾಗಿ ಪಾಠ ಹೇಳಿದರು. ಶ್ರೀ ಗೋವಿಂದ ಭಟ್ಟರಿಗೆ ಶ್ರೀಆಚಾರ್ಯಮಧ್ವರು ಸಂನ್ಯಾಸಾಶ್ರಮವನ್ನು ಕೊಟ್ಟು "ಅಕ್ಷೋಭ್ಯತೀರ್ಥ" ಎಂದು ಅನ್ವರ್ಥಕ ಹೆಸರನ್ನಿಟ್ಟು,ಅನುಗ್ರಹಿಸಿದರು.ಯಾವ ಇಂದ್ರಿಯದಿಂದಲೂ ಯಾವ ವಿಷಯದಿಂದಲೂ ಎಂದೂ ಅವರ ಮನಸ್ಸು ಕ್ಷೋಭೆಗೊಳ್ಳುತ್ತಿರಲಿಲ್ಲ. ಆದುದರಿಂದ ಅವರಿಗೆ "ಅಕ್ಷೋಭ್ಯ" ಯೆಂದು ಶ್ರೀ ಆಚಾರ್ಯಮಧ್ವರು ಗುಣಾನುರೂಪವಾದ ನಾಮವನ್ನು ಕೊಟ್ಟಿದ್ದು ಸಾರ್ಥಕವೇ ಆಗಿದ್ದಿತು.

ಮಧ್ವಾಚಾರ್ಯರ ನೇರ ಅನುಯಾಯಿಗಳಾಗಿ ಮಾಧ್ವ ಪೀಠದ ಅಲಂಕಾರ ಮಾಡಿದ ಕೊನೆಯ ಆಚಾರ್ಯರು ಅಕ್ಷೋಭ್ಯತೀರ್ಥರು. ವ್ಯಾಸತೀರ್ಥರು ರಚಿಸಿರುವ "ಜಯ ತೀರ್ಥ ವಿಜಯ"ಕೃತಿಯಲ್ಲಿ ಅಕ್ಷೋಭ್ಯತೀರ್ಥರ ಲೀಲೆಗಳ ಕುರಿತು ವರ್ಣಿಸಲಾಗಿದೆ.

ಇವರು 15 ವರ್ಷಗಳ ಕಾಲ ಶ್ರೀಮಧ್ವಾಚಾರ್ಯರ ಸಂಸ್ಥಾನವನ್ನು ಆಳಿದರು. ಈ ಅವಧಿಯಲ್ಲಿ ಇವರು ನಮ್ಮ ಸಮಾಜಕ್ಕೆ ಅತೀ ಮುಖ್ಯವಾದ ಎರಡು ಮಹಾಕಾರ್ಯಗಳನ್ನು ಸಾಧಿಸಿರುವರು. ಶ್ರೀಅಕ್ಷೋಭ್ಯತೀರ್ಥರು ತಮ್ಮ ಶಿಷ್ಯರಾದ ಜಯತೀರ್ಥರಿಗೆ ಸಕಲ ವೇದಾಂತ ಗ್ರಂಥಗಳ ಪಾಠವನ್ನು ಹೇಳಿದರು.

ಮುಳಬಾಗಿಲಿನಲ್ಲಿ ಅಕ್ಷೋಭ್ಯತೀರ್ಥರು ಮತ್ತು ಆ ಕಾಲದಲ್ಲಿ ಮಾಯಾವಾದವನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಹೆಸರಾಂತ ಆಚಾರ್ಯರಾದ ವಿಜಯನಗರ ಸಾಮ್ರಾಜ್ಯದ ಶ್ರೀವಿದ್ಯಾರಣ್ಯರೊಡನೆ ನಡುವೆ ದ್ವೈತ ಮತ್ತು ಅದ್ವೈತ ಸಿದ್ಧಾಂತ ಕುರಿತಂತೆ ಮುಖಾಮುಖಿ ಚರ್ಚೆ ನಡೆಯಿತು.

ಆ ಸುದೀರ್ಘ ಐತಿಹಾಸಿಕ ಚರ್ಚೆಯಲ್ಲಿ ವಿದ್ಯಾರಣ್ಯರನ್ನು ಅಕ್ಷೋಭ್ಯರು ಸೋಲಿಸಿದರು. ದೇವೋತ್ತಮ ಪರಮ ಪುರುಷ ಶ್ರೀ ಹರಿಯೇ ಈ ಜಗದ ಪರಮ, ನಿತ್ಯ ಸತ್ಯ ಉಳಿದೆಲ್ಲಾ ಜೀವಿಗಳು ಆತನ ಸೇವಕರು ಎಂಬುದನ್ನು ಅಕ್ಷೋಭ್ಯರು ಸಂಶಯಕ್ಕೆಣಿಯಿಲ್ಲದಂತೆ ನಿರೂಪಿಸಿದರು. ಮಧ್ವಾಚಾರ್ಯರ ಸಿದ್ಧಾಂತ ಪ್ರಚಾರದಲ್ಲಿ ಅಕ್ಷೋಭ್ಯರ ಈ ಗೆಲುವು ಒಂದು ಮಹತ್ವ ತಿರುವು ಎಂದೇ ಭಾವಿಸಲಾಗಿದೆ.



ಮಧ್ವಸಿದ್ಧಾಂತದ ಗೆಲುವಿನ ಸಂಕೇತವಾದ ಈ ವಾದದ ಸ್ಮರಣೆಗೆಂದೇ ಮುಳುಬಾಗಿಲಿನಲ್ಲಿಯೇ ಹಂಚುಕಲ್ಲು ಬೆಟ್ಟದ ಶಿರೋಭಾಗದಲ್ಲಿ ವಿಜಯಸೂಚಕವಾದ ಶಿಲಾಸ್ತಂಭವನ್ನು ಪ್ರತಿಷ್ಠಾಪಿಸಿ ಅದರ ಮೇಲೆ, ಅದರ ಹತ್ತಿರದ ಗುಡ್ಡದ ಮೇಲೂ ಸಂಸ್ಕೃತ, ಕನ್ನಡ ಮತ್ತು ತಮಿಳು ಅಕ್ಷರಗಳಲ್ಲಿ ಶ್ಲೋಕವನ್ನು ಕೆತ್ತಿಸಿ ಅವರು ಚಿರಸ್ಮರಣೀಯರಾಗಿ ಕೆಲಸ ಮಾಡಿದ್ದಾರೆ. ಇದನ್ನು ಇಂದಿಗೂ ನೋಡಬಹುದು. ಈ ಅಂಶವನ್ನು ಟೀಕಾಕೃತಪಾದರು ತಮ್ಮ ತತ್ತ್ವಪ್ರಕಾಶಿಕಾ ಗ್ರಂಥದ ಮಂಗಳಾಚರಣ ಶ್ಲೋಕದಲ್ಲಿ ಉಲ್ಲೇಖಿಸಿದ್ದಾರೆ.

ಅಕ್ಷೋಭ್ಯರ ಆದೇಶದಂತೆ ಮಧ್ವಾಚಾರ್ಯರ ಕೃತಿಗಳ ಮೇಲೆ ವ್ಯಾಖ್ಯಾನಗಳನ್ನು ಬರೆದ ಜಯತೀರ್ಥರು, ನಾಡಿ ದುದ್ದಗಲಕ್ಕೂ ಹರಿಪ್ರಜ್ಞೆ ಪ್ರಚಾರ ಮಾಡಿದರು.

ಶಿವಮೊಗ್ಗ ಜಿಲ್ಲೆಯ ಕೂಡ್ಲಿ ಗ್ರಾಮದಲ್ಲಿ ವಿದ್ಯಾರಣ್ಯ ಮಠವಿದ್ದ ಸ್ಥಳದಲ್ಲೇ ತಮ್ಮದೇ ಆದ ಒಂದು ಮಠವನ್ನು ಸ್ಥಾಪಿಸಿ "ತ್ರೈಲೋಕ್ಯ ಭೂಷಣತೀರ್ಥರು"ಎಂಬುವವರಿಗೆ ಆಶ್ರಮ ಕೊಟ್ಟು ಮಧ್ವತತ್ವವನ್ನು ಪ್ರಚಾರ ಮಾಡಲು ಯೋಚಿಸಿದರು. ಅದರಂತೆ ತೀರ್ಥಹಳ್ಳಿ ತಾಲೂಕಿನ ದೂರ್ವಾಸಪುರದಲ್ಲಿ ಇದ್ದ ಅದ್ವೈತ ಮಠಕ್ಕೆ ಪ್ರತಿಯಾಗಿ ತುಂಗಾತೀರದಲ್ಲಿ ಬಾಣಕರ (ಬಾಳಿಗಾರ) ಎಂಬಲ್ಲಿಯೂ ಒಂದು ಸ್ವತಂತ್ರ ಮಠವನ್ನು



ಸ್ಥಾಪಿಸಿ ಲೋಕಪೂಜ್ಯರು ಎಂಬುವವರಿಗೆ ಆಶ್ರಮ ಕೊಟ್ಟು ತತ್ತ್ವಪ್ರಚಾರ ಮಾಡಿದರು.

ಮಧ್ವಾಚಾರ್ಯರ ಬೋಧನೆಗಳನ್ನೊಳಗೊಂಡ ಮಾಧ್ವ ತತ್ವಸಾರ ಸಂಗ್ರಹ ಎಂಬ ಕೃತಿಯನ್ನು ಅಕ್ಷೋಭ್ಯರು ರಚಿಸಿದ್ದಾರೆ. ಆದರೆ ಈಗ ಈ ಕೃತಿ ಲಭ್ಯವಿಲ್ಲ. ಇದಲ್ಲದೇ ವೇದಗಳ ಮುಖ್ಯಾಂಶಗಳನ್ನೊಳಗೊಂಡ "ವೇದ ಸಾರ ಸಂಗ್ರಹ" ಎಂಬ ಕೃತಿಯನ್ನೂ ಇವರು ರಚಿಸಿದ್ದಾರೆ.

ಇವರು 15 ವರ್ಷ ಶ್ರೀಮೂಲ ಸೀತಾರಾಮರನ್ನು ಪೂಜಿಸಿ 1353ರಲ್ಲಿ ಶ್ರೀ ಟೀಕಾರಾಯರಿಗೆ (ಶ್ರೀ ಜಯ ತೀರ್ಥರಿಗೆ )ಸಂಸ್ಥಾನವನ್ನು ಕೊಟ್ಟು 1367 ನೇ ವಿಶ್ವಾವಸು ನಾಮ ಸಂವತ್ಸರದ ಮಾರ್ಗಶೀರ್ಷ ಕೃಷ್ಣ ಪಂಚಮೀ ದಿನ ವೃಂದಾ ವನಸ್ಥರಾದರು. ಇವರ ವೃಂದಾವನವು ಕಾಗಿನಿ ನದಿಯ ದಂಡೆಯ ಮೇಲೆ ಮಳಖೇಡ ಗ್ರಾಮದಲ್ಲಿದೆ.

**"ಶ್ರೀಜಯತೀರ್ಥರ ಕಣ್ಣಲ್ಲಿ ಶ್ರೀಅಕ್ಷೋಭ್ಯತೀರ್ಥರ ವಿದ್ಯಾ ವೈಭವ"**

ಶ್ರೀ ಮದಕ್ಷೋಭ್ಯತೀರ್ಥರು ಶ್ರೀಆಚಾರ್ಯಮಧ್ವರಿಂದ ಕೇಳಿದ ಪಾಠ ವನ್ನು ಚೆನ್ನಾಗಿ ಬಾಯಿ ಪಾಠ ಮಾಡಿ ಎದೆಯಲ್ಲಿ ಮೂಡಿಸಿಕೊಂಡು ಬಿಟ್ಟಿದ್ದರು. ಅದನ್ನೇಲ್ಲಾ ಇಡಿಕಿಡಿಯಾಗಿ ಶ್ರೀ ಟೀಕಾಕೃತ್ಪಾದರಿಗೆ ಪಾಠ ಹೇಳಿದರು.

ಶ್ರೀಟೀಕಾರಾಯರಿಗೆ ಬಂದ ಜ್ಞಾನ ಸಾಕ್ಷಾತ್ ಶ್ರೀ ಆಚಾರ್ಯಮಧ್ವರ ಮುಖದಿಂದ ಬಂದದ್ದೇ!! ಆ ಶ್ರೀಸರ್ವಜ್ಞರ ವಿದ್ಯಾ ಶರಧಿಯಿಂದ ತಮ್ಮ ಜ್ಞಾನಾಂಜಲಿಯನ್ನು ತುಂಬಿ ತಂದ ತತ್ತ್ವಾಮೃತವನ್ನು ಶ್ರೀಅಕ್ಷೋಭ್ಯತೀರ್ಥರು!! ಒಂದು ಹನಿಯೂ ಎಲ್ಲಿಯೂ ಸೋರದಂತೆ ಶ್ರೀ ಜಯತೀರ್ಥ ರೂಪವಾದ ಸತ್ಪಾತ್ರದಲ್ಲಿ ಹನಿಸಿದರು.

ಆ ಜ್ಞಾನದ ಭರಣಿಯನ್ನು ಎಲ್ಲಿಯೂ ಬಸಿಯದಂತೆ ಬೆಸಿಗೆ ಹಾಕಿ ತಂದು ಇವರ ಬೊಗಸೆಯಲ್ಲಿ ಬಾಯಿ ಬಿಚ್ಚಿ ಬಗ್ಗಿಸಿದರು. ಆದುದರಿಂದಲೇ ಶ್ರೀಮಜ್ಜಯತೀರ್ಥರು, ಪ್ರಾಯಃ ತಮ್ಮ ಪ್ರತಿಯೊಂದು ಗ್ರಂಥದ ಪ್ರಾರಂಭದಲ್ಲಿ ಶ್ರೀ ಅಕ್ಷೋಭ್ಯತೀರ್ಥರ ಉಪಕಾರವನ್ನು ನೆನೆಯದೇ ಮುಂದುವರೆ ಯುವುದಿಲ್ಲ .

**ಪದವಾಕ್ಯ ಪ್ರಮಾಣಜ್ಞಾನ್ಮೃತಿ**
**ವಾದಿ ಮದಚ್ಛಿದಃ।**
**ಶ್ರೀಮದಕ್ಷೋಭ್ಯತೀರ್ಥಾಖ್ಯಾನು**
**ಪತಿಷ್ಠೇ ಗುರೂನ್ಮಮ॥**
**ಯೋ ವಿದ್ಯಾರಣ್ಯ ವಿಪಿನಂ**
**ತತ್ತ್ವಮಸ್ಯಸಿನಾಚ್ಛಿನತ್।**
**ಶ್ರೀಮದಕ್ಷೋಭ್ಯತೀರ್ಥಾಯ**
**ನಮಸ್ತಸ್ಮೈ ಮಹಾತ್ಮನೇ।**

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧಿಸುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# ತೊಂಡರಡಿಪ್ಪೊಡಿ ಆಳ್ವಾರ್



– ಡಾ|| ಎನ್.ಕೆ. ರಾಮಶೇಷನ್
82771 46110

ಆಳ್ವಾರರ ಬದುಕು-ಕೃತಿ-ಸಂದೇಶ, ಎಲ್ಲವೂ ಅವರ ಹೃದಯದಿಂದ ಮೂಡಿ ಬಂದವು ಅವರು ಯಾವುದೇ ಲೌಕಿಕ ಇಹದ ಭೋಗ ಭಾಗ್ಯ ಬಯಸಅಲ್ಲ. ಹಾಗೆಂದು ಮಾನವ ಕೋಟಿ, ಇಲ್ಲಿಯ ಬದುಕಿಗೆ ವಿಮುಖರಾಗಬೇಕೆಂಬ ನಕಾರವನ್ನು ಉಚ್ಚರಿಸಅಲ್ಲ. ಇಲ್ಲದ್ದು ಪರಪೀಡಕರಾಗದೆ ಭಗವಂತನಲ್ಲಿ ಭಕ್ತಿ, ಪ್ರಪತ್ತಿ ಮಾಡುತ್ತ ಎಲ್ಲರಿಗೂ ಬೇಕಾದವರಾಗಿ ಇರುವುದರ ಜೊತೆಗೇ ಬದುಕಬೇಕೆಂದು ಸಾರಿದವರು ಆಳ್ವಾರರು ಭಗವಂತನಾದ ಶ್ರೀ ಮನ್ನಾರಾಯಣನಿಗೆ ಸುಪ್ರಭಾತ ಹಾಡಿದ ದಾರ್ಶನಿಕರು ತೊಂಡರಡಿಪ್ಪೊಡಿ ಆಳ್ವಾರರು ತಮಿಳಿನಲ್ಲಿ ತೊಂಡ ಸಂಸ್ಕೃತದಲ್ಲಿ ಭಕ್ತ ಹಾಗೆಯೇ ಪ್ಪೊಡಿ ಎಂದರೆ ಹುಡಿ, ಮಣ್ಣು,ಧೂಳು ''ರೇಣು'' ಎಂದು ಸಂಸ್ಕೃತದಲ್ಲಿ ಅರ್ಥ ಒಟ್ಟಾರೆ ಭಕ್ತಾಂಘ್ರಿರೇಣು ಅಂದರೆ ಭಕ್ತರ ಪಾದಧೂಳಿ (ರೇಣು) ತೊಂಡರಡಿಪ್ಪೊಡಿಯಾಳ್ವಾರರು ಎಂಬುದು ಪ್ರಪತ್ತಿ ಭಾವ ಮನನೀಯ, ಗಮನೀಯ ಕೂಡ ವಿಪ್ರನಾರಾಯಣ ಎಂಬುದು? ಬಹು ಹಿಂದಿನ ಚೋಳಮಂಡಲ (ಸು.ಕ್ರಿ.ಶ.7-9ನೆಯ ಶತಮಾನ)

ಇವರ ಇನ್ನೊಂದು ಹೆಸರು

ಮಂಡಂ ಗುಡಿ ಎಂಬ ಊರು ಅಲ್ಲಿ ವಿಪ್ರನಾರಾಯಣರು ಜನಿಸಿದ್ದು ಪ್ರಭವ ಸಂವತ್ಸರ, ಮಾರ್ಗಶಿರ ಕೃಷ್ಣಪಕ್ಷ ಚತುರ್ದಶಿ ಮಂಗಳವಾರ ಜ್ಯೇಷ್ಠಾನಕ್ಷತ್ರದಲ್ಲಿ ಜನಿಸಿದ ಇವರು, ಅನಂತರದ ದಿನಗಳಲ್ಲಿ ತೊಂಡರಡಿಪ್ಪೊಡಿ ಆಳ್ವಾರ್ ಭಕ್ತರ ಪಾದದಧೂಳು ನಾನು ಎಂದು ನವ್ರುರಾಗಿ ಬದುಕಿದ್ದು ಹಾಗೂ ಶ್ರೀಮನ್ನಾರಾಯಣ ವೈಜಯಂತೀ ಮಾಲಾ ಅಂಶರೆಂದೇ ಪ್ರತೀತಿ ವೇದ ಶಾಸ್ತ್ರದಲ್ಲಿ ಕಾಲಕ್ಕೆ ತಕ್ಕ ರೀತಿಯಲ್ಲಿ ನಡೆದು ವಿಪ್ರನಾರಾಯಣ ಸರ್ವಸಮರ್ಥರಾದರು ಆದರೆ ಮದುವೆಯಾಗದೆ ವಿರಕ್ತರಾಗಿ ಇದ್ದರು.

ಶ್ರೀರಂಗಕ್ಕೆ ಬಂದ ವಿಪ್ರನಾರಾಯಣರು, ಅಲ್ಲಿ ಒಂದು ಕಡೆ ತುಲಸಿಹೂದೋಟ ಬೆಳಸಿ "ಆರಂಗಬೋಲ್" ಎಂದೇ ಹೆಸರಾದ ಶ್ರೀರಂಗನಾಥನಿಗೆ ಪ್ರಿಯವಾದ ತುಲಸೀ ಹೂಗಳನ್ನು ಅರ್ಪಿಸುವ ಸೇವೆ ನಡೆಸುತ್ತಿದ್ದರು. ಇದೇ ಅವರ ದಿನಚರಿ. ಇದೂ ಆ ಜೀವದ ವಿಶೇಷವೇ ಶ್ರೀದೇವಿ ಶ್ರೀಮನ್ನಾರಾಯಣರು ಸುಮ್ಮನಿರುವರೇ?

ಒಂದು ದಿನ ಶ್ರೀದೇವಿಯು "ವಿಪ್ರನಾರಾಯಣನನ್ನು ಭಕ್ತಿ ಲೌಕಿಕದೆಡೆಗೆ ಇವರನ್ನು ತಿರುಗಿಸುವುದು ಆಗದೆ? ಎಂದು ತನ್ನ ಶ್ರೀರಂಗನನ್ನು ಕೋಳಿದಳು. ಸರಿ, ರಂಗನಲೀಲೆ !

ಶ್ರೀರಂಗದ ಸನಿಹ ಇದ್ದ ಒಬ್ಬ ವಾರಾಂಗನೆ, ನರ್ತಕಿಯ ಸಂಬಂಧವಾಗಿ ಬಿಡುವಗಳಿಗೆ ಒದಗುವುದೇ? ಆಕೆಯ ಹೆಸರು, ದೇವದೇವಿ ಒಮ್ಮೆ ಚೋಳರಾಜನಿಂದ ಸನ್ಮಾನಿತಳಾಗಿ ಹಿಂತಿರುಗುವಾಗ, ಹಾಗೆಯೇ ಹಾದಿಯಲ್ಲಿ, ವಿಪ್ರನಾರಾಯಣನ ಉದ್ಯಾನ ನೋಡಿದಳು. ಮರವೊಂದರ ನೆರಳಲ್ಲಿ ಮಲಗಿದ್ದಳು. ಸಖೀ ಜನರು ಸುತ್ತ. ವಿಪ್ರನಾರಾಯಣನಿಗೆ ಇದಾವುದರ ಅರಿವು ಇಲ್ಲ. ಅವರಾಯಿತು ತೋಟದ ಕೆಲಸವಾಯಿತು. ಉದ್ದಕ್ಕೆ ಬೆಳೆದಗಡ್ಡ, ಊರ್ಧ್ವಪುಂಡ್ರಗಳ ಬ್ರಹ್ಮಚರ್ಯದ ಒಂದು ತೇಜಸ್ಸು.

ದೇವದೇವಿಗೆ ತನ್ನನ್ನು ಈ ಗಡ್ಡಧಾರಿ ಗಮನಿಸಲೇ ಇಲ್ಲದೇ? ನನ್ನ ಚೆಲುವನ್ನು ಸ್ವಲ್ಪ ನೋಡಬಾರದೆ? ಎಂಬ ಚಪಲ, ತನ್ನ ತಂಗಿಯಜೊತೆ ಹಾಸ್ಯವನ್ನು ಮಾಡಿದಳು. ಈತನನ್ನು ಮರುಳು ಮಾಡುತ್ತೇನೆ. ಇದೆಲ್ಲವೂ ರಂಗನಲೀಲೆ, ಮರೆಯಬಾರದು! ಸಾಮಾನ್ಯಳಂತೆ ವೇಷಬದಲಿಸಿದಳು. 'ವಿಪ್ರರ' ಬಳಿ ಸಾರಿ ದಯಮಾಡಿ ನನಗೆ ಆಸರೆ ನೀಡಿರಿ. ನನ್ನ ಈ ದೇವದಾಸಿ ಬದುಕು ಮುಗಿದದ್ದು ಕಂಡು ನಿಮ್ಮಂತಹ ಸಜ್ಜನರ ಸಹವಾಸದಲ್ಲಿ ಒಳ್ಳೆಯ ಸಾತ್ವಿಕ ಜೀವನ ನಡೆಸುವಂತಾಗಲಿ ಎಂದು ಪರಿಪರಿಯಾಗಿ ಬೇಡಿದಳು. ಕನಿಕರದಿಂದ ಆಶ್ರಯ ನೀಡಿದರು ಮುಂದೆ?

ಒಂದು ದಿನ ಮಳೆಯೋ ಮಳೆ! ದೇವದೇವಿ ಉದ್ಯಾನದಲ್ಲಿ ಕೆಲಸದಲ್ಲಿ

ತೊಡಗಿದ್ದಾರೆ. ತೊಯ್ದು ತೊಪ್ಪೆಯಾದ ಆಕೆಯನ್ನು ವಿಪ್ರನಾರಾಯಣರು "ಗುಡಿಸಲಿಲ್ಲದ್ದು ಮಳೆನಿಂತ ಮೇಲೆ ಹೋಗು ಎಂದರು. ಒಳಗೆ ಬಂದಳು ತಮ್ಮ ಒಣಗಿದ ವಸ್ತ್ರ ವನ್ನು ನೀಡಿದರು. ಮಳೆ ನಿಲ್ಲಲಿಲ್ಲ. ರಾತ್ರಿ ದಟ್ಟೈಸಿದಳು, ಗುಡಿಸಲಿನಲ್ಲಿ ಇಬ್ಬರೇ ಹೆಣ್ಣು ತನ್ನ ಬಲೆ ಬೀಸಿದಳು. ಹತ್ತಿರ ಬಂದು ವಿಪ್ರರಪಾದಗಳನ್ನು ಮೃದುವಾಗಿ ಒತ್ತುತ್ತ ನಿಕಟ ಸಂಪರ್ಕವಾಗಿ ನೀವು ನನ್ನನ್ನು ಸ್ವೀಕರಿಸಬಹುದಲ್ಲವೇ? ದೇವದೇವಿಯ ಬಲೆಗೆ ವಿಪ್ರರು ಬಿದ್ದರು. ಅವಳ ಆಲಿಂಗನಕ್ಕೆ ವಿಪ್ರನಾರಾಯಣರು ಸೋತರು, ಅಷ್ಟೇ ಆಳ್ವಾರರನ್ನು ವಶ ಪಡಿಸಿಕೊಂಡದ್ದು! ಶ್ರೀರಂಗನ ಕೈಂಕರ್ಯವನ್ನು ಮರೆತರು. ಹೀಗೆ ಮಾಡುವುದೆ ಸ್ವಾಮಿ? ನಮ್ಮ ಭಕ್ತನನ್ನು ಮತ್ತೆ ಮೊದ ಲಿನ ಭಕ್ತ ಬದುಕಿಗೆ ಮರಳಿಸ ಬೇಕಲ್ಲವೇ? ಎಂದಳು ಜಗ ನ್ಮಾತೆ, ಶ್ರೀರಂಗನಿಗೆ ದೇವರು ಒಂದು ಸಂಕಲ್ಪ ಮಾಡಿದ ದೇವಾಲಯದ ಬಂಗಾರದ ಬಟ್ಟಲೊಂದನ್ನು ತಂದು ವೇಷಾಂತರದಲ್ಲಿ ದೇವದೇವಿಗೆ ಕೊಟ್ಟನು. ಅವಳು ಅವರನ್ನು ವಿಶೇಷವಾಗಿ ಉಪಚರಿಸಿದಳು. ಮರುದಿನ ದೇವಾಲಯದಲ್ಲಿ ಬಂಗಾರದ ಬಟ್ಟಲು ಕಳುವು ಆಗಿರುವುದು, ಪ್ರಚಾರವಾಗಿ ರಾಜಭಟರು ಬಂದರು. ದೇವದೇವಿಯ ಸೇವಕಿಯೊಬ್ಬಳ ಮೂಲಕ ಬಟ್ಟಲು ಇರುವುದನ್ನು ಪತ್ತೆ ಹಚ್ಚಿ, ವಿಪ್ರನಾರಾ ಯಣರೇ ಕಳ್ಳರೆಂದು ತೀರ್ಮಾನಿಸಿ ವಿಚಾರಣೆಗೆ ಒಳಪಡಿ ಸಿದರು ಇನ್ನು ಸಾಕು ಭಕ್ತನಿಗೆ ನೋವುಕೊಡುವುದು ಬೇಡ ಎಂದ ಶ್ರೀರಂಗ.

ಆ ರಾತ್ರಿಯೇ ರಾಜನ ಕನಸಿನಲ್ಲಿ ಶ್ರೀರಂಗನಾಥ ಕಾಣಿಸಿಕೊಂಡು ಅವರು ಕಳ್ಳತನ ಮಾಡಿಲ್ಲ ದೇವದೇವಿಗೆ ಬುದ್ಧಿ ಮಾತು ಹೇಳು, ಅವರನ್ನು ಬಿಟ್ಟು ಬಿಡು. ತನ್ನ ನೆಲೆಗೆ ಅವರು ಹಿಂತಿರುಗಲಿ ಎಂದು ಆದೇಶಿಸಿದ ಇವೆಲ್ಲ ಯಾವುದೂ ವಿಪ್ರನಾರಾಯಣರಿಗೆ ನಾಟಕದಂತೆ ಆಗಿ ಬಿಟ್ಟಿತು ಎಂದು ಕೊಂಡರಷ್ಟೇ ಮತ್ತೆ ತಮ್ಮ ತೋಟಕ್ಕೆ ಮರಳಿ ದರು.

ಇದೀಗ ವಿಪ್ರನಾರಾಯಣ ಹೊಸ ಮನುಷ್ಯರಾದರು ದೈವ ಕಾರ್ಯ ಹಾಗೆಯೇ ಬದುಕಲ್ಲಿ ಏನೋ ಬೇಸರ ಘಟನೆ, ನೋವು ಛೀ! ಇಷ್ಟೇ ನಾನೇಕೆ ನನ್ನ ಸ್ವಾಮಿಯನ್ನು ಮರೆತೆ ಎಂದು ನೊಂದಳು, ದೇವದೇವಿಯೂ ಕೂಡ ತನ್ನ ಅಪ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟು ಹೊರಟು ಸ್ವಾಮಿಯ ಸೇವೆ ಯಲ್ಲಿ ನಿರತರಾದಳು. ಭಕ್ತನ ಬದುಕು ಭಗವತ್ಸೇವೆಗೆ ಎಡೆ ಮಾಡಿತು. ವಿಪ್ರನಾರಾಯಣರು ಎರಡು ಪ್ರಬಂಧ ಹಾಡಿದ್ದಾರೆ. ಅವರಿಗೆ ಅನಂತರದಲ್ಲಿ ತೊಂಡರಡಿಪ್ಪೊಡಿಯಾಳ್ವಾರ್ ಭಕ್ತರ ಪಾದಧೂಳಿ ಎಂದೇ ಹೆಸರು ಬರುವಷ್ಟು ಮುಳುಗಿ ದರು. ಸ್ವಾಮಿಕೈಂಕರ್ಯ ಶರಣಾಗತಿಯ ಹಾದಿಯಲ್ಲಿ ಸಾಗುತ್ತ ಸಾಗುತ್ತ !ತಿರುಮಲೈ, ತಿರುಪ್ಪಳ್ಳಿ ಎಳುಚ್ಚಿ ದೇವರನ್ನೇ ಎಚ್ಚರಿಸುವ ಶ್ರೀರಂಗನಾಥ ಸುಪ್ರಭಾತ ಹಾಡಿ ದ್ದಾರೆ.

ತಿರುಮಾಲೈ 45 ಪದ್ಯಗಳು. **ಜಾತಿಮತಕುಲಭೇದ** ಕೂಡದು ಎಲ್ಲ ಮಾನವರಲ್ಲಿ ಭಗವಂತನ ಅಂಶವಿದೆ ಎನ್ನುವ **ಸರ್ವೋದಯ ಭಾವನೆ**, ಆಳ್ವಾರರದು (ಅಂಶವಿದೆ) ಗಜೇಂದ್ರ ಮೋಕ್ಷದ ಉದಾಹರಣೆ ನೀಡುವ ಆಳ್ವಾರರು ದೈವಕೃಪೆ ಇದ್ದರೆ ಮೊಸಳೆಯಂಥ ಸಂಸಾರದ ಕೋಟಲೆಯಿಂದ ತಪ್ಪಿಸಿ ಕೊಂಡು ಶ್ರೀರಾಮನ ಕೃಪೆಗೆ ಪಾತ್ರರಾಗಿ ಇಹದ ಬದುಕು ಸಾರ್ಥಕ್ಯ ಪಡೆದು ಪರಮ ಮುಕ್ತಿಗೂ ದೈವಕೃಪೆಯೇ ಕಾರಣ ಎಂಬುದಾಗಿ 45 ಪಾಶುರಗಳ ಕಾವ್ಯ ಹಾಡಿದ್ದಾರೆ.

ಇನ್ನೊಂದು ರಂಗನಾಥಸ್ವಾಮಿಗೆ ಹಾಡಿರುವ ಸುಪ್ರ ಭಾತ ತಿರುಪಳ್ಳಿ ಎಂದರೆ ಶ್ರೇಷ್ಠವಾದ ಪರಿಸರ/ಗ್ರಾಮ ದೇವಾ ಲಯ,ಎಳುಚ್ಚಿ-ಎಬ್ಬಿಸುವುದು ನಿದ್ರೆಯಿಂದೆಚ್ಚರಿಸುವುದು ಆಳ್ವಾರರು ಶ್ರೀರಂಗನನ್ನು ಪರಿಸರಿಯಾಗಿ ವರ್ಣಿಸುವ ಪದ್ಯ ಗಳು ಆಧ್ಯಾತ್ಮಿಕತೆ ತುಂಬಿಕೊಂಡು ಪುಷ್ಪಗಳ ಉದ್ಯಾನ (ನಾನೆ ಬೆಳೆಸಿದೇನೇ ಸ್ವಾಮಿ) ಹಕ್ಕಿ ಮಾಡು ಸುಪ್ರಭಾತವನ್ನು ಹಾಡು ತ್ತಿವೆ. ತಮ್ಮದೇ ಭಾಷೆಯಲ್ಲಿ ದ್ವಾದಶ ಆದಿತ್ಯರು ತಮ್ಮ ಸುಂದರ ವಾದ ರಥಗಳ ಕೂಡನಿಂತಿದ್ದಾರೆ. ನಿನಗೆ ಸುಪ್ರಭಾತ ಹಾಡಿ ಸ್ತುತಿಸಲು ಏಳು ಶ್ರೀರಂಗನಾಥ ! ಎಲ್ಲ ವೇಷಕ್ಕೂ ಒಳ್ಳೆಯದು ಮಾತು.

ಕಡಿಮಲರ್ಕ್ಕಮಲಂಗಳ್ ಮಲರ್ಂದನ ವಿವ್ವೆಯೋ
ಕದಿರವನ್ ಕನ್ನೈಕಡಲ್ ಮುಳೈತ್ತನನಾವನೋ
ತುಡಿಯಿಡೈಯಾರ್ ಶುರಿ ಕುಳಲ್ ಪಿಳಂದುದ
ಕುಕಿಲುತುತ್ತೇರಿನ್ ಶೂಳ್ ಪುನಲರಂಗಾ ತೊಡೈ
ಯೊತ್ತ ತುಳವಮುಮ್ ಕೂಡೈಯಾಮ್ ಪೊಲಿಂದು
ತೋ ನ್ರಿಯತೋಳ್ ತೊಂಡರಡಿಪ್ಪೊಡಿಯೆನ್ನುಮ್
(ಆಳ್ವಾರರು ಹೆಸರು)
ಅಡಿಯನೈಯಳಿಯನೆನ್ರರುಳಿ ಉನ್ನಡಿಯಾರ್ಕ್ಕು
ಆಳ್ ಪಡುತ್ತಾಯ್ ಪಳ್ಳಿಯಳುನ್ದರುಳಾಯೇ॥

(ಆಳ್‌ಪಡುತ್ತಾಯ್ (ಶಯನದಿಂದ ಏಳು ಸ್ವಾಮಿ, ಎಲ್ಲ ರನ್ನೂ ಕೃಪೆಗೈಯಿ)

ಭಕ್ತಾಂಘ್ರಿರೇಣು ಎಂಬ ದಾಸ ಭೂತನಾದ ಈ ಜೀವ ನನ್ನು ಕೃಪೆ ಮಾಡಿ ಅನುಗ್ರಹಿಸು ಇದೇ ಜಗತ್ತನ್ನು ಸದಾ ಸಂರಕ್ಷಿಸು ಸ್ವಾಮಿ!



## ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ।। ಬಿ.ಎನ್.ಶ್ರೀನಿವಾಸನ್

### ಕಳೆದ ಸಂಚಿಕೆಯಿಂದ

**ತಿರುಮಲೆಯ ಆಲಯದಲ್ಲಿ ನಿತ್ಯಪೂಜಾ ವಿವರ**

**1. ಆರಾಧನಾ ವಿವರ :**

ಪರಮ ಪುರುಷನ ಅಸೀಮ ಶಕ್ತಿಯ ಸೀಮಿತ ಅಭಿವ್ಯಕ್ತಿಯಾಗಿ ಆತನ ವಿಗ್ರಹ, ಅರ್ಚಾಮೂರ್ತಿಯಿರುತ್ತದೆ ಎಂಬುದು ಹೈಂದವ ಪರಂಪರೆಯಲ್ಲಿ ಹರಿದು ಬಂದಿರುವ ಪ್ರಬಲವಾದ ನಂಬಿಕೆಯಾಗಿದೆ. ಪುರುಷಸೂಕ್ತವು ದೇವರು ಸಾವಿರ ತಲೆಗಳನ್ನೂ-ಅಸಂಖ್ಯ ಶಿರಗಳನ್ನು - (ಸಹಸ್ರ ಶೀರ್ಷಃ ಪುರುಷಃ)- ಹೊಂದಿರುವವನೆಂದು ಘೋಷಿಸುವುದು. ಹೀಗಾಗಿ ಅತ್ಯಂತ ಅಮೇಯನಾದ ಆತನನ್ನು ವಿವರಿಸುವ ರೂಪಗಳಿಗೆ ಕೊನೆಯೇ ಇಲ್ಲವೆಂಬುದು ಸಿದ್ಧವಾಗುವುದು. ಇದರಿಂದಾಗಿಯೇ ಹಲವು ಹನ್ನೊಂದು ಗುಡಿ ಮಂದಿರಗಳಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ನಡೆಯುವ ಪೂಜಾವಿಧಾನದಿಂದ ಭಕ್ತ ಮನುಷ್ಯನ ಗಮನವನ್ನು ಹಂತಹಂತವಾಗಿ ಮೇಲ್ಮಟ್ಟಕ್ಕೆ ಒಯ್ಯುತ್ತ ಆ ಪರಮ ಪುರುಷನ ಸಾಕ್ಷಾತ್ಕಾರಕ್ಕೆ ಸಾಧನವಾಗುವಂತೆ ಏರ್ಪಾಡುಗಳನ್ನು ಮಾಡಲಾಗಿದೆ. ಆಲಯ ಪೂಜಾ ವಿಧಾನವು ಮನುಷ್ಯನಿಗೆ ತನ್ನ ಒಳಗೇ ಇರುವ ಆ ಪರಮಾತ್ಮನ ಸಾಕ್ಷಾತ್ಕಾರದ ಹಾದಿಯಲ್ಲಿ ಸಾಧನೆಗೆ ಇಂಬು ನೀಡುವುದು.

ಶ್ರೀಕೃಷ್ಣ ಪರಮಾತ್ಮನು ತನ್ನ ಬಳಿಗೆ ಬರುವವರನ್ನು ನಾಲ್ಕು ವಿಧವೆಂದು ವಿಂಗಡಿಸಿದ್ದಾನೆ.

1) ಆರ್ತಿಗಳು 2) ಅರ್ಥಾರ್ಥಿಗಳು 3) ಜಿಜ್ಞಾಸುಗಳು 4) ಜ್ಞಾನಿಗಳು.

ಈ ನಾಲ್ಕು ವಿಧದವರು ಸ್ವಾಮಿ ಶ್ರೀವೆಂಕಟೇಶ್ವರನಲ್ಲಿಗೂ ಬರುತ್ತಾರೆ. ಆತನ ಕರುಣೆಯೆಂದರೆ ಅವರವರು ಅಪೇಕ್ಷಿಸಿದ್ದನ್ನು ನೀಡುವುದು. ದೇವರ ದಯೆ ಎಲ್ಲರ ಮೇಲೂ ಸಮಾನವಾಗಿಯೇ ಹರಿದರೂ ಪ್ರತಿಯೊಬ್ಬರೂ ತಮ್ಮ ಆಧ್ಯಾತ್ಮ ಸಾಧನೆಯ ಸಾಮಾರ್ಥ್ಯಕ್ಕನುಗುಣವಾಗಿ ಪಡೆಯುತ್ತಾರೆ. ದೇವರ ದಯಾಕಿರಣ ಆ ದಾರಿಯಲ್ಲಿ ಬಂದವರ ಮೇಲೆಲ್ಲ ಸಮವಾಗಿ ಬೀಳುತ್ತದೆ. ಆದರೆ ಯಾರಾದರೂ ಇತರತ್ರ ನೆರಳಿನಲ್ಲಿದ್ದರೆ, ಕೋಣೆಯಲ್ಲಿದ್ದರೆ (ತಮ್ಮದೇ ಆದ ಕತ್ತಲೆಯಲ್ಲಿದ್ದರೆ) ಅವರಿಗೆ ಕಡಿಮೆ ಬೆಳಕು ಸಿಗುವುದು ಸಹಜ.

ಆಗಮ ಶಾಸ್ತ್ರಗಳ ವಿಧಿಯಂತೆ ಪೂಜೆ ಆರಾಧನೆಗಳನ್ನು ಮಾಡುವುದು ಎಂದರೆ ಒಂದು ಮೇಲ್ಮಟ್ಟದ ಆಧ್ಯಾತ್ಮಿಕ ಜಾಗೃತಿಗಾಗಿ ಹಂಬಲಿಸುವುದು. ಇದು ತಮ್ಮದೇ ಆದ ತಮಸ್ಸಿನ ಕೋಣೆಯಿಂದ ವಿಸ್ತಾರದ ಹೊರಬಯಲಿಗೆ ಬೆಳಕಿಗೆ ಬರುವುದರಂತೆ. ಎಲ್ಲರೂ ತನ್ನ ಕೃಪೆಗೆ ಪಾತ್ರರಂತೆ ಬಗೆಯುವ ದೈವ ಎಲ್ಲರ ಮೇಲೂ ತನ್ನ ಕೃಪೆಯನ್ನು ವರ್ಷಿಸುತ್ತದೆ. ಹೀಗಾಗಿ ಭಕ್ತನು ಪಡೆಯುವುದು ಅವನ ಸ್ಥಿತಿಯನ್ನೇ ಅವಲಂಬಿಸುವುದು. ಅವನ ಸದ್ಯದ ಅಗತ್ಯ ದೈಹಿಕ,ಆರ್ಥಿಕ ಆಗಿದ್ದಲ್ಲಿ ಅದನ್ನೇ ಪಡೆಯುತ್ತಾನೆ. ಇನ್ನೂ ಮೇಲ್ಮಟ್ಟದಲ್ಲಿರುವವರು ದೈವದ ಅಪರಂಪಾರ ಕರುಣೆಗೆ ಈಡಾಗಿ ತಮ್ಮ ಆತ್ಮೋದ್ಧಾರ ಮಾಡಿಕೊಳ್ಳುವರು. ಇಂತಹವರು ಹಲವರು ಮಾತ್ರವೇ ಎಂದರೂ, ಇಂತಹವರೂ ಇದ್ದಾರೆ ಎಂಬುದು ನಿಜ. ಇಂತಹವರ ಎದುರಿಗೆ ಬಂದಾಗ ಸಂತಸವುಂಟಾಗಿ ಮೇಲಿನ ಹಂತವನ್ನು ಸೇರಿದಂತೆ ಭಾಸವಾಗುತ್ತದೆ. ಇಂತಹ ಉನ್ನತಿಯನ್ನು ಪಡೆಯಲು,ನಿಧಾನವಾಗಿ ಐಹಿಕ ಆಸೆ ಆಕಾಂಕ್ಷೆಗಳನ್ನು ದೂರೀಕರಿಸಿ,ಆಧ್ಯಾತ್ಮಿಕ ತೃಪ್ತಿಯನ್ನು ಪಡೆಯುತ್ತ ಲೌಕಿಕ ಅಗತ್ಯಗಳಿಲ್ಲದಂತೆ ಆಗಲು,ದೈವವನ್ನು ಅದಕ್ಕಾಗಿಯೇ ಆಶ್ರಯಿಸುವಂತಾಗಲು ಆಗಮಶಾಸ್ತ್ರಗಳು ಪೂಜಾ ವ್ಯವಸ್ಥೆ ಪೂಜಾ ವಿಧಾನಗಳನ್ನು ಏರ್ಪಡಿಸಿವೆ.

**2. ಆಗಮವಿಚಾರ:**

ತಿರುಮಲೆಯ ಆಲಯದ ಪೂಜಾ ವಿಧಾನವು ವೈಖಾನಸ ಆಗಮದ ಅನುಸಾರವಾಗಿ ನಡೆಯುತ್ತದೆ. ಭವಿಷ್ಯೋತ್ತರ ಪುರಾಣದಲ್ಲಿ ಹೇಳಿರುವಂತೆ ವಿಖನಸ ಮಹರ್ಷಿಯು ಶ್ರೀಕೃಷ್ಣನ ಬಾಲಲೀಲೆಗಳನ್ನು ಅನುಭವಿಸಿ ಆನಂದಿಸಿ ಬಾಲಕೃಷ್ಣನ ದರ್ಶನಕ್ಕಾಗಿ ತಪಸ್ಸು ಮಾಡಿದನು. ಅದರಂತೆ ಶ್ರೀಕೃಷ್ಣನು ಅವನಿಗೆ ದರ್ಶನವಿತ್ತು ವೆಂಕಟಾಚಲದ ಮೇಲೆ ತನ್ನನ್ನು ಶ್ರೀನಿವಾಸನ ರೂಪದಲ್ಲಿ ಅರ್ಚಿಸಿ ತೃಪ್ತನಾಗಬೇಕೆಂದೂ ಬೆಟ್ಟದ ಮೇಲೆ ತನ್ನ ಇರುವಿಕೆಯನ್ನು ಗುರುತಿಸುವಲ್ಲಿ ರಂಗದಾಸನೆಂಬ ಭಕ್ತನು ನೆರವು ನೀಡುವನೆಂದೂ ತಿಳಿಸಿ

ದನು. ವಿಖನಸ ಮಹರ್ಷಿಯು ನಂತರ ತಿರುಮಲೆಗೆ ಆಗಮಿಸಿ ರಂಗದಾಸನ ನೆರವಿನಿಂದ ಶ್ರೀನಿವಾಸನ ನೆಲೆಯನ್ನು ಕಂಡುಕೊಂಡು ಸ್ವಾಮಿಯನ್ನು ಅರ್ಚಿಸಿದ. ಹೀಗಾಗಿ ತಿರುಮಲೆಯ ದೇವರನ್ನು ಅರ್ಚಿಸಿದವರಲ್ಲಿ ಮೊದಲಿಗ ವಿಖನಸ ಮಹರ್ಷಿ. ಹೀಗಾಗಿ ಇಂದಿಗೂ ವೈಖಾನಸ ಆಗಮದ ಅನುಸಾರವಾಗಿಯೇ ತಿರುಮಲೆಯಲ್ಲಿ ಪೂಜೆ ನಡೆಯುತ್ತದೆ. ವೈಖಾನಸ ಆಗಮವು ದಿನವೊಂದಕ್ಕೆ ಆರು ಬಾರಿ ಪೂಜೆ ನಡೆಸಬೇಕೆನ್ನುತ್ತದೆ.

1) ಪ್ರತ್ಯೂಷ (ಅರುಣೋದಯ) 2) ಪ್ರಭಾತ (ಪ್ರಾತಃಕಾಲ) 3) ಮಧ್ಯಾಹ್ನ 4) ಅಪರಾಹ್ನ 5) ಸಾಯಂಕಾಲ 6) ನಿಶೆ (ಅರ್ಧಯಾಮ ಅಥವಾ ಮಧ್ಯ ರಾತ್ರಿ)

ಒಂದು ದಿನಕ್ಕೆ ಆರುಬಾರಿ ಆಗಮದಲ್ಲಿ ವಿಧಿಸಿದಂತೆ ತಿರುಮಲೆಯಲ್ಲಿ ಎಂದಾದರೂ ಪೂಜೆ ನಡೆಯುತ್ತಿತ್ತು ಎನ್ನಲು ಆಧಾರಗಳಿಲ್ಲ. ಕುಲಶೇಖರ ಆಳ್ವಾರರು ತಿರುಮೊಳಿಯ 1-7 ನೇ ಪಾಶುರಗಳಲ್ಲಿ ಶ್ರೀರಂಗದಲ್ಲಿ ದಿನಕ್ಕೆ ಆರುಬಾರಿ ಪೂಜೆ ಆಗುವುದು ಎಂದು ಹೇಳಿದರೂ ತಿರುಮಲೆಯ ಬಗ್ಗೆ ಹೇಳಿಲ್ಲ. ಈಗ ಮಾರ್ಗಶಿರ ಮಾಸದ ಹೊರತು ಮತ್ತೆಂದೂ ಆಲಯದಲ್ಲಿ ಪ್ರಾತಃಕಾಲದ ಮೊದಲು ಪೂಜೆ ನಡೆಯುತ್ತಿಲ್ಲ. ಸೂರ್ಯ ಹುಟ್ಟಿದ ತತ್‌ಕ್ಷಣದ ಪೂಜೆಯೂ ಇಲ್ಲ. ಮಧ್ಯಾಹ್ನ ಪೂಜೆಯು ಸ್ಥೂಲವಾಗಿ ಇಂದಿನ ತೋಮಾಲಸೇವೆಗೆ ಅರ್ಚನೆಗೆ ಹೊಂದುವುದು.

ಆಲಯದಲ್ಲಿ ಎರಡನೇ ಗಂಟೆಯ ಹೊತ್ತಿನಲ್ಲಿ ನಡೆಯುವ ಎರಡನೆ ಅರ್ಚನೆ ಅಪರಾಹ್ನ ಪೂಜೆಗೆ ಹೊಂದುವುದು. ಇದನ್ನೂ ಸಹ ಸಂಗ್ರಹವಾಗಿ ನಡೆಸಲಾಗುವುದು. ಸಾಯಂಕಾಲ ಪೂಜೆಯು ಪರಿಪೂರ್ಣವಾಗಿ ಖಾಸಗಿಯಾಗಿ ಅರ್ಚಕರು ಮಾತ್ರವೇ ಇದ್ದು ಮಾಡುವಂತಹದು. ನಿಶಿಪೂಜೆಯು ರಾತ್ರಿಯ ಏಕಾಂತ ಸೇವೆಗೆ ಹೊಂದಿದಂತೆ ಇದ್ದರೂ ಅದು ಶಾಸ್ತ್ರಪ್ರೋಕ್ತ ಪೂಜೆಯೇ ಅಲ್ಲ.

ಪ್ರಾಚೀನ ಕಾಲದಿಂದಲೂ ವೈಖಾನಸಾಗಮರೀತ್ಯಾ ಪೂಜಾ ವಿಧಾನಗಳು ನಡೆದು ಬಂದಿದೆಯೆಂಬ ಶಾಸನಾಧಾರದ ಚರಿತ್ರೆಯಿದ್ದರೂ ನಿಯಮಬದ್ಧವಾದ ಷಟ್ಕಾಲಪೂಜೆ ನಡೆದಿಲ್ಲ. ಉದಾಹರಣೆಗೆ ಕ್ರಿ.ಶ.966 ರಲ್ಲಿ ರಜತ ಭೋಗಶ್ರೀನಿವಾಸಮೂರ್ತಿಯನ್ನು ಆಲಯದಲ್ಲಿ ಸ್ಥಾಪಿಸಿದ ಪಲ್ಲವ ರಾಣಿ ಸಾಮವೈ ಹಾಕಿದ ಶಾಸನದಂತೆ ದೇವರಿಗೆ ಪ್ರತಿನಿತ್ಯವೂ ನಾಲ್ಕು ನಾಳಿ ಅನ್ನದ ನೈವೇದ್ಯವಿದೆ.

ಈ ಆಹಾರ ನಿವೇದನೆಯು ಒಮ್ಮೆ ಮಾತ್ರವೇ ನಿವೇದಿಸುವಷ್ಟು ಮಾತ್ರವೆನ್ನಬಹುದು. ಷಟ್ಕಾಲ ಪೂಜೆ ನಡೆದಿತ್ತು ಎನ್ನುವ ಯಾವುದೇ ಶಾಸನದ ದಾಖಲೆಯೂ ನಮಗೆ ದೊರೆತಿಲ್ಲ. ಕ್ರಿ.ಶ.1434 ರ ತಿರುಕ್ಕಲಿ ಕನ್ರಿದಾಸರ್ ಹಾಕಿದ ಶಾಸನದಂತೆ ಅರುಣೋದಯ ಕಾಲದ ಪೂಜೆ ನಡೆದರೂ ಇದು ದಕ್ಷಿಣಾಯನ ಕಾಲಕ್ಕೆ ಮಾತ್ರ ಸೀಮಿತವಾಗಿದ್ದಿತು. ಹೀಗಾಗಿ ಆಲಯದಲ್ಲಿನ ಪೂಜಾ ಪದ್ಧತಿಯು ವೈಖಾನಸ ಆಗಮ ಶಾಸ್ತ್ರಾನುಸಾರಿ ಆಗಿದ್ದರೂ,ಈ ಶಾಸ್ತ್ರವೇ ಹೇಳುವ ಕಟ್ಟುನಿಟ್ಟಾದ ಷಟ್ಕಾಲ ಪೂಜಾ ನಿಯಮವನ್ನು ಇಲ್ಲಿ ಪರಿಪಾಲಿಸಲಾಗಿಲ್ಲವೆನ್ನಬಹುದು.

ವೈಖಾನಸ ಆಗಮದ ಪ್ರಕಾರ ಷಟ್ಕಾಲಪೂಜೆಯು ಭಕ್ತರ ಐಹಿಕ ಅಭಿವೃದ್ಧಿಗಾಗಿ ಮಾಡಲಾಗುವುದು. ಉಷಃಕಾಲ ಪೂಜೆಯಿಂದ ಸಂತಾನ, ಗೋಸಂಪದಾಭಿವೃದ್ಧಿ,ಪ್ರಾತಃಕಾಲ ಪೂಜೆಯಿಂದ ಜಪ ಹೋಮಾಭಿವೃದ್ಧಿ-ಮಧ್ಯಾಹ್ನ ಕಾಲಪೂಜೆಯಿಂದ ಸಂಪದಾಭಿವೃದ್ಧಿ, ಹಾಗೂ ರಾಜ್ಯಾಭಿವೃದ್ಧಿ,ಅಪರಾಹ್ನ ಕಾಲಪೂಜೆಯಿಂದ ದುಷ್ಟ ದಮನ,ಸಾಯಂಕಾಲ ಪೂಜೆಯಿಂದ ವ್ಯವಸಾಯೋತ್ಪನ್ನಗಳ ಹೆಚ್ಚಳ, ನಿಶಿಪೂಜೆಯಿಂದ ಜಾನುವಾರು ಸಂಪತ್ತು ಸಾಧನೆಯಾಗುತ್ತವೆ.

ಷಟ್ಕಾಲ ಪೂಜೆಯು ಹಲವಾರು ಕಾರಣಗಳಿಂದ ಆಚರಣೀಯ ಆಗದೆ ಅಸಾಧ್ಯವಾಗಬಹುದೆಂದು ಆಗಮಗಳು ಗ್ರಹಿಸಿಯೇ ಷಟ್ಕಾಲ ಪೂಜೆಗೆ ಪರ್ಯಾಯ ಆಗಿ ತ್ರಿಕಾಲ, ದ್ವಿಕಾಲ, ಏಕಕಾಲ ಪೂಜೆಗಳನ್ನು ವಿಧಿಸಿದವು.

ಪಾಂಚರಾತ್ರ ಆಗಮವು ವೈಖಾನಸ ಅಗಮದಿಂದ ಮುಂದುವರೆದು ಭಕ್ತರ ಅನುಕೂಲಕ್ಕೆ ತಕ್ಕಂತೆ ಒಂದು, ಎರಡು, ಮೂರು, ಆರು, ಕಡೆಗೆ ಹನ್ನೆರಡು ಬಾರಿಯೂ ಪೂಜೆ ಮಾಡುವ ಅವಕಾಶ ನೀಡುತ್ತದೆ.

ಪ್ರಸ್ತುತ ತಿರುಮಲೆಯಲ್ಲಿ ನಿಜವಾಗಿ ಮೂರು ಪೂಜೆಗಳುಂಟು. ಬೆಳಗ್ಗೆಗಳಲ್ಲಿ ಭಕ್ತರು ಭಾಗವಹಿಸಲು ಅವಕಾಶವಿರುವ ತೋಮಾಲ ಸೇವೆ, ಮಧ್ಯಾಹ್ನದಲ್ಲಿ ಒಂದು.ಸಂಗ್ರಹ ಪೂಜೆಗಳಾಗಿ ರಾತ್ರಿಯಲ್ಲಿ ಖಾಸಗಿಯಾಗಿ ನಡೆಯುವ ಪೂಜೆಯಲ್ಲಿ ಅರ್ಚಕ, ಆಚಾರ್ಯ ಪುರುಷರು ಮಾತ್ರ ಭಾಗವಹಿಸುವರು.

ನಿತ್ಯನೈಮಿತ್ತಿಕ ಪೂಜೆಗಳು ತಿರುಮಲೆಯಲ್ಲಿ ವೈಖಾನಸ ಆಗಮದ ಪ್ರಕಾರವೇ ನಡೆಯುತ್ತದೆಯಾದರೂ ಅಲ್ಲಲ್ಲಿ ಕ್ವಚಿತ್ತಾಗಿ ಕಾಲದ ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಬದಲಾವಣೆಯೂ ಉಂಟು. ವೈಖಾನಸ ಶಾಸ್ತ್ರವು ವೈಖಾನಸರಾಗಿ ಹುಟ್ಟದವರಿಗೆ ಪೂಜಾಧಿಕಾರವನ್ನೇ ನೀಡುವುದಿಲ್ಲ. ಪ್ರಾಯೋಗಿಕವಾದ ಅಗತ್ಯಗಳಿಂದಾಗಿ ಇತರರು ಮಾಡಿದರೆ ಅವರನ್ನು ದೇವಲಕ ಎಂದು ಕರೆಯಲಾಗುತ್ತದೆ. ತಿರುಮಲೆಯಲ್ಲಿ ಪರಿಚಾರಕ ಸನ್ಯಾಸಿಯಾಗಿ, ಮಂತ್ರ ಪುಷ್ಪ ಪಾರಾಯಣ ಮಾಡುವವರು ಆಚಾರ್ಯ ಪುರುಷರು. ಇವರುಗಳು ವೈಖಾನಸರಲ್ಲವೆಂದು ಹೇಳುವುದಾದರೂ ದೇವರ ಭಕ್ತರಾಗಿ ಪೂಜೆಯಲ್ಲಿ ಪಾಲುಗೊಳ್ಳುವರು.



(ಮುಂದುವರೆಯುತ್ತದೆ)

# ಶ್ರೀ ಜಿತಾಮಿತ್ರ ತೀರ್ಥರು

ಡಾ|| ವೃಂದಾ ಸಂಗಮ್
94499 06208

**"ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಮ್।**
**ಜಿತಾಮಿತ್ರ ಗುರುಂ ವಂದೇ ವಿಭುಧೇಂದ್ರ ಕರೋದ್ಭವಮ್॥"**

**"ನ ಹಿ ಜ್ಞಾನೇನ ಸದೃಶಂ"** ಎಂದರೆ **"ಜ್ಞಾನಕ್ಕೆ ಸಮಾನ ವಾದದ್ದು ಇನ್ನೊಂದಿಲ್ಲ"**. ಶ್ರೀಮಧ್ವಾಚಾರ್ಯರಿಂದ ಹರಿದು ಬಂದ ಜ್ಞಾನವು. ಶಿಷ್ಯರ ಪರಂಪರೆಯ ಮೂಲಕ ಮುಂದುವರೆದು ಲೋಕವಿಖ್ಯಾತ ರಾದವರಲ್ಲಿ ರುದ್ರಾಂಶ ಸಂಭೂತರಾದ ಶ್ರೀ ಜಿತಾಮಿತ್ರರೂ ಒಬ್ಬರು. ರಾಯಚೂರು ಸಮೀಪದಲ್ಲಿ ಜಿತಾಮಿತ್ರ ಗಡ್ಡೆಯಲ್ಲಿರುವ ಗೋನ ಎಂದರೆ, ಜ್ಞಾನದ ಮರದ. ಕೆಳಗೆ ಧ್ಯಾನ ಪಾಠ ಪ್ರವಚನ ಮಾಡುತ್ತಿದ್ದರು. ರಾಯ ಚೂರು ಜಿಲ್ಲೆ ಶಿವಪುರದ ಶಾನಭೋಗರ ಮಗ ಅನಂತಪ್ಪನಿಗೆ, ಬಾಲ್ಯ ದಲ್ಲಿಯೇ ತಂದೆ-ತಾಯಿಗಳ ವಿಯೋಗವಾಗಿ, ಅಕ್ಕನೇ ಅಕ್ಕರೆಯಿಂದ ಸಾಕಿ ದಳು. ವಂಶ ಪಾರಂಪಕರಿಕವಾಗಿ ಬಂದಿದ್ದು ಶಾನುಭೋಗ ವೃತ್ತಿ. ಶಾಲೆಗೆ ಹೋಗುವುದಕ್ಕಿಂತ ದನ ಕಾಯುವುದರಲ್ಲೇ ಸಂತಸ. ಅಕ್ಕನೇ ಉಪನಯನ ಮಾಡಿಸಿ, ಹಾಕಿದ ಯಜ್ಞೋಪವೀತವನ್ನು ನೆಲಕ್ಕೆ ತಾಕಿಸಬಾರದೆಂದು, ಊಟಕ್ಕೆ ಕೂಡುವ ಮೊದಲು ಜನಿವಾರವನ್ನು ಧರಿಸಿ ಮತ್ತೆ ಊಟದ ನಂತರ ಜನಿವಾರವನ್ನು ಗೂಟಕ್ಕೆ ಹಾಕಿ ಬಿಡುವ ಮುಗ್ಧತೆ.

ಒಮ್ಮೆ ಸಂಚಾರಾರ್ಥವಾಗಿ ಶ್ರೀರಾಯರ ಮಠದ ಪರಂಪರೆಯ, ಶ್ರೀ ವಿಭುದೆಂದ್ರ ತೀರ್ಥರು ಅನಂತಪ್ಪನ ಶಾನುಭೋಗ ಆಡಳಿತಕ್ಕೆ ಸೇರಿದ ಶಹಾಪುರ ತಾಲೂಕಿನ ಅಗ್ನಿಹಾಳ ಗ್ರಾಮಕ್ಕೆ ಆಗಮಿಸಿದಾಗ ಅನಂತಪ್ಪ ಶ್ರೀಗಳನ್ನು ಸ್ವಾಗತಿಸಿದ. ಕೊರಳಲ್ಲಿ ಜನಿವಾರವಿಲ್ಲದ್ದು ಕಂಡು ಶ್ರೀಗಳು, "ಯಜ್ಞೋಪವೀತ ಎಲ್ಲಿ? ಎಂದಾಗ ಅನಂತಪ್ಪ ಯಜ್ಞೋಪವೀತ ಎಂದರೇನು? ಎಂದು ಪ್ರಶ್ನಿಸುತ್ತಾನೆ. ಯತಿಗಳು ಯಜ್ಞೋಪವೀತ ಗಾಯತ್ರಿ ಮಂತ್ರದ ಮಹತ್ವವನ್ನು ತಿಳಿಸಿಕೊಡುತ್ತಾರೆ. ಪ್ರಾಂಜಲ ಮನಸ್ಸಿನ ಅನಂತಪ್ಪನನ್ನು ಅನುಕಂಪದಿಂದ ಕರೆದು ಪದೇ ಪದೇ ಜನಿವಾರ ತೆಗೆದರೆ ಕಾವಿಯುಡುವ ಜನಿವಾರವಿಲ್ಲದ ಸನ್ಯಾಸಿಯಾಗುವಿ ಎಂದು ಹೇಳಿ, ಒಂದು ನರಸಿಂಹ ಸಾಲಿಗ್ರಾಮವನ್ನು ಕೊಟ್ಟು ದಿನಾಲು ಅದಕ್ಕೆ ಸ್ನಾನ ಮಾಡಿಸಿ ಊಟ ಮಾಡಿಸಬೇಕೆಂದು ಆಡುಭಾಷೆಯಲ್ಲಿ ಅಭಿಷೇಕ, ನೈವೇದ್ಯಗಳ ಬಗ್ಗೆ ಹೇಳುತ್ತಾರೆ. ಸ್ನಾನ ಮಾಡಿ ಶುದ್ಧವಾದ ಅಡುಗೆಯನ್ನು ತಯಾರಿಸಿ, ನರಸಿಂಹ ಸಾಲಿಗ್ರಾಮಕ್ಕೆ ಅಭೀಷೇಕಗೈದು ನೈವೇದ್ಯ ಸ್ವೀಕರಿಸುವಂತೆ ಒತ್ತಾಯಿಸಿದರೆ, ಸಾಲಿಗ್ರಾಮ ಬಾಯಿ ತೆಗೆಯುವುದಿಲ್ಲ. ಇದು ನನ್ನ ಗುರುಗಳ ಆಜ್ಞೆ, ನೀನು ಸ್ವೀಕರಿಸದಿದ್ದರೆ ನಾನು ಈ ಬಂಡೆಗಲ್ಲಿಗೆ ನನ್ನ ತಲೆಯನ್ನು ಜಜ್ಜಿಕೊಂಡು ಪ್ರಾಣ ಬಿಡುತ್ತೇನೆ ಎಂದು ಹೇಳುತ್ತಾನೆ. ಆದರೂ ನರಸಿಂಹ ಸಾಲಿಗ್ರಾಮ ಬಾಯಿ ತೆಗೆಯುವುದಿಲ್ಲ. ಅನಂತಪ್ಪ ತನ್ನ ತಲೆಯನ್ನು ಪ್ರಾಣ ಬಿಡುವ ವರೆಗೂ ಜಜ್ಜುತ್ತೇನೆ ಎಂದು ಹೇಳುತ್ತಾ ಜಜ್ಜಿಕೊಳ್ಳಲು ಪ್ರಾರಂಭಿಸುತ್ತಾನೆ. ಭಕ್ತಾಧೀನನಾದ ನರಸಿಂಹ ದೇವರು ನಗುತ್ತಾ ತಮ್ಮ ಬಾಯಿ ತೆಗೆಯುತ್ತಾರೆ. ಕೂಡಲೇ ಅನಂತಪ್ಪ ನೈವೇದ್ಯವನ್ನೆಲ್ಲ ಆ ಸಾಲಿಗ್ರಾಮದ ಬಾಯಿಯಲ್ಲಿ ಹಾಕುತ್ತಾನೆ. ನೈವೇದ್ಯ ಸ್ವೀಕರಿಸಿ, ಶ್ರೀಹರಿಯು ತೃಪ್ತನಾಗಿ ಆಶೀರ್ವಾದಿ ಸುತ್ತಾನೆ. ಹೀಗೆ ಸಾಲಿಗ್ರಾಮ ರೂಪಿ ಪರಮಾತ್ಮನನ್ನು ಒಲಿಸಿಕೊಂಡವರು ಶ್ರೀ ಜಿತಾಮಿತ್ರರು.

ವಯಸ್ಸಿಗೆ ಬಂದ ಅನಂತಪ್ಪನಿಗೆ ತಕ್ಕ ಕನ್ಯೆಯೊಂದಿಗೆ ವಿವಾಹ ವಾಯ್ತು. ಕೆಲವು ವರ್ಷಗಳ ನಂತರ ಪುನಃ ಶ್ರೀ ವಿಭುದೇಂದ್ರ ತೀರ್ಥರು ಅಗ್ನಿಹಾಳ ಗ್ರಾಮಕ್ಕೆ ಬಂದಾಗ ಅನಂತಪ್ಪನನ್ನು ಸಾಲಿಗ್ರಾಮದ ಪೂಜೆ ಬಗ್ಗೆ ವಿಚಾರಿಸುತ್ತಾರೆ. ಅನಂತಪ್ಪ ಗುರುಗಳೇ ನೀವು ಹೇಳಿದ ಹಾಗೆ ದಿನವು ಪೂಜೆ ಮಾಡಿ ಊಟ ಮಾಡಿಸುತ್ತೇನೆ ಎಂದಾಗ ಹೇಳುತ್ತಾರೆ. ನರಸಿಂಹ ದೇವರು ಬಾಯಿ ತೆಗೆದು ಊಟ ಮಾಡುವ ಸುದ್ದಿ ಕೇಳಿ, ನಾಳೆ ಊಟ ಮಾಡಿಸುವಾಗ ತಾವು ವೀಕ್ಷಿಸುವುದಾಗಿ ತಿಳಿಸುತ್ತಾರೆ. ಆದರೆ ಮರುದಿನ ನೈವೇದ್ಯದ ಸಮಯದಲ್ಲಿ ನರಸಿಂಹ ದೇವರು ತಮ್ಮ ಬಾಯಿಯನ್ನು ತೆರೆಯುವುದಿಲ್ಲ. "ಗುರುಗಳ ಮುಂದೆ ತನ್ನನ್ನು ಸುಳ್ಳುಗಾರನನ್ನಾಗಿ ಮಾಡುತ್ತಿರುವೆಯಾ" ಎಂದು ಭಕ್ತಿಯಿಂದ ಸಾಲಿ ಗ್ರಾಮಕ್ಕೆ ನಮಿಸಿ ಪ್ರಾಣ ತ್ಯಾಗಕ್ಕೆ ಸಿದ್ಧನಾದಾಗ, ಕರುಣಾಮಯಿ ನರಸಿಂಹ ದೇವರು ಬಾಯಿ ತೆಗೆದು ನೈವೇದ್ಯವನ್ನು ಸ್ವೀಕರಿಸುವು ದನ್ನು ಕಣ್ಣಾರೆ ಕಂಡ ಶ್ರೀ ವಿಭುದೇಂದ್ರ ತೀರ್ಥರು. " ಈ ಬಾಲಕ ಸಾಮಾನ್ಯನಲ್ಲ ಎಂದು ನಿರ್ಧರಿಸಿ ತಮ್ಮ ಸಂಗಡ ಕರೆದುಕೊಂಡು ಹೋಗುತ್ತಾರೆ. ಅನಂತಪ್ಪನ ಸಾತ್ವಿಕ ತೇಜಸ್ಸಿನಿಂದ ಪ್ರಭಾವಿತರಾಗಿ ಶ್ರೀಗಳು, ಶ್ರೀ ಮಧ್ವಾಚಾರ್ಯರು ಯತಿ ಪ್ರಣವ ಕಲ್ಪದಲ್ಲಿ ಅಪ್ಪಣೆ ಕೊಡಿಸಿದಂತೆ, ಎಲ್ಲರ ಸಮ್ಮುಖದಲ್ಲಿ ಧರ್ಮ ಶಾಸ್ತ್ರದ ವಿಧಿ ವಿಧಾನ ಗಳ ಪ್ರಕಾರ, ಪರಮಹಂಸ ಪೀಠವನ್ನು ದಯಪಾಲಿಸಿ ತಮ್ಮ ಉತ್ತರಾ ಧಿಕಾರಿಯನ್ನಾಗಿ ನೇಮಿಸಿ, "ಜಿತಾಮಿತ್ರತೀರ್ಥ" ಎಂದು ನಾಮ ಕರಣ ಮಾಡಿ ಜಗದ್ಗುರು ಪೀಠವನ್ನೇರಿದ ಅವರಿಂದ ಧರ್ಮ ರಕ್ಷಣೆಯ ಸಂಕಲ್ಪ ಮಾಡಿಸಿ ಶ್ರೀವಿಭುದೇಂದ್ರ ತೀರ್ಥರು ಸಕಲ ವೇದಗಳನ್ನು, ಶಾಸ್ತ್ರಗಳನ್ನು, ಶ್ರೀಮದ್ ಸಮೀರ ಸಿದ್ಧಾಂತಗಳನ್ನು, ಸುಧಾದಿ ಗ್ರಂಥಗಳನ್ನು ಅನೇಕ ವರ್ಷವರೆಗೆ ಪಾಠ ಮಾಡುತ್ತಾರೆ. ಶಿಷ್ಯ ಪರಮಹಂಸ ಪೀಠವನ್ನು ಸಮರ್ಥವಾಗಿ ಆಳುತ್ತಾನೆಂದು ಖಾತರಿ ಪಡಿಸಿಕೊಳ್ಳುತ್ತಾರೆ.

ಶ್ರೀ ಜಿತಾಮಿತ್ರ ತೀರ್ಥರು ಗುರುಗಳ ಆದೇಶ ದಂತೆ ಮಹಾ ಸಂಸ್ಥಾನದ ಆಡಳಿತ ಪಾಲಿಸುತ್ತ ಅನೇಕ ಶಿಷ್ಯರಿಗೆ ಮಧ್ವಸಿದ್ಧಾಂತ ವನ್ನು ಸರಳವಾಗಿ ತಿಳಿಸುತ್ತಾರೆ. ಸದಾ ಅಂತರ್ಮುಖಿಯಾಗಿ, ದೇವತಾ ಪೂಜೆ, ಅನ್ಯರ ಹಿತಕ್ಕಾಗಿಯೇ ಶ್ರಮಿಸುವ ಸನ್ಯಾಸ ಧರ್ಮ ವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಸಂಚಾರ ಮಾಡುತ್ತ, ಭಕ್ತರಿಗೆ ಉಪದೇಶಾಮೃತ ನೀಡುತ್ತ, ಕೃಷ್ಣಾ ತೀರದ ಕಾಡಲೂರು ಗ್ರಾಮದಲ್ಲಿ ವಾಸ್ತವ್ಯ ಹೂಡಿ, ಪಾಠ ಹೇಳುತ್ತಿರುವಾಗ ಒಬ್ಬ ಜಂಗಮ ಪ್ರತಿದಿನ ಬಂದು ಕುಳಿತುಕೊಳ್ಳುತ್ತಿರುತ್ತಾನೆ. ಒಮ್ಮೆ ಕೃಷ್ಣೆಗೆ ಪ್ರವಾಹ, ಆ ಜಂಗಮ, ನೀರಿನ ಮೇಲೆ ಒಂದು ವಸ್ತ್ರವನ್ನು ಹಾಕಿ, ಅದರ ಮೇಲೆ ಕುಳಿತುಕೊಂಡು ನದಿ ದಾಟಿ ಬರುವುದನ್ನು ಶಿಷ್ಯರಿಗೆ ತೋರಿಸಿ, 'ಸಾಕ್ಷಾತ್ ರುದ್ರದೇವರು ಈ ರೂಪದಲ್ಲಿ ಬಂದು ಮಧ್ವಶಾಸ್ತ್ರ ಗ್ರಂಥಗಳನ್ನು ಪಠಣ ಮಾಡುತ್ತಾರೆ ಎಂದು ಹೇಳಿ ಹಾಗೇಯೇ ನಮಗೆ ಮಾರ್ಗದರ್ಶನ ಮಾಡುತ್ತಾರೆ ಎಂದರು. ಶ್ರೀ ಜಿತಾಮಿತ್ರರು

ಅಂತರ್ಮುಖಿಗಳು ಯಾವ ವೈಭೋಗವನ್ನೂ ಬಯಸದೇ, ನದಿಯ ತಟದಲ್ಲಿ ವಾಸ, ಪಾಠ ಪ್ರವಚನ ನಡೆಸುತ್ತಿದ್ದರು. ಮಹಾ ಸಂಸ್ಥಾನದ ಆಡಳಿತ ನಡೆಸುತ್ತ, ದೇವತಾ ಪೂಜೆ ಮಾಡುತ್ತ, ಪ್ರವಚನ ನಡೆಸುತ್ತಾ, ಶಿಷ್ಯರಿಗೆ ಶ್ರೀಮದಾನಂದ ತೀರ್ಥರ ಸಿದ್ಧಾಂತವನ್ನು ತಿಳಿಸುತ್ತ, ಅನೇಕ ಶಿಷ್ಯ ಸಂಪತ್ತನ್ನೂಗಳಿಸಿದರು. ಸ್ವಜನ ಪಕ್ಷಪಾತ, ಆಸೆ ಆಕಾಂಕ್ಷೆಗಳಿಗೆ, ಮೊರೆ ಹೋಗದೇ ತಮ್ಮಸನ್ಯಾಸ ಧರ್ಮವನ್ನು ನಡೆಸಿದರು. ಒಮ್ಮೆಕೃಷ್ಣಾ ತಟದಲ್ಲಿ ಶಿಷ್ಯರಿಗೆ ಗಂಗಾವತರಣದ ವರ್ಣನೆ, ಸ್ವರ್ಗದ ವರ್ಣನೆ, ರುದ್ರ ದೇವರು ಜಟಾಜೂಟಗಳನ್ನು ಆಕಾಶದ ತುಂಬಾ ಹರಡಿ ನಿಂತ ರುದ್ರ ರಮಣೀಯ ದೃಶ್ಯಗಳನ್ನು ಕಣ್ಣುಮುಚ್ಚಿಕೊಂಡು ಅನುಭವಕ್ಕೆ ತಂದು ಕೊಂಡು, ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿದ್ದರು. ಇದ್ದಕ್ಕಿದ್ದಂತೆ ಕೃಷ್ಣಗೆ ಗಂಗಾವತರಣವೇ ಆದಂತೆ, ತಮ್ಮ ಜಡೆಯಲ್ಲಿ ಗಂಗೆಯನ್ನು ಹಿಡಿದಿಟ್ಟು ಕೊಂಡ ವ್ಯೋಮಕೇಶಿ ಎನಿಸಿದ ರುದ್ರ ದೇವರೇ ದೇವಲೋಕದಿಂದ ಇಳಿದು ಭೂಮಿಯ ಅಸ್ತಿತ್ವಕ್ಕೆ ಧಕ್ಕೆ ಬಾರದಂತೆ ಹಿಮಾಲಯದಿಂದ ಬಿಟ್ಟಂತೆ, ಆ ಗಂಗಾಧಾರೆ ಕೃಷ್ಣೆಗೆ ಬಂದು ಸೇರಿ ಪ್ರವಾಹ ಉಂಟಾದಂತೆ ಆಯಿತು.

ಶ್ರೀಗಳಿಂದ ಆ ವರ್ಣನೆ ನಡೆಯುತ್ತಿದ್ದಂತೆ ಅಲ್ಲಿ ನಿಜವಾಗಿಯೂ ಪ್ರವಾಹವೇ ಎದುರಾಗಿತ್ತು. ಆದರೆ, ಜಿತಾಮಿತ್ರರಿಗೆ ಬಾಹ್ಯದ ಪರಿವೇ ಇರಲಿಲ್ಲ. ಶಿಷ್ಯರು ಕೂಗಿ ಕೂಗಿ ಹೇಳಿದರೂ, ಅವರ ಕರ್ಣಗಳಿಗೆ ಆ ಕೊಗು ಕೇಳಿಸಲಿಲ್ಲ. ಜೀವ ಭಯದಿಂದ ಶಿಷ್ಯರು ಓಡಿದರು. ಶ್ರೀಗಳ ಶರೀರ, ಆ ಕೃಷ್ಣೆಯ ಪ್ರವಾಹದಲ್ಲಿ ಸಂಪೂರ್ಣವಾಗಿ ಮುಳುಗಿಬಿಟ್ಟಿತು. ಶಿಷ್ಯರಿಗೆ ನಾವು ಜೀವ ಭಯಕ್ಕೆ ಗುರುಗಳನ್ನು ಹಾಗೆ ಬಿಟ್ಟು ಬರಬಾರ ದಾಗಿತ್ತು ಎಂಬ ಪಶ್ಚಾತ್ತಾಪವಾಯಿತು. ನದಿಯ ಪ್ರವಾಹ ಇಳಿಯುವ ನಿರೀಕ್ಷೆಯಲ್ಲಿ ಕಾದು ಕುಳಿತುಕೊಂಡರು. ಆರು ದಿನಗಳು ಕಳೆದರೂ ಪ್ರವಾಹ ಇಳಿಮುಖವಾಗಲಿಲ್ಲ. ಅಲ್ಪ-ಸ್ವಲ್ಪ ಆಶಾಭಾವನೆಗಳೂ ಆ ಪ್ರವಾಹದಲ್ಲಿ ಹರಿದು ಹೋದವು. ಏಳನೆಯ ದಿನ ಪ್ರವಾಹ ಇಳಿಮುಖ ವಾಯಿತು. ಸಂಪೂರ್ಣ ಪ್ರವಾಹ ಇಳಿದಾಗ ನೋಡಿದರೆ, ಪರಮಾ ಶ್ಚರ್ಯ, ಗುರುಗಳ ದೇಹಕ್ಕೆ ನೀರೂ ಸೋಕಿರಲಿಲ್ಲ. ಅವರು ಹಾಗೆಯೇ ಕಣ್ಣು ಮುಚ್ಚಿಕೊಂಡು ನಗರ ರಾಜನ 60000 ಪಿತೃಗಳು ಉದ್ಧಾರ ವಾದದ್ದನ್ನು ವರ್ಣಿಸುತ್ತಿದ್ದರು. ರುದ್ರಾಂಶ ಸಂಭೂತ ರಾದ ಶ್ರೀಗಳಿಗೆ ಈ ಪ್ರವಾಹ ವೇನು ಮಾಡಬಲ್ಲದು. ಅವರ ಮಹಿಮೆ ಜಗಕೆ ತೋರಿಸ ಲೆಂದೇ ಪರಮಾತ್ಮನ ಆಟವಿದಾಗಿತ್ತು. ಜಿತಾಮಿತ್ರರು, ಸಂಸ್ಥಾನವನ್ನು ಬೇರೆಯವರಿಗೆ ಒಪ್ಪಿಸಿ, ತಾವು ಸಾಧನೆಯ ಕಡೆ ಗಮನ ಹರಿಸಿದರು.

ವಿಜಯನಗರದ, ಧರ್ಮಶಾಸ್ತ್ರದಲ್ಲಿ ಪಾಂಡಿತ್ಯ ಪಡೆದಿದ್ದ, ಪಂಡಿತ ಶ್ರೀ ಶ್ರೀ ರಾಮಚಂದ್ರಾಚಾರ್ಯರಿಗೆ ಶ್ರೀ ರಘುನಂದನ ತೀರ್ಥ ಎಂದು ನಾಮಕರಣವನ್ನು ಮಾಡಿ,ಮಠದ ಅಧಿಪತ್ಯವನ್ನು ಒಪ್ಪಿಸಿ, ತಾವು ಜಿತಾಮಿತ್ರ ಗಡ್ಡೆಯಲ್ಲಿ ಕುಳಿತು ತಪಸ್ಸನ್ನು ಆಚರಿಸತೊಡಗಿದರು. ಮತ್ತೊಮ್ಮೆ ಹಾಗೆಯೇ ಪ್ರವಾಹ ಎದುರಾಯಿತು. ಶ್ರೀಜಿತಾಮಿತ್ರರು ಈ ಬಾರಿ ನಾನು ನಿಮಗೆ ಕಾಣಿಸುವುದಿಲ್ಲ, ಹುಡುಕಾಡಬೇಡಿರಿ, ಈ ಗೋನಮರದಲ್ಲಿಯೇ ನಿತ್ಯ ಸನ್ನಿಧಾನದಲ್ಲಿರುತ್ತೇನೆ. ಆರಾಧನೆಯನ್ನು ಕೂಡ ಈ ವೃಕ್ಷಕ್ಕೇನೇ ಮಾಡಿರಿ, ವೃಂದಾವನ ಮಾಡಬೇಡಿ ಎಂದು ಹೇಳಿ ಕ್ರಿ.ಶ.1497 ಪ್ರಮಾಥಿನಾಮ ಸಂವತ್ಸರ ಮಾರ್ಗಶಿರ ಕೃಷ್ಣ ಅಮಾ ವಾಸ್ಯೆಯ ದಿನ, ಆ ಪ್ರವಾಹದಲ್ಲಿ ಅದೃಶ್ಯರಾದರು. ಆ ದಿನದಂದೇ ಜಿತಾ ಮಿತ್ರ ತೀರ್ಥರ ಆರಾಧನೆಯನ್ನು ಶಿಷ್ಯ ಬಳಗದವರು, ಪೂರ್ವಾ ಶ್ರಮದ ವಂಶಸ್ಥರಾದ ಶಿವಪುರದ ಶಾನುಭೋಗರು ನಿರಂತರವಾಗಿ ನಡೆಸುತ್ತಿ ದ್ದಾರೆ. ಜಿತಾಮಿತ್ರ ಗಡ್ಡೆಗೆ ಹೋಗುವ ಪಯಣ ಬಹಳ ದುರ್ಗಮವೇ. ಆರಾಧನೆಯಲ್ಲಿ ಸಾವಿರಾರು ಭಕ್ತರು ಅಲ್ಲಿ ಸೇರುತ್ತಾರೆ. ಶ್ರೀಮದಾ ಚಾರ್ಯರ ತರುವಾಯ ಅದೃಶ್ಯರಾದ ಯತಿಗಳೆಂದರೆ ಶ್ರೀ ಜಿತಾಮಿತ್ರ ತೀರ್ಥರು. ಇಂದಿಗೂ ಅಲ್ಲಿ ಅನೇಕ ಪವಾಡಗಳು ನಡೆಯುತ್ತವೆ. ದಡ್ಡ ನೆಂದು ಎಲ್ಲರೂ ಹಿಯಾಳಿಸುವ, ನಿರಕ್ಷರಕುಕ್ಷಿ ಕೃಷ್ಣ ಗುರುಗಳನ್ನು ಭಕ್ತಿ ಪೂರ್ವಕವಾಗಿ ನಂಬಿ, ಜಿತಾಮಿತ್ರ ಗಡ್ಡೆಯಲ್ಲಿ ಏಳು ದಿನ ಸೇವೆ ಮಾಡಿ ದಾಗ, ಸ್ವಪ್ನದಲ್ಲಿ ಕಾಣಿಸಿಕೊಂಡ ಶ್ರೀಗಳು, ಅವನನ್ನು ಅನುಗ್ರಹಿಸಿ ದಾಗ, ಕೃಷ್ಣ ಜ್ಞಾನಿಯಾಗಿ ತಕ್ಷಣ ಶ್ರೀಜಿತಾಮಿತ್ರರ ಸಂಸ್ಕೃತ ಶ್ಲೋಕವೊಂದನ್ನು ರಚಿಸಿದ. ಮುಂದೆ ಕಾಡಲೂರು ಕೃಷ್ಣಚಾರ್ಯರೆಂದು ಪ್ರಸಿದ್ಧರಾಗಿ ದ್ದರು.

ಶ್ರೀ ಜಿತಾಮಿತ್ರ ತೀರ್ಥರು ಜಿತೇಂದ್ರಿಗಳೆನಿಸಿದ್ದರು. ಅವರು ಬರೆದ ಗ್ರಂಥಗಳಾವವೂ ನಮಗೆ ಲಭ್ಯವಿಲ್ಲದ್ದು ನಮ್ಮ ದೌರ್ಭಾಗ್ಯ. ಅವರ ಅನುಗ್ರಹ ಪಡೆದ ಕೆಲವು ಸಾಧಕರೆಂದರೆ, ಹೊಸರಿತ್ತಿಯಲ್ಲಿ ವೃಂದಾವನಸ್ಥರಾದ ಶ್ರೀ ಸುಶೀಲೇಂದ್ರತೀರ್ಥರು. ಇವರು ಆರಾಧನೆ ಗಾಗಿ ಜಿತಾಮಿತ್ರ ಗಡ್ಡೆಗೆ ಬಂದು, ತುಂಗಭದ್ರೆಯ ದಡದಲ್ಲಿ ಗೋನ ಮರದ ಕೆಳಗೆ ಕುಳಿತು ಶ್ರೀರಾಮದೇವರ ಪೂಜೆ ನಡೆಯುತ್ತಿರುವಾಗ, ಶ್ರೀ ಗಳಿಗೆ, ಶ್ರೀಮೂಲ ರಾಮದೇವರಿಗೆ ಮಂಗಳಾರತಿ ಮಾಡುವಲ್ಲಿ, ಜಂಗಮ ರೂಪದ ಶ್ರೀಜಿತಾಮಿತ್ರತೀರ್ಥರು. ದರ್ಶನವಾಗಿ ಪರಮಾ ನಂದವಾಗುತ್ತದೆ. ಶ್ರೀರಾಮದೇವರೊಂದಿಗೆ ಆ ಜಂಗಮರಿಗೂ ಮಂಗ ಳಾರತಿ, ಶಿರಸಾ ನಮಸ್ಕಾರ ಮಾಡಿದಾಗ ಅವರು ಅದೃಶ್ಯರಾದರು. ನಂತರ ಅಲ್ಲಿಯ ಸಂಗಮೇಶ್ವರ ದೇವರ ದರ್ಶನದಲ್ಲಿಯು ಆ ಜಂಗಮ ರೂಪಿ ಶ್ರೀಜಿತಾಮಿತ್ರ ತೀರ್ಥರು, ತಮ್ಮ ಜಟಾಜೂಟಗಳನ್ನು ಬಿಟ್ಟು ಕೊಂಡು ರುದ್ರ ತಾಂಡವವಾಡುತ್ತಿರುವ ನೃತ್ಯ ಶ್ರೀಗಳಿಗೆ ಕಾಣಿಸುತ್ತಿದೆ. ಈ ದರ್ಶನದ ನಂತರ ಶ್ರೀಜಿತಾಮಿತ್ರ ತೀರ್ಥರು ಗರ್ಭಗುಡಿ ಪ್ರವೇ ಶಿಸಿ ಅದೃಶ್ಯರಾದರು. ಶ್ರೀಸುಶಮೀಂದ್ರತೀರ್ಥರು ಶ್ರೀಜಿತಾಮಿತ್ರರು ತಪಸ್ಸು ಮಾಡಲು ಕುಳಿತುಕೊಳ್ಳುತ್ತಿದ್ದ ಗೋನದ ಮರಕ್ಕೆ ನಮಸ್ಕರಿಸಿ ಏಳುವಾಗ ಆ ಗೋನದ ಮರದಿಂದ ಸೇವಂತಿಗೆಯ ಹೂ ಮಾಲೆ ಶ್ರೀಗಳ ಕೊರಳಿಗೆ ಬೀಳುತ್ತದೆ. ಶ್ರೀಜಿತಾಮಿತ್ರತೀರ್ಥರು ಜಂಗಮ ರೂಪದಿಂದ ಆಶೀರ್ವಾದ ಮಾಡಿದ್ದರು. ಶ್ರೀ ರಾಘವೇಂದ್ರ ಸ್ವಾಮಿಗಳು ವೃಂದಾವನ ದಲ್ಲಿದ್ದು, ಭಕ್ತರಿಗೆ ಅನುಗ್ರಹಿಸುವಂತೆ, ಶ್ರೀ ಜಿತಾಮಿತ್ರತೀರ್ಥರು, ಈಗೋನದ ಮರದಲ್ಲಿದ್ದು ಇಂದಿಗೂ ಎಲ್ಲರಿಗೂ ಆಶೀರ್ವಾದ ಮಾಡು ತ್ತಿರುತ್ತಾರೆ.

ಶ್ರೀ ಶ್ಯಾಮಸುಂದರ ವಿಠಲರು, ''ಕಾಯೋ ಜಿತಾಮಿತ್ರ ಯದು ಕುಲ ನಾಯಕ ಸುಚರಿತ್ರಾ'' ಎಂಬ ಹಾಡಿನಲ್ಲಿ ಸಂಪೂರ್ಣ ಚರಿತ್ರೆ ಹೇಳಿದ್ದಾರೆ. ಶ್ರೀ ಲಕುಮೀಶದಾಸರ, ''ಜಿತಾಮಿತ್ರ ರಾಯಾಗೋನ ವೃಕ್ಷದ ನಿಲಯ' ಎಂಬ ಕೃತಿ ಶ್ರೀಕಾರ್ಪರ ನರಸಿಂಹಾಂಕಿತ ಶ್ರೀಗಿರಿ ಆಚಾರ್ಯರ ಕೃತಿ, ಇನ್ನು ಅನೇಕರು ಕೃತಿಗಳನ್ನು ರಚಿಸಿ ಶ್ರೀಜಿತಾಮಿತ್ರ ತೀರ್ಥರ ಸೇವೆಗೈದಿದ್ದಾರೆ.




ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 18, ಶ್ಲೋಕ - 66)

# ಶ್ರೀಮದನಂತಾರ್ಯ ವಿರಚಿತ ಶ್ರೀ ಗೋದಾ ಚತುಃಶ್ಲೋಕಿ

ಶ್ರೀ ಆಂಡಾಳ್(ಗೋದಾದೇವಿ)ಗೆ ಅರ್ಪಿಸಲಾದ ನಾಲ್ಕು ಪದ್ಯಗಳ ಪ್ರಾರ್ಥನೆ.ಅನನ್ಯ ಮತ್ತು ವಿಶೇಷತೆಯನ್ನು ವೈಭವಿಕರಿಸುವುದು ಇದು ಅವಳ ದೈವಿಕ ಶ್ರವಣಗಳನ್ನು ಎತ್ತಿ ತೋರಿಸುತ್ತದೆ. ಇದನ್ನು ಶ್ರೀ ಅನಂತಾಳ್ವಾನ್ ರಚಿಸಿದ್ದಾರೆ. ಅವರು ಭಗವಂತನೊಂದಿಗೆ ಅನನ್ಯ ಸಂಬಂಧವನ್ನು ಹೊಂದಿರುವ ವ್ಯಕ್ತಿ ಎಂದು ಹೇಳುತ್ತಾರೆ. ಇಲ್ಲಿ ಸಪ್ತಗಿರಿ ಮಾಸ ಪತ್ರಿಕೆಯು ಓದುಗರಿಗೆ ಅರ್ಥಪೂರ್ಣವಾದ ಶ್ಲೋಕವನ್ನು ನೀಡುತ್ತಿದೆ. ಈ ಶ್ಲೋಕಗಳನ್ನು ಓದಿ ಮತ್ತು ಆಶೀರ್ವಾದ ಪಡೆಯಿರಿ.



### ಶ್ರೀಗೋದಾ ಚತುಃಶ್ಲೋಕಿ

ನಿತ್ಯಾ ಭೂಷಾ ನಿಗಮಶಿರಸಾಂ ನಿಸ್ಸಮೋತ್ತುಂಗ ವಾರ್ತಾ
ಕಾಂತೋ ಯಸ್ಯಾಃ ಕಚವಿಲುಲಿತೈಃ ಕಾಮುಕೋ ಮಾಲ್ಯರತ್ನೈಃ
ಸೂಕ್ತ್ಯಾ ಯಸ್ಯಾಃ ಶ್ರುತಿಸುಭಗಯಾ ಸುಪ್ರಭಾತಾ ಧರಿಶ್ರೀ
ಸೈಷಾ ದೇವಿ ಸಕಲಜನನೀ ಸಿಂಚತಾಂ ಮಾಮಪಾಂಗೈಃ ॥1॥

'ಆಂಡಾಳಮ್ಮ' ಎಂದು ಕರೆಯಲ್ಪಡುವ ಗೋದಾದೇವಿಯ ಅದ್ಭುತವಾದ, ಶ್ರೀಸೂಕ್ತಿ "ತಿರುಪ್ಪಾವೈ" ಎಂಬ ದಿವ್ಯ ಪ್ರಬಂಧವು ವೇದಾಂತಗಳಿಗೆ ಸದಾ ಅಲಂಕಾರವಾಗಿ ಇರುವುದೋ (ವೇದಾಂತಾರ್ಥಗಳಿಗೆ ಅಧಿಕವಾದ ಶೋಭೆಯನ್ನು ಉಂಟು ಮಾಡುವುದೋ) ಯಾವ ಗೋದಾದೇವಿಯ ಅಂದವಾದ ಕೇಶಗಳಲ್ಲಿ ಅರಳಿದ ಸುಗಂಧ ಪುಷ್ಪಗಳ ಮಾಲಿಕೆಗಳತ್ತ ಆಕರ್ಷಿತನಾದ ದೇವದೇವನು ಗೋದಾದೇವಿಯ ಬಗೆಗೆ ಅಧಿಕವಾದ ಅನುರಾಗವನ್ನು ಹೊಂದಿರುವನೋ, ಶ್ರವಣಾನಂದಕರವಾದ ಯಾವ ದಿವ್ಯ ಪ್ರಬಂಧದ ಮೂಲಕ ಈ ಭೂಮಿಯು ಪ್ರಬೋಧವನ್ನು ಪಡೆಯುತ್ತಿದೆಯೋ, ಅಂತಹಾ ಸರ್ವಲೋಕ ಜನನಿಯಾದ ಆ ನಾಚ್ಚಿಯಾರ್ "ಗೋದಾದೇವಿ"

ತನ್ನ ಕರುಣಾ ಕಟಾಕ್ಷಗಳಿಂದ ಸದಾ ನಮ್ಮನ್ನು ಹರಸುತ್ತಿರಲಿ, ಅನುಗ್ರಹಿಸುತ್ತಿರಲಿ ಎಂದು ಪ್ರಾರ್ಥಿಸುತ್ತಿದ್ದೇವೆ.

ಮಾತಾ ಚೇತ್ ತುಲಸೀ ಪಿತಾ ಯದಿ ತವ ಶ್ರೀ ವಿಷ್ಣುಚಿತ್ತೋ ಮಹಾನ್
ಭ್ರಾತಾಚೇತ್ ಯತಿಶೇಖರಃ ಪ್ರಿಯತಮಃ ಶ್ರೀರಂಗಧಾಮಾ ಯದಿ ।
ಜ್ಞಾತಾಂ ಸ್ತನಯಾ ತ್ವದುಕ್ತಿಸುರಸ್ತನ್ಯೇನ ಸಂವರ್ಧಿತಾಃ
ಗೋದಾದೇವಿ! ಕಥಂ ತ್ವಮನ್ಯಸುಲಭಾ ಸುಧಾರಣಾ ಶ್ರೀರಸಿ॥2॥

ಅಮ್ಮಾ ಗೋದಾದೇವಿ! ಭಗವಂತನಿಗೆ ಪ್ರಿಯಳಾದ ತುಳಸೀದೇವಿ ನಿನಗೆ ಸಾಕ್ಷತ್ತು ಜನನಿಯಾಗಿದ್ದಾಳೆ. ನಿನ್ನ ಜನಕ ಮಹಾತ್ಮನಾದ ಭಗವಂತನ ಪ್ರಿಯಭಕ್ತನಾದ ವಿಷ್ಣುಚಿತ್ತ. ನಿನ್ನ ಸೋದರ ಸಾಕ್ಷತ್ತು ಯತಿಶೇಖರ ಶ್ರೀರಂಗಧಾಮನಾದ ಶ್ರೀರಂಗನಾಥನು ನಿನ್ನ ಪ್ರಿಯಕರನಾಗಿದ್ದಾನೆ.

ಅತ್ಯಂತ ಅದ್ಭುತವಾದ ದಿವ್ಯಪ್ರಬಂಧವೆಂಬ ಸ್ತನ್ಯವನ್ನು ಪಾನ ಮಾಡಿ ಪುನೀತರಾದ ಜ್ಞಾನಿಗಳೇ ನಿನ್ನ ಪುತ್ರರು, ಅಮ್ಮಾ! ನೀನು ಅನನ್ಯ ಸುಲಭಳು, ಹಾಗೇ ಅಸಾಧಾರಣವಾದ ಶ್ರೀಗೋದಾದೇವಿಯೆಂದು ಪ್ರಸಿದ್ಧಿಯನ್ನು ಪಡೆದಿರುವಿ. ನೀನು ಅತ್ಯಂತ ಮಹಿಮಾನ್ವಿತಳು ಎಂದು ಸ್ತುತಿಸುತ್ತಿದ್ದೇವೆ.

ಕಲ್ಪಾದೌ ಹರಿಣಾ ಸ್ವಯಂ ಜನಹಿತಂ ದೃಷ್ಟ್ವೇನ ಸರ್ವಾತ್ಮನಾಂ
ಪ್ರೋಕ್ತಂ ಸ್ವಸ್ಯ ಚ ಕೀರ್ತನಂ ಪ್ರಪದನಂ ಸ್ವಸ್ಮೈ ಪ್ರಸೂನಾರ್ಪಣಮ್।
ಸರ್ವೇಷಾಂ ಪ್ರಕಟಂ ವಿಧಾತು ಮನಿಶಂ ಶ್ರೀಧನ್ವಿನವ್ಯೇ ಪುರೇ
ಜಾತಂ ವೈದಿಕ ವಿಷ್ಣುಚಿತ್ತತನಯಾಂ ಗೋದಾ ಮುದಾರಾಂ ಸ್ತುಮಃ

ಕಲ್ಪದ ಪ್ರಾರಂಭದಲ್ಲಿ ಸಕಲ ಲೋಕಕ್ಕೆ ಆತ್ಮನಾದ ಭಗವಂತ, ಶ್ರೀಹರಿ ಈ ಲೋಕದ ಹಿತವನ್ನು ಬಯಸಿ ಸ್ವತಾಹಾ ತಾನೇ ತನ್ನ ಕೀರ್ತನೆಯನ್ನು ಹಾಗೇ ಪ್ರಪತ್ತಿಯನ್ನು ಅಂದರೆ ಶರಣಾಗತಿಯನ್ನು ಸದಾ ತನಗೆ ಹೂವುಗಳನ್ನು ಅರ್ಪಿಸುವುದರಿಂದ ಉಂಟಾಗುವ ಪುಣ್ಯವನ್ನು ಉಪದೇಶಿಸಿದ್ದಾನೆ.

ಎಲ್ಲವನ್ನೂ ಪ್ರತಿನಿತ್ಯವೂ ಆಚರಿಸಿ, ಎಲ್ಲೆಡೆ ಪ್ರಚಾರ ಮಾಡುವುಕ್ಕಾಗಿ ಆ ಧನ್ವಿನವ್ಯಪುರ ಎಂಬ ಶ್ರೀವಿಲ್ಲಿಪುತ್ತೂರಿನಲ್ಲಿ ವೈದಿಕಾಗ್ರೇಸರನಾದ ಶ್ರೀ ವಿಷ್ಣುಚಿತ್ತನ ಸುತಳಾಗಿ ಜನಿಸಿ, ಅತ್ಯಂತ ಉದಾರವಾದ ಸ್ವಭಾವವನ್ನು ಹೊಂದಿರುವ ಗೋದಾದೇವಿಯನ್ನು ಮನಸಾರೆ ಸ್ತುತಿಸುತ್ತಿದ್ದೇವೆ.

ಆಕೂತಸ್ಯ ಪರಿಷ್ಕ್ರಿಯಾ ಮನುಪಮಾ ಮಾಸೇಚನಂ ಚಕ್ಷುಷೋ
ಆನಂದಸ್ಯ ಪರಂಪರಾ ಮನುಗುಣಾಮಾರಾಮಶೈಲೇಶಿತುಃ
ತದ್ದೋರ್ಮಧ್ಯಕಿರೀಟಕೋಟಿಘಟಿತ ಸ್ವೋಚ್ಛಿಷ್ಟಕಸ್ತೂರಿಕಾ
ಮಾಲ್ಯಾಮೊದಸಮೇಧಿತಾತ್ಮವಿಭವಾಂ ಗೋದಾ ಮುದಾರಾಂ ಸ್ತುಮಃ॥

ಶ್ರೀ ಶೇಷಶೈಲೇಶ್ವರನಾದ ವೇಂಕಟನಾಥನಾದ ಶ್ರೀನಿವಾಸನ ಅಭೀಷ್ಟವೇನಿದೆಯೋ ಆ ಕೋರಿಕೆಯ ಪರಿಷ್ಕಾರ ಗೋದಾದೇವಿ ಎಂದರೆ ತಪ್ಪಾಗಲಾರದು. ಶ್ರೀನಿವಾಸನ ದಿವ್ಯ ನೇತ್ರಗಳಿಗೆ ಸಾಟಿಯಿಲ್ಲದ ಉತ್ತಮವಾದ ಆನಂದವನ್ನು ಉಂಟುಮಾಡುತ್ತಿದ್ದಾಳೆ.

ಶ್ರೀನಿವಾಸನ ವಕ್ಷಃಸ್ಥಳ, ಹಾಗೇ ಅದ್ಭುತವಾದ ಕಿರೀಟದ ಅಗ್ರಭಾಗವು ಗೋದಾದೇವಿಯು ಮುಡಿದು ತೆಗೆದಿರುವಂತಹಾ ಆ ಕಸ್ತೂರಿ ಮಾಲೆಗಳಿಂದ ಸುಶೋಭಿತವಾಗಿವೆ.

ಆ ಮಾಲಿಕೆಯನ್ನು ಸಂತೋಷವಾಗಿ ಧರಿಸಿದ್ದಾನೆ "ಏಷಃ ಸರ್ವಗಂಧಃ ಏಷಃ ಸರ್ವರಸಃ ಏಷಹ್ಯೇವಾನಂದಯಾತಿ"ಎಂದುಉಪನಿಷತ್ತಿನಲ್ಲಿ ಕೀರ್ತಿಸಲ್ಪಡುವಂತಹಾ ಭಗವಂತನು, ಆ ಭಗವಂತನಿಗೆ ಅದ್ವಿತೀಯವಾದ ಅಪೂರ್ವವಾದ ಸುಗಂಧವನ್ನು, ಆನಂದವನ್ನು, ಸಂತೋಷವನ್ನು ಸದಾ ನೀಡುವಂತಹಾ ಗೋದಾದೇವಿಯ ವೈಭವವನ್ನುವುದು ಪ್ರಕಾಶಿಸುತ್ತಿದೆ.

ಇಂತಹಾ ದೇವದೇವನಿಗೆ ಪ್ರಿಯಳಾದ ಭಕ್ತಳಾದ ಮಹನೀಯಳಾದ ಆಂಡಾಳಮ್ಮನನ್ನು, ಗೋದಾದೇವಿ ಎಂದೂ ಸ್ತುತಿಸುತ್ತಿದ್ದೇವೆ.

ಸ್ವೋಚ್ಛಿಷ್ಟಮಾಲಿಕಾಬಂಧ ಗಂಧಬಂಧುರಜಿಷ್ಣವೇ।
ವಿಷ್ಣುಚಿತ್ತತನೂಜಾಯೈ ಗೋದಾಯೈ ನಿತ್ಯ ಮಂಗಳಮ್॥

॥ಆಂಡಾಳ್ ತಿರುವಡಿಗಳ್ ಶರಣಮ್॥



30-10-2025 ರಂದು ತಿರುಮಲೆಯಲ್ಲಿ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್., ರವರು ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.



18-10-2025 ರಂದು ತಿರುಪತಿ, ಶ್ರೀನಿವಾಸಮಂಗಾಪುರದಲ್ಲಿ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ ನಡೆದ ಪವಿತ್ರೋತ್ಸವ ದೃಶ್ಯ.



26-10-2025 ರಂದು ಪಾಪವಿನಾಶನಂ ಡ್ಯಾಮ್ ಬಳಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ. ಆರ್. ನಾಯುಡು ರವರು ಪ್ರತ್ಯೇಕ ಪೂಜೆಯನ್ನು ನಿರ್ವಹಿಸುತ್ತಿರುವ ದೃಶ್ಯ.



31-10-2025 ರಂದು ತಿರುಮಲೆಯಲ್ಲಿರುವ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನಪ್ರಸಾದ ಭವನದಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್., ರವರು ಮತ್ತು ಇತರ ಉನ್ನತಾಧಿಕಾರಿಗಳು "ಆಯುಧ ಪೂಜೆ" ಯನ್ನು ನಿರ್ವಹಿಸುತ್ತಿರುವ ದೃಶ್ಯಮಾಲಿಕೆ



18-10-2025 ರಂದು ತಿರುಪತಿಯಲ್ಲಿರುವ ತಿ.ತಿ.ದೇ., ಮುದ್ರಣಾಲಯದಲ್ಲಿ ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು ಮತ್ತು ಇತರ ಅಧಿಕಾರಿಗಳು "ಆಯುಧ ಪೂಜೆ" ಯನ್ನು ನಿರ್ವಹಿಸುತ್ತಿರುವ ದೃಶ್ಯಮಾಲಿಕೆ

# ವೈಕುಂಠದೊಡೆಯನನ್ನು ಭೂವೈಕುಂಠಕ್ಕೆ ಕರೆತಂದ ಹರಿದಾಸರು ಶ್ರೀವಿಜಯದಾಸರು

**ವರಾಹ ಹರಿ ವಿಠಲದಾಸರು**
9480446686

ಪರಮಾತ್ಮನಿಗೆ ತ್ರಿಯುಗಹೂತಿ ಎಂದು ಹೆಸರು. ಕೃತಯುಗ, ತ್ರೇತಾಯುಗ ದ್ವಾಪರಯುಗಗಳಲ್ಲಿ ಮಾತ್ರ ಅವತರಿಸುತ್ತೇನೆ ಎಂದು ಹೇಳಿದ್ದವನು. ಹಾಗಾದರೆ ಕಲಿ ಯುಗದಲ್ಲಿ ಸಜ್ಜನರ ಉದ್ಧಾರ ಹೇಗೆ ಎಂದಾಗ ದೇವಾನು ದೇವತೆಗಳು ಯತಿಗಳಾಗಿ ಹರಿದಾಸರಾಗಿ ಅವತರಿಸು ತ್ತಾರೆ ಎಂದ. ಆದರೆ ಈ ಯತಿಗಳು, ಹರಿದಾಸರು ಅವ ತರಿಸಿ ಹರಿಯೇ ಬರದಿದ್ದಲ್ಲಿ ನಿರರ್ಥಕ ಎನ್ನುತ್ತ, ನೀನು ಅವತರಿಸಬೇಡ ಕೃಷ್ಣರೂಪದಿಂದ ಇದ್ದೀಯ. ಹಾಗೆ ಇಲ್ಲಿಗೆ ಬಾ ಎಂದು ಕರೆದರು. ಅದಕ್ಕಾಗಿ ಭಕ್ತರ ಕಾಮಿತಾರ್ಥ ಪ್ರದಾಯಿನೇಗಾಗಿ ಮತ್ತೊಂದು ನಾಟಕವಾಡಿ ಶ್ರೀನಿವಾಸ ಎಂದು ಕರೆಸಿಕೊಂಡು ಬಂದ.

ಎಲ್ಲ ಭಕುತರಭೀಷ್ಟ ಕೊಡುವುದಕೆ ತಾ ಕೈ
ವಲ್ಯಸ್ಥಾನದ ಬಿಟ್ಟ ಶೇಷಾದ್ರಿಮಂದಿರದಲ್ಲಿ
ಲೋಲುಪ ದಿಟ್ಟ ಸೌಭಾಗ್ಯ ನಿಧಿಗೆದುರಿಲ್ಲ ಭುಜ
ಬಲ ಪುಷ್ಟ ಕಸ್ತೂರಿಯಿಟ್ಟ

ಎಂದರು. ಇದಕ್ಕೆ ಮತ್ತೊಂದು ಕಾರಣವೂ ಉಂಟು. ಅನೇಕರು ತಮ್ಮ ತಮ್ಮ ಕಾಮಿತಾರ್ಥಗಳನ್ನು ಈಡೇರಿಸು ಎಂದು ಪ್ರಾರ್ಥಿಸಿದ್ದರು. ಅದಕ್ಕನುಗುಣವಾಗಿ ಶ್ರೀನಿವಾಸ ಕಲ್ಯಾಣ ಮಾಡಿಕೊಳ್ಳುವ ಸಲುವಾಗಿಯೇ ಬಂದ.

"ಒಲಿದು ಭಕುತರಿಗಾಗಿ
ಮದುವೆಗ್ಗವಣಿಸಿಕೊಂಡ
ಸುಲಭ ದೇವರದೇವ
ವಿಜಯವಿಠಲ ತಾನು

ಎನ್ನುತ್ತಾರೆ ವಿಜಯ ದಾಸರು. ದೇವತೆಗಳು, ಗಂಧರ್ವರು ಕಿನ್ನರರು, ಕಿಂಪುರುಷರು ಋಷಿಗಳು, ಚಕ್ರವರ್ತಿಗಳು, ಮನುಷ್ಯರು ಎಲ್ಲರೂ ಇವನಿಗೆ ಭಕ್ತರು. ಇವರೆಲ್ಲರಿಗೆ ತೋರುವ ಸಲುವಾಗಿ ಮದುವೆ ಮಾಡಿ ಕೊಂಡ. ಬೆಟ್ಟವೇರಿ ನಿಂತ, ನಾನು ಸರ್ವೋತ್ತಮ ಎಂದು ತಿಳಿಸಿದ ಇದಕ್ಕೆಲ್ಲ ಕಾರಣಕರ್ತರಾದವರು ಭೃಗುಮುನಿಗಳು ಅವರೇ ವಿಜಯದಾಸರು.

## ಹರಿಸರ್ವೋತ್ತಮತ್ವ ಸ್ಥಾಪನೆ

ಹಿಂದೆ ಸುರರು ಮುನಿಗಳು ಕೂಡಿ ಸತ್ರ ಯಾಗ ಎಂಬು ದನ್ನು ನೆರವೇರಿಸುತ್ತಿದ್ದರು. ಯಾಗದ ಫಲವನ್ನು ಯಾರಿಗೆ ಕೊಡುವಿರಿ ಎಂದು ದೇವರ್ಷಿಗಳಾದ ನಾರದರು ಬಂದು ಮಹರ್ಷಿಗಳೆಲ್ಲರನ್ನು ಕೇಳಿದರು.

"ವಾರಿಜೋದ್ಭವನಿಗೋ ಧೀರ ಶಂಕರಗೋ ವರಿ ವೆಂಕಟಗೋ" ಎನ್ನಲು "ನೀವೇ ಹೇಳಿ ಎಂದರು. ಆಗ ಭೃಗು ಋಷಿಗಳ ಮೇಲೆ ನಾರದರ ದೃಷ್ಟಿ ಬಿತ್ತು. ನಾರದರು ಮುಂದೆ ಪುರಂದರದಾಸರಾಗಿ ಭುವಿಯಲ್ಲಿ ಅವತರಿಸುವ ಕಾರ್ಯ ಅರಿತಿದ್ದವರು. ನಾರಾಯಣನೆಂಬ ನಾಮದ ಬೀಜವನ್ನು ಬಿತ್ತಬೇಕು. ಹರಿದಾಸ ಸಾಹಿತ್ಯಕ್ಕೆ ನಾಂದಿ ಹಾಡಬೇಕು. ಅಂಕುರಾರ್ಪಣ ಮಾಡಬೇಕು ಅದನ್ನು ಉಳಿಸಿ ಬೆಳೆಸಿ ಬೆಳಗಿ ಸುವ ವ್ಯಕ್ತಿ ಈ ಭೃಗು ಋಷಿಗಳು ಎಂದು ಅರಿತು ಇವರನ್ನು







ಆರಿಸಿ ಹರಿವಿರಂಚಿಹರರನ್ನು ಪರೀಕ್ಷಿಸಿ ಬನ್ನಿ ಎಂದರು. ಮತ್ತೊಂದು ಕಾರಣ "ಮಹರ್ಷೀಣಾಂ ಅಹಂ ಭೃಗುಃ" ಎಂದು ತನ್ನ ವಿಭೂತಿ ರೂಪವನ್ನು ಶ್ರೀ ಹರಿ ಭೃಗುವಿನಲ್ಲಿ ಇಟ್ಟಿದ್ದಾನೆ. ಆದಕಾರಣದಿಂದ ಅವರನ್ನೆ ಆರಿಸಿದರು. ಅವರು ಸತ್ಯ ಲೋಕಕ್ಕೆ ಹೋಗಿ ವೇದಪಾರಾಯಣ ಮಾಡುತ್ತ, ಆದರಿಸದೆ ಇದ್ದ ಬ್ರಹ್ಮ ಇವನು ಎಂದರು ಭೂಲೋಕದಲ್ಲಿ ಸರ್ವೋತ್ತಮ ತ್ವೇನ ಪೂಜೆ ಇಲ್ಲದಿರಲಿ ಎಂದು ಶಪಿಸಿದರು, ಅಂತೆಯೇ ಕೈಲಾಸಕ್ಕೆ ಹೋದಾಗ ಅಲ್ಲಿ ರುದ್ರದೇವರು ಪಾರ್ವತಿಯೊಂದಿಗೆ ತಾಂಡವ ನೃತ್ಯದಲ್ಲಿ ತಲ್ಲೀನರಾಗಿದ್ದಾರೆ. ಭೃಗುವನ್ನು ನೋಡ ಅಲ್ಲ. ನಿನಗೆ ಲಿಂಗಪೂಜೆಯಾಗಲಿ ಎಂದು ಶಪಿಸಿದಾಗ ರುದ್ರ ದೇವರು ಸಿಟ್ಟಿನಿಂದ ಹೊಡೆಯಲು ಬಂದರು. ಗಿರಿಜೇ ಗುರುವ ಕೊಲಬೇಡವೆನಲು ಇವನೂ ಸರ್ವೋತ್ತಮ ಅಲ್ಲ ಎಂದರಿತು ವೈಕುಂಠಕ್ಕೆ ಬಂದರು. ಅಲ್ಲಿ ಮತ್ತೆ ನಾಟಕ ವಾಡಿದ ಶ್ರೀಹರಿ,

ನಿದ್ರೆ ಬಂದವಾನಂತೆ ಮಲಗಿಹಾ
ಭದ್ರಮೂರ್ತಿಯ ತಾನು ಕಾಲಿಲೊದ್ದನು
ವೇದಗಮ್ಯನು ಮುನಿಯ ಪಾದವೋತ್ತುತ್ತ
ಮೋದಪಡಿಸಿದ ತಾನು ಸಾಧುಮುನಿಯನು

ಎಂದು ಗುರುಗೋವಿಂದದಾಸರು ಹೇಳುತ್ತಾರೆ. ಭಗವಂತನಿಗೆ ನಿದ್ರೆಯಿಲ್ಲ ನಿದ್ರೆಬಂದವನಂತೆ ನಟಿಸುತ್ತಿದ್ದಾನೆ ಅಷ್ಟೆ. ಭದ್ರ ಅಂದರೆ ಮಂಗಳ ಎಂದು ಅರ್ಥ. ಮಂಗಳ ಮೂರ್ತಿ. ಅಪ್ರಾಕೃತ ಕಾಯವುಳ್ಳವನು ತಾನು ಎದ್ದು ಬಿಸಿ ನೀರಿನಿಂದ ಭೃಗುವಿನ ಕಾಲು ತೊಳೆದ. ಕಾಲಿನಲ್ಲಿದ್ದ ಅಸುರನ್ನು ಸಂಹರಿಸಿದ.

ಮೆಟ್ಟಿದನು ವೈಕುಂಠ ಥಟ್ಟನೇ ಮತ್ತಲ್ಲಿ
ದಿಟ್ಟದೇವನ ಕಂಡ ಪಟ್ಟದರಸಿಯ ಕೂಡಿ
ದಿಟ್ಟಾಗಿ ಮಲಗಿರಲು ಸಿಟ್ಟಿಲೊದ್ದನು ಒಳ್ಳೆ
ಪೆಟ್ಟು ಅವನೆಡೆಗೆ ಪೆಟ್ಟುತಾಕಲು ಹರಿಯು
ಬಿಟ್ಟು ಮಂಚವನಿಳಿದು ಮುಟ್ಟಿ
ಮುನಿಪಾದವನು ತುಷ್ಟಿನಾಗಿ

ಛಂದಾಗಿ ಕಾಠಿಣ್ಯದಿಂದಿದ್ದ ಎನ್ನೆದೆ ನೊಂದಿಲ್ಲ ಎಳ್ಳ ಕಾಳಷ್ಟು ಇಂದು ಈ ಕೋಮಲವಾದ ಪಾದವು ನೊಂದು ಕೊಂಡಿದ್ದಾವು ಎಷ್ಟೋ।

ಎಂದು ಬಿಸಿನೀರಿನಿಂದ ಪಾದ ತೊಳೆದ. ಶಿರಸ್ಸಿನ ಮೇಲೆ ಪ್ರೋಕ್ಷಣೆ ಮಾಡಿಕೊಂಡ. ಇಂದಿರಾದೇವಿಯ ಮೇಲೂ ಪ್ರೋಕ್ಷಣೆ ಮಾಡಿದ. ವಿಪ್ರ ಪಾದೋದಕಂ ಶುಭಂ ಎಂದು ಹೇಳಿದ.

ಇದು ಸರಿಯೇ ಎಂದರೆ ಭೃಗು ಋಷಿಗಳ ಉಪಾಸನೆ ಈ ರೀತಿಯದು."ಉತ್ತಮಾನಾಂ ಸ್ವರೂಪಂತು ಪಾದ ಶಬ್ದೇನ ಭಣ್ಯತೇ" ಉತ್ತಮರ ಸ್ವರೂಪ ಪಾದ ಶಬ್ದದಿಂದ ಹೇಳುತ್ತೇವೆ. ಅಂತೆ ಭೃಗುಋಷಿಗಳು ತಮ್ಮ ಸ್ವರೂಪ ದೇಹ ದಲ್ಲಿರುವ ಬಿಂಬ ಮೂರುತಿಗೂ ಅಲ್ಲಿ ಮಲಗಿದ್ದ ಶ್ರೀಹರಿಯ ರೂಪಕ್ಕು ಐಕ್ಯ ಚಿಂತಿಸಿದರು. ಇದು ಉಪಾಸನೆ, ಕೋಪ ತಾಪಗಳಿಲ್ಲದವ ಶ್ರೀ ಹರಿ ಎಂದು ನಿರ್ಗುಣನಲ್ಲ ಶ್ರೇಷ್ಠವಾದ ಗುಣಗಳುಳ್ಳವ.

ಅಂದು ಭೃಗುಮುನಿ ಬಂದು
ಚಂದದ ವಕ್ಷವ ಕಾಲಿ
ನಿಂದೊದೆಯಲು ಅವನ
ಕುಂದುಗಳೆಣಿಸದೆ ಇಂದಿರೇಶತ್ವ

ಇಂದಿರೇಶನಿವನು ಎನ್ನುತ್ತಾರೆ ವಾದಿರಾಜರು. ಇದನ್ನೆ ನೆಪಮಾಡಿಕೊಂಡು ಪ್ರೇಮಕಲಹ ಮಾಡಿ ಲಕ್ಷ್ಮಿ ಕೊಲ್ಲಾ ಪುರಕ್ಕೆ ಬಂದಳು. ಅವಳನ್ನು ಹುಡುಕುವ ನೆಪ ಮಾಡಿ ಕೊಂಡು ತಾನೂ ಬಂದ ಭೂತಳದಿ ನಿಂತ.

ಹೀಗೆ ತ್ರಿಮೂರ್ತಿಗಳ ಲೋಕಕ್ಕೆ ಹೋಗಿ ಬಂದವರು ಭೃಗು ಋಷಿಗಳು ಶ್ರೀನಿವಾಸ ಧರೆಗೆ ಬರಲು ಕಾರಣಕರ್ತೃ ಆದವರು ಭೃಗುಋಷಿಗಳು. ಈ ಭೃಗುಋಷಿಗಳೆ ರಾಯ ಚೂರು ಜಿಲ್ಲೆಯ ಚೀಕಲಪರವಿಯಲ್ಲಿ ಜನಿಸಿದವರು. ಕೂಸಿ ಮಗ ದಾಸ ಎಂದು ಬಾಲ್ಯದಲ್ಲಿ ಪ್ರಖ್ಯಾತರಾದವರು ನಂತರ ಕಾಶಿಯಲ್ಲಿ ಶ್ರೀಹರಿ ಸ್ವಪ್ನದಲ್ಲಿ ವ್ಯಾಸ ಕಾಶಿಗೆ ಕರೆದೊಯ್ದು ವಿಜಯವಿಠಲ ಎಂಬ ಅಂಕಿತ ನೀಡಿದ ವಿಜಯದಾಸ

ರಾದರು. ಪದ ಪದ್ಯ ಸುಳಾದಿ ಕೀರ್ತನೆಗಳನ್ನು ರಚಿಸಿ ಸುಳಾದಿ ದಾಸರು ಎಂದೇ ಹೆಸರಾದವರು. ದಾಸರು ತಿರುಪತಿಗೆ ಬಂದರು.

ವಿಜಯದಾಸರು ಶ್ರೀನಿವಾಸನ ದರುಶನಕ್ಕೆ ಎಂತಲೇ ತಿರುಪತಿಗೆ ಬರುತ್ತಾರೆ. ಏನನ್ನು ನೋಡಿದೆ ಎಂದು ವರ್ಣಿಸುತ್ತಾರೆ. ಕಾರಣ ಮುಂದೆ ನಮ್ಮಂತಹ ಪಾಮರರಿಗೆ ಯಾತ್ರೆ ಹೀಗೆ ಮಾಡಿ ಎಂದು ತಿಳಿಸುವ ಸಲುವಾಗಿ ವರ್ಣನೆ ಮಾಡಿದ್ದಾರೆ.

ನೋಡಿದೆ ನಾ ನೋಡಿದೆ
ಮೂಡಲಗಿರಿಯ ವಾಸನ ಯಾತ್ರಿಯ
ಮಾಡಿದೆ ನಾ ಮಾಡಿದೆ ॥ಅಪ.॥
ಬೆಟ್ಟವ ಕಂಡೆನು ಸೌಪಾನಂಗಳು
ನಿಟ್ಟುಸಿರಿಕ್ಕದೆ ಏರಿದೆ।
ಕಟ್ಟಕಡಿಯಣ ಗೋಪುರ ಶಿಖರ
ದಿಟ್ಟಿಸಿ ಕಣ್ಣಿಲಿ ನೋಡಿದೆ॥1॥

ಬೆಟ್ಟವನ್ನು ನಡೆದುಕೊಂಡು ಏರಿ ಹೋಗುವಾಗ ಆಗುವ ಆನಂದವೇ ಬೇರೆ. ನೋಡಿದರೆ ವಿಜಯದಾಸರ ಕಾಲದಲ್ಲಿ ಈಗ ಇರುವಂತೆ ಮೆಟ್ಟಿಲುಗಳು ನೆರಳು ಏನೂ ಇರಲಿಲ್ಲ. ಆದರೆ ಭಗವಂತನ ದರುಶನ ಮುಖ್ಯ ಮಿಕ್ಕವೆಲ್ಲ ಗೌಣ. ಇಡೀ ಬೆಟ್ಟ ವೈಕುಂಠದಿಂದ ಬಂದಿರುವ ಬೆಟ್ಟ ಕೃತಯುಗದಿ ವೃಷಭಾಚಲ, ತ್ರೇತಾಯುಗದಿ ಆಂಜನೇಯ ಅವತರಿಸಿದ ಸ್ಥಳ ಅಂಜನಾಚಲ ದ್ವಾಪರದಲ್ಲಿ ಶೇಷಾಚಲ ಕಲಿಯುಗದಿ ವೆಂಕಟಾಚಲ ಬುಡದಿಂದ ಶಿಖರದವರೆಗೆ ಗಾಳಿಗೋಪುರದವರೆಗೆ ನೋಡಿದೆ. ಈ ಸಮಸ್ತರ ಗುರುವಾದ ಭಾರತೀಶನ ಪಾದಕ್ಕೆ ಎರಗಿದೆ.

ಕ್ಲೇಶವ ಕಳೆದು ಎದುರಾಗಿ ಪೊಳೆವ
ಶ್ರೀಶನ ಮಹಾದ್ವಾರವ ನೋಡಿದೆ ॥2॥

ಮಧ್ಯದಲ್ಲಿ ಸಿಗುವ ಮಾರುತಿ ಅವನೇ ಭಾರತೀಶ ಅವನ ದರುಶನ ಮಾಡಿ ಪಾದಕ್ಕೆ ನಮಿಸಿದೆ. ನಮ್ಮ ಎಲ್ಲ ಕ್ಲೇಶಗಳನ್ನು ಕಳೆವ ಶ್ರೀನಿವಾಸನ ಗುಡಿಯ ಮಹಾದ್ವಾರ. ಇದೇ ವೈಕುಂಠ ದ್ವಾರ ಬಲವಾಗಿ ಬಂದು ಸ್ವಾಮಿ ಪುಷ್ಕರಿಣಿ ಒಳಗೆ ವರಹನ ನೋಡಿದೆ



ಜಲದಲಿ ಮಿಂದು ವೇಗದಲಿ
ತಿರುವೆಂಗಳದೇವನ ನೋಡ ಸಾಗಿದೆ ॥3॥

ಬೆಟ್ಟ ಹತ್ತಿ ಬಂದು ಮೊದಲು ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿದರು. ತಿರುಮಲೆಯಲ್ಲಿರುವ ಎಲ್ಲ ಅರವತ್ತಾರು ಸಾವಿರ ತೀರ್ಥಗಳಿಗೆ ಸ್ವಾಮಿಯೋಪಾದಿ ಇರುವ ಈ ತೀರ್ಥದಲ್ಲಿ ಸರಸ್ವತಿ ಜಲರೂಪದಲ್ಲಿ ಇದ್ದಾಳೆ ಒಂದು ಕಡೆ ವರಾಹ ಮತ್ತೊಂದು ಕಡೆ ಶ್ರೀನಿವಾಸ ನೆಲೆಸಿದ್ದಾರೆ. ಇಲ್ಲಿ ಸ್ನಾನ ಮಾಡಿ ವರಾಹ ದೇವರ ದರ್ಶನ ಮಾಡಿ ಶ್ರೀನಿವಾಸನ ದರುಶನಕ್ಕೆ ಹೋಗಬೇಕು.

ಗುಡಿಯ ಪೊಕ್ಕೆನು ಗರುಡಗಂಬದ ।
ಸಡಗರವನು ನಾ ನೋಡಿದೆ ।
ಒಡನೆ ಪ್ರಾಣಾಚಾರದವರು ಪಡೆದ
ವರಗಳ ಕೇಳಿದೆ ॥4॥

ಗರುಡಗಂಬ ದರುಶನವೂ ಪುಣ್ಯ. ಶ್ರೀನಿವಾಸನಿಗೆ ವಾಹನವೇ ಅವನು. ಸಂಸಾರದ ಕ್ಲೇಶಗಳಿಂದ ನೊಂದು ಶ್ರೀನಿವಾಸ ಅನುಗ್ರಹಿಸಿದರೆ ಏಳುತ್ತೇನೆ ಇಲ್ಲ ಪ್ರಾಣ ಬಿಡುವವರೆಗೂ ಉಪವಾಸದಿಂದಿರುತ್ತೇನೆ ಎಂದು ಶ್ರೀನಿವಾಸನ ಸ್ತೋತ್ರಾದಿಗಳನ್ನು ಹೇಳುತ್ತ ಧ್ಯಾನವನ್ನು ಮಾಡುತ್ತ ಗರುಡಗಂಬದ ಬಳಿ ಮಲಗುವಂತಹ ವ್ಯಕ್ತಿಗಳು ಪ್ರಾಣಾಚಾರದವರು ಎನ್ನುತ್ತಾರೆ ಇವರುಗಳು ಶ್ರೀನಿವಾಸನನ್ನು ವರ ಕೇಳುತ್ತಾರೆ. ಸಂಕಟ ಬಿಡಿಸು ಎಂದು.

ಮುನ್ನ ಅವಸರ ಮನಿಯೊಳಗೆ
ಅನ್ನಪೂರ್ಣೆಯ ನೋಡಿದೆ ।
ಚೆನ್ನಾಗಿ ಮಂಟಪದೊಳು
ಶ್ರೀನಿವಾಸನ್ನಮೂರುತಿಯ ನೋಡಿದೆ ॥5॥

ಅವಸರ ಮನಿ ಅಂದರೆ ಅಡಿಗೆಮನಿ. ಅನ್ನಪೂರ್ಣೆಯೇ ಅಡಿಗೆ ಮಾಡುವುದು. ಇವು ಬಕುಳಮಾಲೆ ಎಂದು ಪುರಾಣಗಳಲ್ಲಿ ಉಂಟು. ಶ್ರೀನಿವಾಸನಿಗೆ ಅಪೋಶನ ಹಾಕುವುದು ಬಡಿಸುವುದು ಲಕ್ಷ್ಮಿ. ಆದ್ದರಿಂದ ಇಲ್ಲಿ ನೈವೇದ್ಯ ಸ್ವೀಕರಿಸಲೇ ಬೇಕು ಎಂದು ನಿಯಮವುಂಟು. ಇಂದಿಗೂ ಮಂಟಪದ ಶ್ರೀನಿವಾಸ ಎಂದರೆ ವಿಮಾನ ಶ್ರೀನಿವಾಸ. ಮೂಲಮೂರ್ತಿಯಂತೆಯೇ ಇರುವ ಶ್ರೀನಿವಾಸ ವಿಮಾನ ಶ್ರೀನಿವಾಸ ಎನ್ನಿಸುತ್ತಾನೆ. ಶ್ರೀನಿವಾಸನ ದರ್ಶನ ಆದ ಮೇಲೆ ದರ್ಶನ ಮಾಡುವುದು ಸಂಪ್ರದಾಯ.

ತೊಟ್ಟಿಲ ತೀರ್ಥವ ಕೊಂಡು ಪ್ರಸಾಧವ ।
ಇಟ್ಟು ಮಾರುವುದು ನೋಡಿದೆ
ಇಷ್ಟ ಭಕುತರು ಸಮ್ಮುದಲ್ಲಿ ಮುಟ್ಟಿ
ಪಾಡುವುದು ನೋಡಿದೆ ॥6॥

ಸಂಪಂಗಿ ಪ್ರದಕ್ಷಿಣ ಪ್ರಾಕಾರದಲ್ಲಿ ಉಗ್ರಾಣದ ಮುಂದೆ ಕಲ್ಲಿನ ತೊಟ್ಟಿಯಲ್ಲಿರುವ ತೀರ್ಥ ತೊಟ್ಟಿಲತೀರ್ಥ. ಇದು ವಿರಜಾ ನದಿ ಶ್ರೀನಿವಾಸನ ಪಾದದ ಕೆಳಗೆ ಹರಿಯುತ್ತಿದೆ. ನೀರು ಚಿಲುಮೆಯಂತೆ ಹನಿ ಹನಿ ಸೇಚನ ಆಗುತ್ತದೆ. ಇದಕ್ಕೆ ಸುವರ್ಣಮುಖರಿ ನದಿ ಎಂತಲೂ ಕರೆಯುತ್ತಾರೆ.

ದ್ವಾರಪಾಲಕರಿಗೆ ಸಾಷ್ಟಾಂಗದಲಿ
ನಮಸ್ಕಾರವನ್ನು ಮಾಡಿದೆ।
ಘೋರನೆ ಕಟಾಂಜನದ ಫಲ್ಗುಣಿ
ಬಂಗಾರ ಬಾಗಿಲವ ನೋಡಿದೆ ॥7॥

ದೇವರ ಪೂಜೆ ಮಾಡುವಾಗ ದ್ವಾರಪಾಲಕರ ಪೂಜೆ ಮಾಡುವಂತೆ ದೇವರ ದರುಶನಕ್ಕೆ ಮುಂಚೆ ದ್ವಾರಪಾಲಕರಿಗೂ ನಮಿಸುವ ನಂತರ ಬಂಗಾರದ ಬಾಗಿಲಿನ ದರ್ಶನ.

ಇಂದುರವಿಕೋಟಿ ತೇಜದ ಇಂದಿರೇಶನ ಪಾದಾರ
ವಿಂದಯುಗ್ಮವ ಪುಳಕೋತ್ಸವದಿಂದ ಸಂದರುಶನ ಮಾಡಿದೆ ॥8॥

ಸೂರ್ಯಕೋಟಿ ಸಮಪ್ರಭ ಚಂದ್ರಕೋಟಿಸುಶೀತಲಂ ಎಂದಂತೆ ತೇಜಸ್ಸುಳ್ಳ ಶ್ರೀನಿವಾಸ ಅವನು ಇಂದಿರೇಶ ಅವನ ಪಾದಯುಗ್ಮಗಳನ್ನು ನೋಡಿದೆ ಪುಳಕಿತನಾದೆ ಮೈರೋಮಾಂಚನವಾಯಿತು ಅದೇ ಪುಳಕೋತ್ಸವ ಎಂದಿದ್ದಾರೆ ದಾಸರು

ಇಟ್ಟಿದ್ದ ಅಂದಿಗೆ ಉಟ್ಟ
ಪೀತಾಂಬರ ಕಟ್ಟಿದ್ದ ದಟ್ಟಿವಡ್ಯಾಣ
ಝುಟಿ ಕಂಕಣಾಕಾರದಲಾಯುಧ
ಇಟ ಕಸ್ತೂರಿ ನೋಡಿದೆ ॥9॥

ಮಾಸದ ಪೂವು ಪೂಸಿದ
ಗಂಧಭೂಷನನಾನ ಪರಿಪರಿ ವಿಧ
ಏಸು ಬಗೆಯಲ್ಲಿಟ್ಟ ಶ್ರೀನಿವಾಸನ
ಶೃಂಗಾರ ನೋಡಿದೆ ॥10॥

ಶ್ರೀನಿವಾಸನ ಮೈಮೇಲಿನ ಆಭರಣಗಳು ಉಟ್ಟ ಪೀತಾಂಬರವು ತೊಟ್ಟ ವಡ್ಯಾನ ತೋಳು ಬಳೆಗಳು, ಎಂದೆಂದು ಬಾಡದ ಹೂವಿನ ಮಾಲೆಗಳು ಮೈಗೆ ಪೂಸಿದ ಗಂಧ ಎಲ್ಲವೂ ಲಕ್ಷ್ಮಾತ್ಮಕವಾದದ್ದು ನೋಡಿದೆ.

ಜಯ ಜಯ ಜಗದೀಶ ಜಗನ್ನಿವಾಸ
ಜಯ ಜಯ ಲಕುಮಿ ಪರಿತೋಷ॥
ಜಯಜಯ ವಿಜಯ ವಿನಾಶ॥
ಜಯ ಜಯ ಸರ್ವೇಶ ಜಯವೆಂದು
ಸ್ತೋತ್ರ ಮಾಡಿದೆ ॥
ಶ್ರೀನಿವಾಸನನ್ನು ಮನದಣಿಯೆ
ಸ್ತೋತ್ರ ಮಾಡಿದೆ ಜಗದೀಶ ಜಗನ್ನಿವಾಸ
ಲಕುಮಿಗೆ ಆನಂದ ನೀಡುವವನ ಸರ್ವೋತ್ತಮ
ಎಂಜಿ ಕೇಸಕ್ಕಿ ದಧ್ಯೋದನ್ನ ಪರಮಾನ್ನ
ದೋಸಿ ಬಿಸಿಬಿಸಿ ಮನೋಹರ
ಲೇಸಾಗಿ ಚತುರ್ವಿಧ ಪ್ರಸಾದವನ್ನು
ಈಸು ಅವಸರ ನೋಡಿದೆ ॥12॥
ಕರ್ಪೂರದಾರತಿ ವಪ್ಪದಿಂದಲಿತಂದು
ತಪ್ಪದೆ ಬೆಳಗೋದು ನೋಡಿದೆ।
ರೆಪ್ಪೆಯ ಹಾಕದೆ ಮನದಣಿಯ
ತಿಮ್ಮಪ್ಪನ ವಿಗ್ರಹ ನೋಡಿದೆ ॥13॥

ನೈವೇದ್ಯಕ್ಕೆ ಮಾಡಿದ ಪದಾರ್ಥಗಳ ಪಟ್ಟಿಯನ್ನೆ ದಾಸರು ನೀಡುತ್ತಾರೆ. ಕರ್ಪೂರದಾರತಿ ಬೆಳಗಿದ್ದನ್ನು ಕಂಡಿದ್ದಾರೆ. ರೆಪ್ಪೆ ಹಾಕದೆ ನೋಡಿದೆ ಎನ್ನುತ್ತಾರೆ. ಮನಸ್ಸಿಗೆ ತೃಪ್ತಿಯಾಗುವವರೆಗೆ ನೋಡಿದೆ ಎನ್ನುತ್ತಾರೆ.

ಹಿಮಋತು ಪ್ರಥಮಮಾಸದ
ದಶಮಿ ಹಿಮಕರವಾದ ದಿನದಲಿ।
ಕ್ರಮದಿಂದಲಿ ಪೋಗಿ ಬಿಂಬ
ಮೂರುತಿಯ ದಿವ್ಯಚಾರಿತ್ರ ನೋಡಿದೆ.

ಹಿಮಂತ ಋತು , ಮಾರ್ಗಶೀರ್ಷಮಾಸ ಶುದ್ಧ ದಶಮಿ ವಿಜಯದಾಸರು ದರುಶನ ಮಾಡಿದ ದಿನ ಕೊಡುತ್ತಾರೆ. ಕೊನೆಗೆ ಇವನೇ ಬಿಂಬಮೂರುತಿ ಎನ್ನುತ್ತಾರೆ. ಅವನ ಮಹಿಮೆಯನ್ನು ನೆನೆಯುತ್ತಾರೆ.

ಶತ ಅಪರಾಧವ  ಮಾಡಲು ಕಳೆದು
ಗತಿಯನೀವ ಇಂದಿರಾ
ಪತಿ ವಿಜಯವಿಠ್ಠಲ ಪುರಂದರನ
ಸಂಗತಿಯಲ್ಲಿ ಸತತ ಸಾಕಿದ ॥15॥

ಅನಂತ ಅಪರಾಧಗಳನ್ನು ಮಾಡಿದ್ದರೂ ಶ್ರೀನಿವಾಸನಿಗೆ ಶರಣಾದರೆ "ತಪ್ಪುಗಳೆಲ್ಲ ಪರಿಹರಿಸುವ ನಮ್ಮಪ್ಪನಲ್ಲವೇ ನೀನು ಒಪ್ಪಿದ ಬಳಿಕ ಅವಗುಣವೆಣಿಸದೆ ತಿಮ್ಮಪ್ಪ ಸಲಹೋ  ನೀನೂ ಎಂದಲ್ಲಿ ಅವೆಲ್ಲವನ್ನು ಕಳೆದು ಯೋಗ್ಯ ಗತಿಯನ್ನು ನೀಡುವನು.

ಪುರಂದರ ಅಂದರೆ ಇಂದ್ರ ಅವನ ಲೋಕ ಸ್ವರ್ಗಲೋಕ. ಆ ಸುಖವನ್ನು ತಂದು ಕೊಡುವ.

ಹೀಗೆ ಶ್ರೀ ವಿಜಯದಾಸರು ಶ್ರೀನಿವಾಸನ ದರುಶನ ಮಾಡಿ ಅನೇಕ ದೇವರನಾಮಗಳನ್ನು ಸುಳಾದಿಗಳನ್ನು ರಚಿಸಿದ್ದಾರೆ. ಕಾರ್ತಿಕ ಶುದ್ಧ ದಶಮಿ ಅವರ ಆರಾಧನೆ. ಅವರು ನಮ್ಮೆಲ್ಲರಿಗೆ ಶ್ರೀನಿವಾಸನ ದರುಶನ ಮಾಡಿಸಲಿ ಎಂದು ನಮಿಸೋಣ.

**ಶ್ರೀ ಕೃಷ್ಣಾರ್ಪಣಮಸ್ತು**



## ಪೂಜಾ ಸಮಯದಲ್ಲಿ ಘಂಟೆ ಬಾರಿಸುವುದು ಯಾಕೆ?

ಸನಾತನ ಧರ್ಮದಲ್ಲಿ ಹಲವಾರು ನಂಬಿಕೆ ಹಾಗೂ ಸಂಪ್ರದಾಯಗಳು.  ಪ್ರತಿಯೊಂದಕ್ಕೂ ಸಂಪ್ರದಾಯ ಮತ್ತು ಬಳಸುವ ವಸ್ತುಗಳಿಗೆ ವೈಜ್ಞಾನಿಕ ಕಾರಣಗಳು ಇವೆ. ಆದರೆ ಎಲ್ಲವೂ ಅಂತಿಮವಾಗಿ ದೇವರ ಆಶೀರ್ವಾದ ಪಡೆಯುವುದು ಆಗಿರುವುದಾಗಿದೆ.  ಹಿಂದೂ ಧರ್ಮವು ವಿವಿಧತೆಯಲ್ಲಿ ಏಕತೆಯನ್ನು ತೋರಿಸುತ್ತದೆ. ಯಾವೊಂದು ಶುಭಕಾರ್ಯವನ್ನಾಗಲೀ ಘಂಟಾನಾದವಿಲ್ಲದೆ ಪ್ರಾರಂಭಿಸುವಂತಿಲ್ಲ. ಘಂಟೆ ಪರಮಾತ್ಮನ ನಾಮ ಓಂಕಾರವನ್ನು ಉತ್ಪಾದಿಸುತ್ತದೆ.  ಇದರಿಂದ ದೇಹ ಶುದ್ಧಿ, ಮನಃಶಾಂತಿ ಲಭಿಸುತ್ತದೆ. ಘಂಟನಾದದಿಂದ ಸದ್ಗುಣ, ಧಾರ್ಮಿಕ ಪ್ರವೃತ್ತಿಗಳು ನಮ್ಮನು ಪ್ರವೇಶಿಸಲಿ, ಆಸುರೀ ಹಾಗೂ ದುಶ್ಚಟಗಳು ಹೊರದೂಡಲಿ, ಧರ್ಮದ ಪ್ರಜ್ಞೆ ಜಾಗೃತಿಯಾಗಿ ಪರಮಾತ್ಮನ ಕಡೆ ನಮ್ಮ ಮನಸ್ಸು ಕೇಂದ್ರೀಕೃತವಾಗಲಿ ಎಂಬ ಉದ್ದೇಶವಾಗಿದೆ. ಸಚ್ಚಿದಾನಂದ ಸಾಕ್ಷಾತ್ಕಾರಕ್ಕೆ ಮೂಲವಾದ ನಾದ ತತ್ತ್ವದ ಬಾಹ್ಯಪ್ರಯೋಗವಾಗಿ ಘಂಟೆ ಬಳಕೆಗೆ ಬಂದಿತೆಂದೂ ಕ್ರಮೇಣ ದೇವತಾಲಾಂಛನವೆಂಬ ಗೌರವದಿಂದ ಪೂಜಾರ್ಹವಾಯಿತು ಎಂದು ಹೇಳಲಾಗಿದೆ. ಪೂಜಾ ಕಾಲವನ್ನು ಬಿಟ್ಟು ಇತರ ಕಾಲಗಳಲ್ಲಿ ಘಂಟಾನಾದವಿಲ್ಲ. ಗಂಟೆ ಎಂಬುದು ಸಂಸ್ಕೃತದ ಘಂಟಾ ಎಂಬುದರ ತದ್ಭವ ರೂಪ.

ಶ್ರೀವೈಷ್ಣವ ಆಚಾರ್ಯ ಪರಂಪರೆಗೆ ಸೇರಿದ ವೇದಾಂತದೇಶಿಕರು ಭಗವಂತ ಘಂಟಾವತಾರವೆಂದು ಪ್ರತೀತಿ. ವೆಂಕಟೇಶನ ಭಕ್ತರಾದ ಇವರ ಮಾತಾಪಿತೃಗಳಿಗೆ ಬಹುಕಾಲದವರೆಗೆ ಸಂತಾನವಿರಲಿಲ್ಲ.  ಒಮ್ಮೆ ಇವರು ಮಲಗಿದ್ದಾಗ ತಿರುಪತಿಯ  ವೆಂಕಟೇಶನ ಗರ್ಭಗೃಹದ ಘಂಟೆಯನ್ನು  ಆಚಾರ್ಯರ  ತಾಯಿಯವರು ನುಂಗಿದಂತೆ ಸ್ವಪ್ನವನ್ನು ಕಂಡು ಬೆಳಗ್ಗೆ ದೇವಸ್ಥಾನದಲ್ಲಿ ನೋಡಲಾಗಿ ಆ ಘಂಟೆಯೂ ಇರಲಿಲ್ಲ. ತಮ್ಮ ತಾಯಿಯ  ಗರ್ಭದಲ್ಲಿ ತಿರುಪತಿಯ ಶ್ರೀವೆಂಕಟೇಶನ ಘಂಟಾ ಸ್ವರೂಪವಾಗಿ ಶ್ರೀ ಆಚಾರ್ಯರು ಅವಿರ್ಭವಿಸಿ ಘಂಟಾವತಾರವೆಂದು ಪ್ರಸಿದ್ಧರಾಗಿದ್ದಾರೆ.

ಒಂದು ಸಲ ಘಂಟೆಯ ಶಬ್ದ ಮೊಳಗಿದರೆ  ಅದು ವಾತಾವರಣದಲ್ಲಿ  ಸುಮಾರು ಹತ್ತು ಸೆಕೆಂಡುಗಳ ಕಾಲ ಇರುವುದು. ಈ ಶಬ್ದವು ದೇಹದ ಏಳು ಶಮನ ಕೇಂದ್ರಗಳನ್ನು ಬಡಿದೆಬ್ಬಿಸುವುದು ಮತ್ತು ಮನಸ್ಸು ಶಾಂತವಾಗಿಸಿ, ಏಕಾಗ್ರತೆ ಹೆಚ್ಚಿಸುವುದು. ಘಂಟೆಯ ಶಬ್ದ ಮನಸ್ಸು, ದೇಹ ಮತ್ತು ಆತ್ಮಕ್ಕೆ ಶಕ್ತಿ ನೀಡುವುದು ಇದೇ ಶಕ್ತಿ ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಿಸಲೂ ಮನಸ್ಸಿನ ದುಗುಡ - ಒತ್ತಡ - ಖಿನ್ನತೆಗಳನ್ನು ನಿವಾರಿಸಲೂ ನೆರವಾಗುತ್ತದೆ. ಸದ್ದು, ಗದ್ದಲವಿದ್ದಾಗ ಘಂಟಾನಾದದಿಂದ ನಮ್ಮ ಮನಸ್ಸು ಏಕಾಗ್ರತೆಗೆ ಹೋಗುತ್ತದೆ. ಘಂಟನಾದದ ಶಬ್ದದಿಂದ ಹೊರಡುವ ತರಂಗಗಳು  ಕಿವಿಗೆ ಮತ್ತು ಕಿವಿಗೆ ಸಂಬಂಧಪಟ್ಟ  ನರಗಳ ಮೇಲೆ ಒಳ್ಳೆಯ ಪ್ರಭಾವ ಬೀರಿ ಮನಸ್ಸು ಉಲ್ಲಾಸಭರಿತವಾಗುತ್ತದೆ. ಘಂಟನಾದದಿಂದ ಜನರಿಗೆ ಪೂಜೆಯ ಸ್ಥಳ ಗೊತ್ತಾಗುತ್ತದೆ.  ನಮ್ಮ ಕೈಗಳಿಗೆ ವ್ಯಾಯಾಮ ದೊರಕಿ, ಕೈಯ ನರಗಳಿಗೆ ರಕ್ತ ಸಂಚಾರ ಸುಗಮವಾಗುತ್ತದೆ. ನೆರೆಹೊರೆಯವರೊಂದಿಗೆ ಶಾಂತಿ ಮತ್ತು ಒಗ್ಗಟ್ಟಿನ ಸಂಕೇತವಾಗಿದೆ.

**- ಹನುಮಂತ ಮ. ದೇಶಕುಲಕರ್ಣಿ**

ಇನ್ನೊಂದು ಚಿಕ್ಕ ಚಿನ್ನಹ, "ಪನ್ನಾಗಾಪ! ನೀನು ಸಾಮಾನ್ಯನೇ? ನಿನ್ನ ಸಹೋದರರೆಲ್ಲರೂ ಮೂರ್ಖರು ಎಂದು ತಿಳಿದು ಸಾತ್ವಿಕಮೂರ್ತಿಯ ನಂಬಿಕಸ್ಥ ಸೇವಕನಾದೆ. ಈ ಸ್ವಭಾವದಿಂದಲೇ ನಿನ್ನ ಹಠವನ್ನು ಬಿಡುತ್ತಿಲ್ಲ.ಅನಗತ್ಯ ಕೋಪ ವೇಕೆ? ವಾಯುದೇವರು ಗೆದ್ದರೂ ನೀನೂ ಶ್ರೇಷ್ಠ" ಎಂದು ಲೋಕ ಕಲ್ಯಾಣಕ್ಕಾಗಿ ಹಠ ಬಿಡಲು ವಿವರಿಸಿದರು.

ಶೇಷನು ಬ್ರಹ್ಮೇಂದ್ರಾದಿಯರ ಉಪದೇಶವನ್ನು ಮನ್ನಿಸಿದನು. ಹತ್ತು ಸಾವಿರ ಹಗ್ಗಗಳಲ್ಲಿ ಒಂದನ್ನು ಸಡಿಲಗೊಳಿಸಿದನು. ಇದೇ ಸಮಯವೆಂದು ತಿಳಿದು ಮಾರುತನು ತನ್ನ ಶಕ್ತಿಯನ್ನು ಪ್ರದರ್ಶಿಸಿದನು. ಅವನು ತನ್ನ ಹೆಬ್ಬೆರಳನ್ನು ನೆಲದ ಮೇಲೆ ಇಟ್ಟು ಬೆಟ್ಟವನ್ನು ಸ್ವಲ್ಪ ಎಗರುವಂತೆ ಮಾಡಿದನು. ವಾಯುವೇಗಕ್ಕೆ ವೇಂಕಟಾದ್ರಿಯು ಗಂಗಾನದಿಯ ದಕ್ಷಿಣಕ್ಕೆ 200 ಯೋಜನ ದೂರದಲ್ಲಿ, ಪೂರ್ವ ಸಮುದ್ರಕ್ಕೆ 5 ಯೋಜನೆ ದೂರದಲ್ಲಿದ್ದ ಸುವರ್ಣಮುಖರಿತೀರಕ್ಕೆ ಉತ್ತರದಲ್ಲಿದ್ದ ಕಾಡುಗಳ ನಡುವೆ, ಬಿದ್ದಿತು. ಪವನನು ತಾನೇ ಗೆದ್ದೆ ಎಂಬ ವಿಜಯಗರ್ವದಿಂದ ಅಲ್ಲಿಂದ ಹೊರಟನು. ಇದನ್ನೆಲ್ಲಾ ನೋಡಿದ ಶೇಷನು ಪರಾಭವದ ದುಃಖದಲ್ಲಿದ್ದಾಗ ಬ್ರಹ್ಮೇಂದ್ರಾದಿಯರು ಶೇಷನನ್ನು ಸಮಾಧಾನಪಡಿಸಿದರು.

"ಶೇಷ ಸೋತಿದ್ದೇನೆ ಎಂದು ದುಃಖಿಸಬೇಡ, ವೆಂಕಟಗಿರಿಯನ್ನು ಬಿಡಬೇಡ. ವೆಂಕಟಗಿರಿಯೇ ಸರ್ವಸ್ವವೆಂದು ಭಾವಿಸು. ನಿನ್ನ ಮೇಲಿನ ಪ್ರೀತಿಯಿಂದ ಚಕ್ರಪಾಣಿಯು ವೆಂಕಟಾದ್ರಿಯಲ್ಲಿ ಕಲಿಕಾಲದವರೆಗೂ ನೆಲೆಸುವನು" ಎಂದು ಭವಿಷ್ಯತ್ ಕಥನ ಹೇಳಿದನು. ಆಗ ಶೇಷನು "ಓ ದೇವತೆಗಳೇ! ವಾಯುದೇವರೊಂದಿಗೆ ನಾನು ಪಣತೊಡುವುದು ಸರಿಯಲ್ಲ. ಅದು ನನ್ನ ಮೊದಲು ತಪ್ಪು, ಮತ್ತು ಪಣವನ್ನು ಸ್ವೀಕರಿಸುವುದು ನನ್ನ ಎರಡನೇ ತಪ್ಪು. ಹರಿ ಹೀಗೆ ಕರುಣಿಸುತ್ತಾನೆ ಎಂದು ಹೇಗೆ ನಂಬಲಿ? ನನ್ನ ಅಹಂಕಾರವೇ ಈ ಅವಮಾನಕ್ಕೆ ಕಾರಣವಾಯಿತು ಎಂದು ದುಃಖಿಸಿದನು. ಆಗ ಬ್ರಹ್ಮನು,"ನೀನೇಕೆ ಚಿಂತೆ ಮಾಡುತ್ತಿದ್ದೀಯ? ಈ ವನಜದಳಾಕ್ಷನೇ ಈ ಬೆಟ್ಟದ ಮೇಲೆ ವಾಸಿಸುವಂತೆ ಮಾಡುವ ಎಲ್ಲ ಪ್ರಯತ್ನಗಳನ್ನು ಮಾಡುತ್ತೇನೆ. ಹಾಗೆಯೇ ಈ ಬೆಟ್ಟವೇ ಸರ್ವ ರಕ್ಷಕನೆಂದು ಭಾವಿಸು. ಹರಿಯನ್ನು ಇಲ್ಲಿಗೆ ಕರೆತರುವ ಜವಾಬ್ದಾರಿ ನನ್ನದು ಎಂದು," ಶೇಷನ ತಲೆಯನ್ನು ನಿಧಾನವಾಗಿ ಸ್ಪರ್ಶಿಸಿ, ಸಮಾಧಾನಪಡಿಸಿ, ತನ್ನ ಲೋಕಕ್ಕೆ ನಿಷ್ಕ್ರಮಿಸಿದನು." ಇಂದ್ರಾದಿಯರು ಕೂಡಾ ಅಲ್ಲಿಂದ ಹೊರಟರು. ಶೇಷನು ವೈಕುಂಠಪತಿಗೆ ಸಾಷ್ಟಾಂಗವೆರಗಿ, ಪರ್ವತಾಕಾರ ಹೊಂದಿದನು.

ಶೇಷಾದ್ರಿಯ ಶಿರದಲ್ಲಿ ವೆಂಕಟಾದ್ರಿ ಇದೆ, ಮತ್ತು ಅದರ ಬಾಲದ ಕೊನೆಯಲ್ಲಿ ಅಹೋಬಲಂ ಇದೆ. ಈ ಇಡೀ ಪರ್ವತ ತೀರ್ಥಮಯ. ಈ ಪವಿತ್ರ ಸ್ಥಳದಲ್ಲಿ ದೇವತೆಗಳು ತರುಗಳ ರೂಪದಲ್ಲಿ, ಋಷಿಗಳು ಮೃಗಗಳ ರೂಪದಲ್ಲಿ, ಪಿತೃಗಣವು ಪಕ್ಷಿಗಳ ರೂಪದಲ್ಲಿ ಮತ್ತು ಕಿನ್ನರಾದಿ



# ಶ್ರೀ ವೆಂಕಟಾಚಲ ಮಹಾತ್ಮ್ಯೆ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ





ಯರು ಕಲ್ಲುಗಳ ರೂಪದಲ್ಲಿ ವಾಸಿಸುತ್ತಾರೆ ಎಂದು ವರವನ್ನು ನೀಡಿ ದೇವತೆಗಳು ಸಹ ಹೊರಟುಹೋದರು. ಸ್ವಾಮಿ ಪುಷ್ಕರಿಣಿಯು ಸರ್ವಪಾಪಹಾರಿ. ಗಂಗಾದಿ ನದಿಗಳು ಈ ಪುಷ್ಕರಿಣಿಯಲ್ಲಿಯೇ ನೆಲೆಗೊಂಡಿವೆ. ಪುಷ್ಕರಿಣಿಯಲ್ಲಿ ಸ್ನಾನ ಮಾಡುವವರು ಮೋಕ್ಷಕ್ಕೆ ಅರ್ಹರಾಗುತ್ತಾರೆ. ಪುಷ್ಕರಿಣಿ ತೀರ್ಥ ಸ್ಥಳದಲ್ಲಿ ಶ್ರಾದ್ಧ ಕರ್ಮಗಳನ್ನು ನಡೆಸಿದರೆ, ಪಿತೃದೇವತೆಯರು ಅಮೃತವನ್ನು ಕುಡಿದಂತೆ ಆನಂದಿಸುತ್ತಾರೆ. ಇದಲ್ಲದೆ, ನಾರಾಯಣ ಎಂಬ ಬ್ರಾಹ್ಮಣನು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಹರಿ ದಿವ್ಯಧಾಮವನ್ನು ಸೇರಿದನು.

ಇಲ್ಲಿಯವರೆಗೆ ಶೇಷಾದ್ರಿಯ ಮಹಿಮೆಯನ್ನು ನಿಮಗೆ ಹೇಳಿದ್ದೇನೆ. ಈಗ ವೆಂಕಟಾದ್ರಿಯ ಮಹಿಮೆಯನ್ನು ಹೇಳುವೆ. ಹಾಗೆಯೇ, ಮಾಧವ ಎಂಬ ಬ್ರಾಹ್ಮಣನ ಕಥೆಯನ್ನೂ ಹೇಳುತ್ತೇನೆ, ಕೇಳಿ.

ಶ್ರೀಕಾಳಹಸ್ತಿಯಲ್ಲಿ ಪುರಂದರ ಸೋಮಯಾಜಿ ಎಂಬ ಪ್ರಸಿದ್ಧ ಬ್ರಾಹ್ಮಣನಿದ್ದನು. ಅವರ ಮಗನೇ ಮಾಧವ. ಆತನ ಪತ್ನಿ ಚಂದ್ರರೇಖಾ. ಇಬ್ಬರೂ ಒಳ್ಳೆಯವರೇ. ಆದರೆ ಒಂದು ದಿನ ಕರ್ಮವಶಾತ್ ಮಾಧವನು ಹಗಲು ಹೊತ್ತಿನಲ್ಲಿ ಕಾಮೋದ್ರೇಕಗೊಂಡು, ಚಂದ್ರರೇಖಾಳನ್ನು ತನ್ನೊಂದಿಗೆ ಲೈಂಗಿಕ ಸಂಭೋಗ ನಡೆಸಲು ಒತ್ತಾಯಿಸಿದನು. ಆದರೆ ಚಂದ್ರರೇಖಾ ಇದು ಅನುಚಿತ ಎಂದು ಹೇಳಿದಳು. ಇದಲ್ಲದೆ, ಇದು ಧರ್ಮಕ್ಕೆ ವಿರುದ್ಧವಾಗಿದೆ. ಮನೆಯಲ್ಲಿ ಹಿರಿಯರು ಇದ್ದಾಗ ಈ ಕಲ್ಪನೆ ಸರಿಯಲ್ಲ! ಮನೆಯಲ್ಲಿ ವೇದೋಕ್ತವಾಗಿ ದೇವತಾರ್ಚನೆ, ಅಗ್ನಿಹೋತ್ರಗಳು ನಡೆಯುತ್ತಿದ್ದಾಗ, ಇದು ಎಂತಹ ಮೂರ್ಖತನ ಎಂದು ಅವಳು ಮಾಧವನಿಗೆ ತಿಳಿ ಹೇಳಿದಳು. ತಾನು ನಿಯಮಗಳು ಮತ್ತು ಸಂಪ್ರದಾಯವನ್ನು ಗೌರವಿಸುವ ಸಂಪ್ರದಾಯಸ್ಥ ಮಹಿಳೆ ಎಂದು ಸ್ಪಷ್ಟಪಡಿಸಿದಳು. ಮಾಧವ ಈಗಾಗಲೇ ಚಂದ್ರರೇಖಾಳ ಸೌಂದರ್ಯದಿಂದ ಮೋಹಗೊಂಡಿದ್ದನು. ಇಂತಹ ಅತಿರೇಕದ ಆಲೋಚನೆ ಸಲ್ಲದೆಂದು ಗಂಡನನ್ನು ಬೇಡಿಕೊಂಡಳು. ಆದಾಗ್ಯೂ, ಕಾಮಾಸಕ್ತಿಯಿಂದ, ಚಂದ್ರರೇಖಾಳನ್ನು ಎಲ್ಲ ರೀತಿಯಲ್ಲೂ ಒತ್ತಾಯಿಸಿದನು. ಕೊನೆಗೆ ಚಂದ್ರರೇಖಾ "ಸ್ವಾಮಿ, ನಿಮ್ಮ ಈ ಆಲೋಚನೆ ಮನೆಗೆ ಸೂಕ್ತವಲ್ಲ. ದಯವಿಟ್ಟು ದರ್ಭೆ ಮತ್ತು ಹೂವುಗಳಿಗಾಗಿ ನದಿ ದಡಕ್ಕೆ ಬನ್ನಿ. ನಾನು ನದಿ ನೀರಿಗಾಗಿ ಕಲಶದೊಂದಿಗೆ ಆ ಸ್ಥಳಕ್ಕೆ ಬರುತ್ತೇನೆ. ನಿಮ್ಮ ಆಸೆಯನ್ನು ಅಲ್ಲಿ ಈಡೇರಿಸಿಕೊಳ್ಳಿ ಎಂದು ಸ್ವಲ್ಪ ಹಿಂಜರಿಕೆಯಿಂದ ಹೇಳಿದಳು. ತನ್ನ ಆಸೆಯನ್ನು ಪೂರೈಸುವ ಅವಕಾಶ ಸಿಕ್ಕಿದ್ದಕ್ಕೆ ಮಾಧವನಿಗೆ ತುಂಬಾ ಸಂತೋಷವಾಯಿತು. ಅವನು ಸರಿ ಎಂದು ಹೇಳಿ ಹೂವುಗಳಿಗಾಗಿ ಬಂದಿರುವನಂತೆ ಸುವರ್ಣಮುಖರೀ ತೀರದ ಕಡೆಗೆ ಸಾಗಿದನು. ಅದೇ ಸಮಯದಲ್ಲಿ, ನದೀ ತೀರದಲ್ಲಿ ಪದ್ಮಿನಿ ಜಾತಿಯ ಚಾಂಡಾಲ ಸ್ತ್ರೀಯನ್ನು ಕಂಡನು. ಅವಳ ವಯೋ ಸಹಜ ಸೌಂದರ್ಯ ಮತ್ತು ಲಾವಣ್ಯದಿಂದ ಆಕರ್ಷಿತನಾದನು. ಅದೇ ಸಮಯದಲ್ಲಿ, ಅವನ ಹೆಂಡತಿ ಚಂದ್ರರೇಖಾ ಬಂದಳು ಹೆಂಡತಿಯನ್ನು ಸೇರಲು ಬಯಸಿದ್ದ ಮಾಧವನು ಕ್ಷಣದಲ್ಲಿಯೇ ಅನ್ಯ ಸ್ತ್ರೀ ಆದ ಚಾಂಡಾಲ ಸ್ತ್ರೀಯ ಮೇಲೆ ಆಸೆಗಳನ್ನು ಬೆಳಸಿಕೊಂಡನು. ಸೌಂದರ್ಯವತಿಯಾದ ಅವಳನ್ನು ಹೊಂದಲು ತಡಪಡಿಸಿದನು. ನಂತರ ಕಲಶದೊಂದಿಗೆ ಬಂದ ಚಂದ್ರರೇಖಾಗೆ ನಿನ್ನನ್ನು ಪರೀಕ್ಷಿಸಲು ನಾನು ಇಂತಹ ಬಯಕೆಯನ್ನು ವ್ಯಕ್ತ ಪಡಿಸಿದನು. ಹಗಲಿನಲ್ಲಿ ಲೈಂಗಿಕ ಸಂಭೋಗ ಸೂಕ್ತವಲ್ಲ ಎಂದು ನನಗೆ ತಿಳಿದಿದೆ ಆದರೂ ಹೆಂಡತಿ ಹೇಳಿದ ಸ್ಥಳಕ್ಕೆ ಬಂದೆನು. ನನಗೆ ಈಗ ಯಾವುದೇ ಬಯಕೆ ಇಲ್ಲ. ನೀನು ಜಲಕಲಶದೊಂದಿಗೆ ಮನೆಗೆ ಹೋಗು. ನಾನು ನಿಧಾನವಾಗಿ ಬರುತ್ತೇನೆ ಎಂದು ಹೇಳಿ ಚಂದ್ರರೇಖಾಳನ್ನು ಕಳುಹಿಸಿದನು. ತನ್ನ ಪತಿ ಬದಲಾಗಿದ್ದಕ್ಕೆ ಚಂದ್ರರೇಖಾ ಸಂತೋಷಪಟ್ಟಳು. ಧರ್ಮಭಂಗವಾಗಿಲ್ಲವೆಂಬ ತೃಪ್ತಿಯಿಂದ ಮನೆಗೆ ಹೊರಟಳು.

ಚಂದ್ರರೇಖಾಳು ಕಣ್ಮರೆಯಾದ ನಂತರ, ಮಾಧವ ನದಿಯ ದಡದಲ್ಲಿ ಚಾಂಡಾಲ ಮಹಿಳೆಯ ಕಡೆಗೆ ಹೆಜ್ಜೆ ಹಾಕಿದನು. ಆ ಕನ್ಯೆಯು ತನ್ನ ಕಡೆಗೆ ಬರುತ್ತಿದ್ದ ಮಾಧವನನ್ನು ನೋಡಿದಳು. ಅವನ ರೂಪ ಮತ್ತು ವೇಷ ಭೂಷಣವನ್ನು ನೋಡಿ, ಅವನು ಬ್ರಾಹ್ಮಣನೆಂದು ಅರಿತು, ಪಕ್ಕಕ್ಕೆ ಸರಿದಳು. ಆದರೆ, ಮಾಧವ ಚಾಂಡಾಲ ಮಹಿಳೆಯ ಕಡೆಗೆ ಬರುತ್ತಿರುವುದನ್ನು ನೋಡಿ, ಅವಳು, "ಭೂಸುರ! ನೀನು ಯಾರೆಂದು ತಿಳಿಯಿತು. ನೀನು ಬ್ರಾಹ್ಮಣನಂತೆ ಕಾಣುತ್ತೀಯ. ಅದಕ್ಕಾಗಿಯೇ ನಾನು ನಿನ್ನ ಎದುರಿಗೆ ಬರಬಾರದೆಂದು ಹಿಂದಕ್ಕೆ ನಡೆಯುತ್ತಿದ್ದೇನೆ. ನಾನು ಯಾರೆಂದು ನಿನಗೆ ತಿಳಿದಂತೆ ಕಾಣುತ್ತಿಲ್ಲ.

(- ಮುಂದುವರೆಯುತ್ತದೆ. )



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಎಂದರೆ ನಿಮ್ಮ ಪಾದಗಳು ನನ್ನ ಶಿರಕ್ಕೆ ಸೋಕಿದಂತಾಗುವುದರಿಂದ ನಿಮಗೆ ನನ್ನ ಮೇಲೆ ಕರುಣೆ ಖಂಡಿತ ಉಂಟಾಗಿಯೇ ಆಗುತ್ತದೆ ಎಂದು ಭಾವಿಸಿ ಯಾಚನೆ ಮಾಡುತ್ತೇನೆ. ನನ್ನ ಈ ನೋವು ನಿಮಗೆ ಅರ್ಥವಾಗುತ್ತದೆ ತಾನೇ? ನಿಮಗೆ ಇನ್ನು ನನ್ನ ಮೇಲೆ ಮರುಕವುಂಟಾಗದೇ ಇರುತ್ತದೆಯೇ? (31) ಎಲೈ ಸಾರಥಿಯೆ! ಸುಂದರವಾದ ನೊಸಲನ್ನುಳ್ಳ ನನ್ನ ನಾಯಕಿಯ ಶರೀರಕಾಂತಿಯು ಕಂದಿ ಹೋಗುತ್ತಿರುವುದು. ನಾನು ಆಕೆಯ ವಿರಹದಿಂದ ಕೃಶನಾಗಿ ಹೋಗುತ್ತಿರುವಂತೆ! ಬಿಳಿದಾದ ಮುತ್ತಿನ ಮಾಲೆಯಂತಹ ಜಲಪಾತಗಳಿಂದ ಕೂಡಿದ ವೇಂಗಡದಲ್ಲಿ ಅವಳು ಬಾಧೆಪಡುತ್ತಿದ್ದಾಳೆ. ಅವಳ ಬಳಿಗೆ ನನ್ನ ಮನೋರಥವನ್ನು ಶೀಘ್ರವಾಗಿ ಓಡಿಸು (50) ನನ್ನ ಮಗಳಿಗೆ ಸ್ತನಗಳೇ ಇನ್ನೂ ಮೂಡಿಲ್ಲ, ಮುಡಿದಟ್ಟವಾಗಿ ಬೆಳೆದಿಲ್ಲ ಅವಳಿಗಿನ್ನೂ ಸೊಂಟವೇ ದಪ್ಪನಾಗಿ ಬೆಳೆದಿಲ್ಲ, ಆದರ ಮೇಲೆ ಸೀರೆಯೇ ಇನ್ನೂ ನಿಲ್ಲುವುದಿಲ್ಲ, ಅವಳ ಮಾತಿನಲ್ಲಿ ಕೂಡಾ ಇನ್ನೂ ಸ್ಪಷ್ಟತೆ ತುಂಬಿಲ್ಲ, ಬಾಲಿಶವಾಗಿಯೇ ಇದೆ. ಯೌವ್ವನ ಸಹಜವಾದ ಲಜ್ಜಾವಕುಂಠನ ಅವಳನ್ನು ಇನ್ನೂ ಆವರಿಸಿಲ್ಲ. ಅವಳ ಕಣ್ಣುಗಳಲ್ಲಿ ಲಜ್ಜೆ ಇನ್ನೂ ಆವರಿಸಿಲ್ಲ, ಆದಿನ್ನೂ ಚಂಚಲವಾಗಿಲ್ಲ. ಹೀಗೆ ಅವಳು ಯೌವ್ವನದೆಸೆಯನ್ನು ಅಡರುವ ಮೊದಲೇ"ನನ್ನ ಸ್ವಾಮಿಯು ನೆಲಸಿರುವ ವೇಂಗಡವೇ" ಎಂದು ನಿಟ್ಟುಸಿರು ಬಿಡುತ್ತಾ ಹೇಳುವ ಈ ಮಾತಿನ ವರಸೆಯು ಅವಳಿಂದ ಹೇಗೆ ಬರುವಂತೆ ಮಾಡಿಸಿದೆ, ತಿಳಿಯುತ್ತಿಲ್ಲವಲ್ಲ - ಎಂದು ನಾಯಕಿಯ ತಾಯಿಯು ಒಂದೇ ಗೊಂದಲದಲ್ಲಿ ಸಿಲುಕಿದ್ದಾಳೆ. (60) ಅಸುರನನ್ನು ಕೊಂದು ಪಕ್ಷಿಯ ಮೇಲೆ ಕುಳಿತ ಮಾಧವ, ಗೋವಿಂದನು ಎಲ್ಲರನ್ನೂ ಸಲಹಲೆಂದೇ ವೇಂಗಡದ ಮೇಲೆ ನೆಲಸಿದ್ದು. ನಾಯಕಿಯು ವಿಹಾರ ಮಾಡುವ ಹೆಣ್ಣು ಹಂಸೆಯ ಕೆಂಪು ಮತ್ತು ಕಪ್ಪು ಬಣ್ಣದ ಸುಂದರ ನೇತ್ರಯುಗ್ಮದಂತೆ, ಮೀನಲೋಚನೆಯಂತೆ ಮತ್ತು ಮೊಲದಂತೆ ಕಣ್ಣುಗಳನ್ನುಳ್ಳವಳು, ಈಟಿಯಂತೆ ಚುಚ್ಚುವ ತೀಕ್ಷ್ಣ ದೃಷ್ಟಿಯಿಂದ ಕೂಡಿದವಳು. ಆದರೂ ಸಹ ನನ್ನ ನಾಯಕಿಯ ಸೊಬಗಿನಿಂದ ಅವನು ಕದಲದೇ ಹೆರಳಿಗೆ ವೇಂಗಡನಾಥನು ಧರಿಸಿದ್ದ ತುಳಸಿಯನ್ನಾದರೂ ಮುಡಿಸಿದರೆ ನೆಮ್ಮದಿ ತಾನಾಗಿಯೇ ಏರ್ಪಡುವುದು ಆಕೆ ಹಂಬಲಿಸುವ ವೇಂಗಡಕ್ಕಾದರೂ ಆಕೆಯನ್ನೊಮ್ಮೆ ಕರೆದೊಯ್ದರೆ ಅವಳಿಗೆ ಚೈತನ್ಯವು ತಾನಾಗಿಯೇ ಬರುವುದು. ಹಾಗೆ ಮಾಡದೆ ಆಕೆಯನ್ನು ಮತ್ತೂ ಬಳಲಿಸುತ್ತಿದ್ದಾಳೆ. ಕಠಿಣ ಚಿತ್ತಳು, ಮಗಳ ಮನಸ್ಸನ್ನು ಅರಿತು ಕೊಳ್ಳಲಾರದವಳು ಎಂತಹ ಹಿತಚಿಂತಕಳಾದಳು? ನಿಜವಾಗಿಯೂ ಕಠಿಣ ಚಿತ್ತಳೇ.(81)

ವರ್ಣನೆಯಲ್ಲಿ ಮೆಟ್ಟಲು ಮೆಟ್ಟಲಾಗಿ ನಾಯಕಿಯ ವಿರಹಾವಸ್ಥೆ ಉನ್ನತ ಮಟ್ಟವನ್ನು ಮುಟ್ಟಿದೆ. ಇದನ್ನು ಆಳ್ವಾರ್ ಹೃದಯಂಗಮವಾಗಿ ವರ್ಣಿಸಿದ್ದಾರೆ. ನಾಯಕಿಯ ಮಾತಿನಲ್ಲಿ ವ್ಯಂಗ್ಯವಿರಬಹುದು, ನಿಂದೆ ಇರಬಹುದು, ಕೋಪವಿರಬಹುದು, ಕಠಿಣತನವಿರಬಹುದು, ತಾಪವಿರಬಹುದು, ನಿರಾಶೆ ಇರಬಹುದು, ಕೆಲವೊಮ್ಮೆ ದ್ವಂದ್ವವೂ ಇರಬಹುದು. ಆದರೆ ಒಂದು ಮಾತ್ರ ಸ್ಪಷ್ಟ. ನಾಯಕಿಯು ನಾಯಕನಿಗೇ ಸರ್ವದಾ ಹಂಬಲಿಸುತ್ತಿದ್ದಾಳೆ-ಜೀವಾತ್ಮವು ಪರಮಾತ್ಮ ಪ್ರಾಪ್ತಿಗೆ ಹಾತೊರೆಯುತ್ತಿರುವಂತೆ. ಈ ಮಾರ್ಗವೇ ಪ್ರಪತ್ತಿ ಮಾರ್ಗ. ಈಕೆಯ ಸಮಸ್ಯೆಗೆ ಉತ್ತರ ದೊರೆಯಬೇಕು. ಈಕೆಯ ತಪಸ್ಯೆಗೆ ಫಲ ಪ್ರಾಪ್ತಿಯಾಗಬೇಕು. ಅದೇ ಸಾಕ್ಷಾತ್ಕಾರ, ಜೀವ ದೇವನ ಸಂಯೋಗ ಸಂಶ್ಲೇಷೆ. ಇದೊಂದು ಭಕ್ತಿಯ ಘಟ್ಟ. ನಿಂದೆಯಲ್ಲ ನಿಜವಾದ ಕೋಪವಲ್ಲ, ಇದೂ ಒಂದು ರೀತಿಯ ನಡವಳಿಕೆ, ಇದರಿಂದಲೂ ಪರಮಾತ್ಮನು ಪ್ರೀತಿಗೊಳ್ಳುತ್ತಾನೆ ಒಲಿಯುತ್ತಾನೆ. ತಿರುಪ್ಪಾವೈನಲ್ಲಿ ಆಂಡಾಳ್ ಹೇಳುವಂತೆ ಕೃಷ್ಣನ ಜೊತೆಯಲ್ಲಿ ಗೋಪಿಯರು ವಿಹಾರ ನಡೆಸುವಾಗ ಅತೀ ಆತ್ಮೀಯತೆಯ ಭರಾಟೆಯಲ್ಲಿ ಅವನಲ್ಲಿನ ಪರಮಾತ್ಮತ್ವ ವಿರಲಿ, ಅವನು ತಮಗೆ ಆಶ್ರಯನೆಂಬ ಭಾವವನ್ನೂ ಮರೆತು "ಉನ್‌ತನ್ನೈಚಿರಪೇರಳಿತ್ತನವುಂ ಶೀರಿ ಅರುಳಾದೇ ಇರೈವಾ ನೀತಾರಾಯ್‌ಪರಯೇ'' "ಜೊತೆ ಜೊತೆಯಾಗಿ ಓಡಾಡುವಾಗ ನಮ್ಮ ಮಧ್ಯೆ ನೀನೂ ಒಬ್ಬನಾಗಿದ್ದರಿಂದ ನಿನ್ನನ್ನು ಸಣ್ಣ ಪುಟ್ಟ ಹೆಸರುಗಳಿಂದ ಮರ್ಯಾದೆ ಮೀಕ್ಕಿದ ಮಾತಿನಿಂದ ಕರೆದಿರಬಹುದು. ಆದರೂ ಅದನ್ನು ಗಣನೆಗೆ ತಂದುಕೊಳ್ಳದೆ ನಮ್ಮ ಇಷ್ಟಾರ್ಥಗಳನ್ನು ನಮಗೆ ಅನುಗ್ರಹಿಸು ಎಂದು ಬೇಡಿಕೊಳ್ಳುವಂತೆ, ಇದೂ ಭಕ್ತಿಯ ಮಧುರ ಘಟ್ಟವೆಂದು ಅರಿತುಕೊಳ್ಳಬೇಕು. ಇದನ್ನು ಮಧುರಭಕ್ತಿ ಎನ್ನುತ್ತಾರೆ. ಇದೊಂದು ಶೃಂಗಾರ ಭಾವದಲ್ಲಿನ ಒಂದು ಸ್ತರ. ಈ ಆತ್ಮ ನಿವೇದನವೆಂಬುದು ನವವಿಧ ಭಕ್ತಿಯ ಒಂದು ಪ್ರಕಾರ. ಇದರ ಮೂಲ ಕವೇ ನಮ್ಮಾಳ್ವಾರ್ ತಿರುವಿರುತ್ತಂನಲ್ಲಿ ವೇಂಗಡದೊಡೆಯನಿಗೆ ಮಂಗಳಾಶಾಸನ ಸಲ್ಲಿಸುತ್ತಾರೆ. ನಮ್ಮಾಳ್ವಾರ್ ಈ ಪಾಶುರಗಳಲ್ಲೆಲ್ಲಾ ತಿರುವೇಂಗಡಂ ಎಂಬ ಒಂದೇ ಪದವನ್ನು ಬಳಸಿರುವುದು ಗಮನಾರ್ಹವಾದ ವಿಚಾರವೇ ಸರಿ!

ತಿರುಪತಿಯ ಪ್ರಯಾಣ ಈಗ್ಯೆ 45-50 ವರ್ಷಗಳವರೆಗೂ ಪ್ರಯಾಸಕರವಾಗಿದ್ದಿತು. ಯಾತ್ರಿಕರು ಬೆಟ್ಟದ ಮೇಲಕ್ಕೆ ಮೆಟ್ಟಲು ಮಾರ್ಗವಾಗಿ ಕಾಡುಹಾದಿಯ ಮಧ್ಯೆ ಸಾಗಿ ಸ್ವಾಮಿಯ ದರ್ಶನ ಪಡೆದು ತಮ್ಮ ಕಷ್ಟಶ್ರಮಗಳನ್ನೆಲ್ಲಾ ಮರೆತು ಜೀವನ ಸಾರ್ಥಕವಾಯಿತೆಂಬ ತೃಪ್ತಿಯಿಂದ ವಾಪಸ್ಸು ಬರುತ್ತಿದ್ದರು. ಅದೊಂದು ಅನಿರ್ವಚನೀಯವಾದ ಆನಂದ, ಅನುಭವ, ತಪಸ್ಸು. ಈ ತಿರುವಿರುತ್ತಂನಲ್ಲಿರುವ ಎಂಟನೇ ಪಾಶುರದಲ್ಲಿ ಈ ವಿಚಾರ ಸೂಚ್ಯವಾಗಿ ಕಾಣಿಸುತ್ತದೆ. ಶ್ರಮಪಟ್ಟ ಮೇಲೆ ದೊರೆಯುವ ದೇವರ ದರ್ಶನಕ್ಕೆ ಎಂದಿಗೂ ಪ್ರಾಶಸ್ತ್ಯವಿದ್ದೇ ಇರುತ್ತದೆ!

ಈ ತಿರುವಿರುತ್ತಂ ಪಾಶುರಗಳಿಗೆ ಆಳ್ವಾರುಲ ಮಂಗಳಾಶಾಸನ ಪಾಶುರಮುಲುನಲ್ಲಿ ಕಂಡು ಬರುವ ಸ್ವಾರಸ್ಯಾಂಶಗಳು ಈ ತೆರನಾದವು.

ಭಗವದ್ವಿಶ್ಲೇಷೆಯಿಂದ ಬಾಧೆಪಡುತ್ತಿರುವ ಆಳ್ವಾರನ್ನು (ನಾಯಕಿಯನ್ನು)ಬಿಟ್ಟು ಹೋಗಲು ಮನಸ್ಸಿಲ್ಲದವರಾದ ಅವರ ಆಪ್ತರಾದ ಭಾಗವತೋತ್ತಮರು ತಿರುಮಲೆ ಮುಂತಾದ ಯಾತ್ರಾ ಸ್ಥಳಗಳಿಗೆ ಭಗವದ್ದರ್ಶನ ಲಾಭಕ್ಕೋಸುಗವಾಗಿ ತೆರಳ ಬೇಕೆಂಬ ಆಸೆ ಉತ್ಕಟವಾಗಲು, ಆಳ್ವಾರ್‌ರವರ ಅನುಮತಿ ತೆಗೆದುಕೊಳ್ಳಲು ಅವರ ಸಮೀಪವನ್ನು ಸೇರಿ, ಹೇಗೆ ತಮ್ಮ ಭಾವನೆಯನ್ನು ಅವರೊಡನೆ ನೇರವಾಗಿ ಪ್ರಸ್ತಾಪ ಮಾಡ ಬೇಕೆಂಬುದನ್ನು ತಿಳಿಯದವರಾಗಿ, ಹಾಗೆ ಪ್ರಸ್ತಾಪಿಸಿದರೆ ಅವರ ಖೇದವು ಮತ್ತೂ ಹೆಚ್ಚಬಹುದೆಂದು ಹೆದರಿ, ಕಡೆಗೂ ಈ ವಿಷಯವನ್ನು ಸುತ್ತಿ ಬಳಸಿ ಹೇಳುತ್ತಾರೆ. ಆಳ್ವಾರರೋ ಅತೀ ಚತುರರು. ಅವರು ಬಂದಾಗಲೇ ಅವರ ಇಂಗಿತವನ್ನು ಅರಿತು, ಅವರ ಮಾತಿನಿಂದ ತಮ್ಮ ಆಲೋಚನೆ ಸರಿಯೆ ಎಂಬುದನ್ನು ಕಂಡುಕೊಂಡು, ಆಗ ಭಗವದ್ವಿಶ್ಲೇಷೆ ಮಾತ್ರವಿದ್ದಿತು. ಈಗ ಭಾಗವತೋತ್ತಮರ ವಿಶ್ಲೇಷತೆಯೂ ಆಗುತ್ತಿರುವುದನ್ನು ಕಂಡು ಕಂಗೆಟ್ಟವರಾಗಿ ಅವರೊಡನೆ ನಿಷ್ಠೂರವಾಗಿಯೇ ನುಡಿಯುತ್ತಾರೆ. ಆಹಾ ಎಂದೂ ಇಲ್ಲದ ನೈಚ್ಯಾನು ಸಂಧಾನ ಮಾಡುತ್ತಾ, ಅತೀ ವಿನಯದೊಂದಿಗೆ ಬಂದಿರುವಿರಲ್ಲ. ಇದನ್ನು ಪರಿಶೀಲಿಸುವಾಗ ನನಗೊಂದು ಅರ್ಥವಾಗದು.

ನೀವೆಲ್ಲರೂ ನನ್ನನ್ನು ಒಬ್ಬಂಟಿಗನನ್ನಾಗಿ ಬಿಟ್ಟು ನನ್ನ ವಿರಹಾಗ್ನಿಯು (ಪರಮಾತ್ಮನನ್ನು ಕುರಿತ) ಮತ್ತೂ ಪ್ರಜ್ವಲಿಸುವಂತೆ ಮಾಡಿ ಹೋಗಲು ಬಂದಿರಲ್ಲವೆ? ನಿಮ್ಮ ಈ ಪ್ರಯತ್ನವೆಲ್ಲವೂ, ಛತ್ರಿಯಂತೆ ಗೋವರ್ಧನ ಪರ್ವತವನ್ನು ಮೇಲೆತ್ತಿ ಗೋಪಾಲಕರನ್ನು ಸಲಹಿದ ಶ್ರೀಕೃಷ್ಣನು ನಿತ್ಯ ಸೂರಿಗಳಿಂದ ಸಂಸೇವಿತನಾಗಿ ದೇದೀಪ್ಯಮಾನನಾಗಿರುವ ತಿರುವೇಂಗಡದೊಡೆಯನೆಡೆಗೆ ಬರಲು ನನ್ನ ಆಸೆಯನ್ನು ಮತ್ತೂ ಪ್ರಬಲಿಸುವಂತೆ ಮಾಡುತ್ತಿರುವುದಲ್ಲಾ? ನಾನೇನು ಮಾಡಲಿ? ನೀವು ಹೋಗಿ ಬರುವ ವೇಂಗಡವು ಎಷ್ಟು ಕಠಿಣವೋ ಅದರಂತೆಯೇ ನಿಮ್ಮ ಮನಸ್ಸೂ ನನ್ನನ್ನು ಕುರಿತು ಅಷ್ಟೇ ಕಠಿಣವಾಗಿಬಿಟ್ಟಿತಲ್ಲಾ ಎಂದು ಪ್ರಲಾಪಿಸುವರಂತೆ !

- ಮುಂದುವರೆಯುತ್ತದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ



**ಕಳೆದ ಸಂಚಿಕೆಯಿಂದ**

(ಶ್ರೀ ಮಣವಾಳ ಮಹಾಮುನಿಗಳ (ವರಪರ ಮುನಿಗಳ) ಶಿಷ್ಯರಾದ ಅಷ್ಟದಿಗ್ಗಜ ಪಂಡಿತರು)

ವಾನಾದ್ರಿಯೋಗಿವರ ವೇಂಕಟಯೋಗಿವರ್ಯ
ಶ್ರೀಭಟ್ಟನಾಥಮುನಿ ವಾದಿ ಭಯಂಕರ್ಯಾಃ
ರಾಮಾನುಜಾಚಾರ್ಯ ವರದಾರ್ಯ ನತಾರ್ತಿಹರಿ
ಶ್ರೀದೇವರಾಜ ಗುರುವ್ರೋಷ್ಟದಿಶಾ ಗಜಾಸ್ತೋ

(ವಾನಾದ್ರಿಯೋಗಿವರರು (ವಾನಾಮಾಮಲೈ ಜಿಯ್ಯರು) ವೇಂಕಟಯೋಗಿವರ್ಯರು (ತಿರುವೇಂಗಡ ರಾಮಾನುಜಜಿಯ್ಯರು), ಶ್ರೀಭಟ್ಟನಾಥ ಮುನಿಗಳು (ಪರವಸ್ತು ಭಟ್ಟರ್ ಪಿರಾನ್‌ಜಿಯ್ಯರು)ವಾದಿ ಭಯಂಕ ರಾರ‍್ಯರು (ಪ್ರತಿವಾದಿ ಭಯಂಕರ ಅಣ್ಣಾ) ರಾಮಾನುಜಾ ಚಾರ್ಯರು (ಅಪ್ಪಿಳ್ಳೈ) ವರದಾರ್ಯರು (ಕೋಯಿಲ್ ಕಂದಾಡೈ ಅಣ್ಣನ್, ಪ್ರಣತಾರ್ತಿಹಾರರು (ಕಿಡಾಂಬಿ ಅಪ್ಪುಳ್ಳಾನ್) ಶ್ರೀದೇವರಾಜ ಗುರುಗಳು ಎರುಂಬಿ ಯಪ್ಪಾ)

ಮಾರ್ಕಂಡೇಯ ಪುರಾಣದ ಶ್ರೀವೇಂಕಟಾಚಲ ಮಹಾತ್ಮ ಘಟ್ಟದಲ್ಲಿನ,

ವೈಕುಂಠಲೋಕಾ ದಗ್ಗರುಡೇನ್
ವಿಷ್ಣೋ ಕ್ರೀಡಾಚಲೋ ವೇಂಕಟನಾಮಧೇಯಃ
ಆನೀಯ ಸ ಸ್ವರ್ಣಮುಖಿಸಮೀಪೆ
ಸಂಸ್ಥಾಪಿತೋ ವಿಷ್ಣುನಿವಾಸಹೇತೋಃ

(ಶ್ರೀ ಮನ್ನಾರಾಯಣನು ವೆಂಕಟವೆಂಬ ಹೆಸರುಳ್ಳ ಕ್ರೀಡಾಚಲವು ಗರುಡನಿಂದ ವಿಷ್ಣುಲೋಕದಿಂದ ತೆಗೆದು ಕೊಂಡು ಬಂದ ವಿಷ್ಣುಮೂರ್ತಿ ನಿವಾಸಿಸಲೆಂದೇ ಸ್ವರ್ಣಮುಖಿ ಸಮೀಪದಲ್ಲಿ ಸ್ಥಾಪಿಸಲ್ಪಟ್ಟಿದೆ ಎಂದು.)

**ವೈಕುಂಠಾ ದಾಗತತ್ವಾಚ್ಚ ವೈಕುಂಠಾದ್ರಿ ರಿತಿ ಸ್ಮೃತ್ಯ**

(ವೈಕುಂಠದಿಂದ ಬಂದ ಕಾರಣದಿಂದಾಗಳೇ ವೈಕುಂಠಾದ್ರಿಯೆಂದು ಹೆಸರುವಾಸಿಯಾಗಿ)

ಶುಕಾದ್ಯಾ ಮುನಯ್ಶ್ಚ ಕೆಚಿತ್ ಭೃಗ್ವಾದ್ಯಾಶ್ಚ ತಪೋಧನಾಃ
ಪ್ರಹ್ಲಾದಪ್ರಮುಖ್ಶಾ ಪುಣ್ಯಾ ಅಂಬರೀಷಾದಯೋ ನೃಷಾಃ
ವಿಷ್ಣೋರೇವಾಪರಂ ದೇಹಂ ಷನ್ವಾನಾಸ್ತಂ ನಗೋತ್ತಮಮ್
ಪದ್ಭ್ಯಾಮಾಕ್ರಿಮಿತುಂ ಭೀತ್ಣಾ ಪರ್ಯಂತೇಷ್ವೇವ ವರ್ತಿನಃ

ತನ್ನಿರ್ಗತ ನದೀಷ್ವೇವಃ ಕುರ್ವಾಣ್ಣಾ ಸ್ನಾನತರ್ಪಣೇ
ತಪಃ ಕುರ್ವಂತಿ ವಾಂಛಂತ್ಯ ಸಾಕ್ಷಾತ್ಕರ್ತುಂ ಜನಾರ್ದನಂ

(ಶುಕರು ಮೊದಲಾದ ಮುನಿಗಳು,ಭೃಗುವೇ ಮೊದಲಾದ ತಪೋಧನರು, ಪ್ರಹ್ಲಾದ ಮೊದಲಾದ ಪುಣ್ಯವಂತರು (ಭಕ್ತರು) ಅಂಬ ರೀಷರಂತಹ ಪ್ರಭೃತರಾದ ನರರಾಜರುಗಳು ಆ ಪರ್ವತ ಶ್ರೇಷ್ಠವನ್ನು ಶ್ರೀಮನ್ನಾರಾಯಣನ ಮೂರ್ತ್ಯಾಂತರವೆಂದೇ ತಿಳಿದವರಾಗಿ, ಪರ್ವತ ದಲ್ಲೇ ವಾಸಿಸುವಂಥವರಾಗಿ ಆ ಸಮಾನದಿಂದ ಪ್ರವಹಿಸುವ ನದಿ ಗಳಲ್ಲೇ ಸ್ನಾನ-ತರ್ಪಣಗಳನ್ನು ಮಾಡುವವರಾಗಿ ಶ್ರೀ ಹರಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕಾಗಿ ಪಣತೊಟ್ಟವರಾಗಿ ತಪೋಧನ ರಾಗಿದ್ದಾರೆ.)

ಬ್ರಹ್ಮ-ಬ್ರಹ್ಮಾಂಡ-ವಾಮನಾದಿ ಪುರಾಣಗಳಲ್ಲಿ ತಿರುಮಲೆ ಬೆಟ್ಟವನ್ನು ಪ್ರಾಕೃತವಾದ ಶರೀರದೊಡನೆ ತುಳಿದೆವೆಂದು ಶುಕಾದಿ ಗಳು ಪರ್ವತ ಪರಿಸರದಲ್ಲಿದ್ದು ಕೊಂಡೇ ಭಗವದನುಭವವನ್ನು ಪಡೆದುಕೊಳ್ಳಲು ಭಗವದಿಚ್ಛಯ ಕಟಾಕ್ಷದಿಂದ ಸಾಕ್ಷಾತ್ಕಾರಕೃತಿ ಭಗವದ್ರೂಪ ಗುಣ ಸ್ವರೂಪ ವಿಹರಿಭೂತರೂಪ ವಿಶೇಷ ಹೊಂದಿರ ತಕ್ಕಂಥದನ್ನು ಆಳ್ವಾರರಿಂದ ತಿಳಿದುಕೊಂಡು ಸ್ವಸ್ಥಾನದಲ್ಲಿದ್ದು ಕೊಂಡು ಮಂಗಳಾಶಾಸನಗಳನ್ನು ಮಾಡುತ್ತಾ ಕೃತಾರ್ಥರಾದ ರೀತಿ ಯಲ್ಲಿ ಶ್ರೀಭಾಷ್ಯಕಾರರು ತಮ್ಮ ದಿವ್ಯ ಹೃದಯದಲ್ಲಿ ಭಗವಂತನನ್ನು ಚಿಂತಿಸಿ ಶ್ರೀರಂಗಾದಿ ದಿವ್ಯ ಪ್ರದೇಶಗಳಲ್ಲಿ ಆಳ್ವಾರುಗಳ ಶ್ರೀ ಪ್ರತಿಷ್ಠೆಯನ್ನು ಮಾಡಿಸಿ ಆಳ್ವಾರುಗಳ ದಿವ್ಯ ಹೃದಯ ವನ್ನು ಆಹ್ವಾನಿಸಿದಂತೆಯೇ ತಿರುಮಲೆಯಲ್ಲಿ ಆಳ್ವಾರು ಗಳನ್ನು ಪ್ರತಿಷ್ಠೆ ಮಾಡುವುದಕ್ಕಾಗಿಯೇ ತಾವೂ ಸಹ ಆಳ್ವಾರರಂತೆಯೇ ಶ್ರೀ ವೇಂಕಟಾಚಲವನ್ನು ಆರೋಹಣ ಮಾಡಲು ಒಂದು ವಿಶೇಷ ದಿನದಂದು ಒಂದು ವಿಶೇಷ ಮುಹೂರ್ತದಲ್ಲಿ ಒಂದು ಮುಖ್ಯಕಾರಣದಿಂದ ಮೂರು ದಿನಗಳು ಶುಷ್ಕೋಪವಾಸದಿಂದ ಇದ್ದು, ಶರೀರ ಶೋಧ ನವನ್ನು ಮಾಡಿಕೊಂಡು ವೇಂಕಟಾಚಲವನ್ನು ಆರೋ ಹಣ ಮಾಡಿ ಅಧ್ಯಯನೋತ್ಸವವದಂದು ಶ್ರೀ ಮಂಟಪ ದಲ್ಲಿ ಉಳಿದ ಆಳ್ವಾರುಗಳು ಆಚಾರ್ಯರಿಗೆ ನಮ್ಮಾಳ್ವಾರು ಗಳಿಗೆ ಆಚಾರ್ಯರಾದ ನೈನ್ ಮೊದಲಿಯಾರ್ ಎಂಬ ವಿಷ್ವಕ್ಸೇನರಿಗೆ ಅನಂತಾಚಾರ್ಯರ ಅರ್ಚನಾ ರೂಪ ಯಾದ ಮೂರ್ತಿಗೆ ವಿಜಯ ಮಾಡಿದವರಾದ ಶ್ರೀವೈಷ್ಣ ವದರ್ಶನಾಭಿಮಾನಿಯಾದ ಶ್ರೀಭಗವದ್ರಾಮಾನು ಜರನ್ನು ಕೂಡಾ ಸ್ವಾಮಿಯ ಸನ್ನಿಧಿಯಲ್ಲೇ ವಿಜಯ ಮಾಡಿಸಿ ಆಳ್ವಾರುಗಳ ರಚಿಸಿದ ಶ್ರೀ ಸೂಕ್ತ ಮೊದಲಾದ ದಿವ್ಯ ಪ್ರಬಂಧಗಳನ್ನು ಸ್ವಾಮಿಗೆ ಅರ್ಪಿಸಿ, ಆಮೋದಿ ಸುವಂತೆ ಶ್ರೀಮಣವಾಳ ಮಹಾಮುನಿಗಳು ಕಟ್ಟಳೆಯನ್ನು ವಿಧಿಸಿದ್ದಾರೆಂದು ಹಿರಿಯರು ವ್ಯಾಖ್ಯಾನ ಮಾಡಿದರು.

ಶ್ರೀ ಗೋವಿಂದರಾಜಸ್ವಾಮಿ ಹಾಗೂ ಶ್ರೀ ವೆಂಕ ಟೇಶ್ವರರ ಛಾಯಾನುವರ್ತನೆ (ನೆರಳಿಸುತಿರುವ) ಮಾಡುತ್ತಿರುವಂತೆಯೇ, ತಮ್ಮ ಸನ್ನಿಧಿಗೆ ಶ್ರೀಭಗವದ್ರಾ ಮಾನುಜ ನಿಯಮಗಳನ್ನೆಲ್ಲಾ ಹೇಳಲು ಆಳ್ವಾರರು ವಿಜ ಯವನ್ನು ಮಾಡಿ ಶ್ರೀಮುಖ ಪಟ್ಟರ್ವನ್ನೆರೆದು ಮಾತ್ರವೇ ಕಳುಹಿಸಲಿಲ್ಲ. ಉಳಿದ ಶ್ರೀರಾಮಾನುಜರ ಮಾರ್ಗ ದರ್ಶನದಲ್ಲಿರುವಂತೆ ಎಲ್ಲವೂ ಜರುಗಿಸ ಬೇಕೆಂದು ಹಿರಿ ಯರು ನೇಮವನ್ನು ಹಾಕಿದ್ದಾರೆ.

(ಮುಂದುವರೆಯುತ್ತದೆ)

**ಅಕ್ಟೋಬರ್ ತಿಂಗಳ ರಸಪ್ರಶ್ನೆ ಉತ್ತರಗಳು**

01. ಶ್ರಾವಣ
02. ಒಂಭತ್ತನೆಯದು
03. 1901 ರಲ್ಲಿ ಸ್ಥಳ : ಸೊಂಡೂರು
04. ಗೌತಮ ಮಹರ್ಷಿ
05. ನವನೀತ ಕೃಷ್ಣನ ಮೂರ್ತಿ
06. ದೀಪಪ್ರಜ್ವಲನ, ದೀಪದಾನ
07. ಕುಮಾರಧಾರ
08. ಕಾರ್ತಿಕ
09. ವಜ್ರದೇಹನು
10. ಶ್ರೇಷ್ಠವಾದದ್ದು
11. ಆಳ್ವಾರ್ ತೀರ್ಥವೆಂದು
12. ತಮಸಾ
13. ಲವಕುಶ
14. ರಾಹು ಹಾಗೂ ಕೇತು
15. ಭಕ್ತಿ



# ತಿರುವಾಲಿ - ತಿರುನಗರಿ

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

ತಿರುವಾಲಿ, ತಿರುನಗರಿ ಎಂಬ ಎರಡು ಬೇರೆ ಬೇರೆ ಕ್ಷೇತ್ರಗಳೇ ಆದರೂ, ಈ ಎರಡು ದೇವಾಲಯಗಳನ್ನು ಸೇರಿಸಿ ಒಂದು ದಿವ್ಯ ದೇಶವೆಂದೇ ಪರಿಗಣಿಸುತ್ತಾರೆ.

## ತಿರುವಾಲಿ ಕ್ಷೇತ್ರ

ಇದರಲ್ಲಿ ತಿರುವಾಲಿ ಕ್ಷೇತ್ರವು ಶೀರ್ಕಾಳಿ 10 ಕಿ.ಮೀ. ದೂರದಲ್ಲಿ ರಾಜಗೋಪುರ ಮಂಟಪಗಳೊಂದಿಗೆ, ಶೋಭಾಯಮಾನವಾದ ಪ್ರಕೃತಿಯೊಂದಿಗೆ ರಾರಾಜಿಸುತ್ತಿದೆ. ಈ ದಿವ್ಯದೇಶವೇ ತಿರುಮಂಗೈ ಆಳ್ವಾರರನ್ನು ಶ್ರೀವೈಷ್ಣವ ಸಂಪ್ರದಾಯಕ್ಕೆ ಪರಿಚಯಿಸಿ ಪರಮೋಪ ಕಾರವನ್ನು ಮಾಡಿದ ಆಳ್ವಾರರ ಧರ್ಮಪತ್ನಿಯಾದ ಕುಮುದವಲ್ಲಿ ನಾಚ್ಚಿಯಾರ್ ಬೆಳೆದಂತಹಾ ಪ್ರದೇಶವೆಂದು ಹೇಳಲ್ಪಡುತ್ತಿದೆ. ಈ ತಿರುವಾಲಿ ದಿವ್ಯದೇಶವು ನರಸಿಂಹ ದೇವಾಲಯವೆಂದು ತಿರುವಾಲಿಕ್ಕೊಯಿಲ್ ಎಂದು ಪೂರ್ಣಪುರೀಸ್ಥಳವೆಂದು ಇನ್ನೂ ಅನೇಕ ಹೆಸರುಗಳೊಂದಿಗೆ ಕರೆಯಲ್ಪಡುತ್ತಿದೆ. ಈ ದಿವ್ಯದೇಶಗಳಲ್ಲಿರುವ ಮೂಲ ಮೂರ್ತಿಯು ಕುಳಿತಿರುವ ಭಂಗಿಯಲ್ಲಿ ಪೂರ್ವಾಭಿಮುಖವಾಗಿ ಲಕ್ಷ್ಮೀನರಸಿಂಹ ಸ್ವಾಮಿಯಾಗಿ ಅನುಗ್ರಹಿಸುತ್ತಿದ್ದಾರೆ. ಹಾಗೇ ಉತ್ಸವ ಮೂರ್ತಿ ತಿರುವಾಲಿ ನಗರಾಳನ್ ಎಂಬ ಹೆಸರಿನಿಂದ ದರ್ಶನವನ್ನು ನೀಡುತ್ತಿದ್ದಾನೆ. ತಿರುಮಂಗೈ ಆಳ್ವಾರರು ವಯಲಾಳಿ ಮಣವಾಳನ್ ಎಂಬ ಹೆಸರಿನಿಂದ ದರ್ಶನವನ್ನು ನೀಡುತ್ತಿದ್ದಾನೆ. ತಿರುಮಂಗೈ ಆಳ್ವಾರರು ವಯಲಾಳಿ ಮಣವಾಳನ್ ಎಂಬ ಈ ಸ್ವಾಮಿಯನ್ನು ಮಂಗಳಾಶಾಸನ ಮಾಡಿದಂತೆ ಇದ್ದರೂ ಆ ಸ್ವಾಮಿಯು ತಿರುನಗರಿಯಲ್ಲಿ ನೆಲೆಸಿದ್ದಾನೆ. ಈ ಕ್ಷೇತ್ರದಲ್ಲಿ ಅಮ್ಮನವರು ಅಮೃತಘಟವಲ್ಲಿಯಾಗಿ ದರ್ಶನವನ್ನು ನೀಡುತ್ತಿದ್ದಾಳೆ, ಈ ತಿರುವಾಲಿ ಕ್ಷೇತ್ರವು ಕರ್ದಮ ಪ್ರಜಾಪತಿ, ತಿರುಮಂಗೈ ಆಳ್ವಾರರು, ಕುಲಶೇಖರ ಆಳ್ವಾರರ ಮೂಲಕ ಮಂಗಳಾಶಾಸನ ರಚಿಸಲ್ಪಟ್ಟಿದೆ. ತಿರುಮಂಗೈ ಆಳ್ವಾರರು ಈ ತಿರುವಾಲಿಯನ್ನು ಪರಿಪಾಲಿಸಿದ್ದರಿಂದ ತಿರುವಾಲಿ ನಾಡನ್ ಎಂಬ ಹೆಸರು ಬಂದಿದೆ. ತಿರುನಗರಿಯ ಸಮೀಪದಲ್ಲಿ ಕ್ಕುರೈಯಲೂರ್ ಎಂಬ ಕ್ಷೇತ್ರದಲ್ಲೇ ತಿರುಮಂಗೈ ಆಳ್ವಾರರು ಅವತರಿಸಿದ್ದಾರೆ.

## ತಿರುನಗರಿ

ತಿರುವಾಲಿ ಕ್ಷೇತ್ರಾಧಿಪನಾದ ವಯಲಾಳಿಮಣವಾಳನ್ ವೇದರಾಜನ್ ಎಂಬ ತಿರುನಾಮದಿಂದ ಪಶ್ಚಿಮ ದಿಕ್ಕನ್ನು ನೋಡುತ್ತಿರುವಂತೆ ಕುಳಿತಿರುವ ಭಂಗಿಯಲ್ಲಿ ಈ ತಿರುನಗರಿಯಲ್ಲಿ ನೆಲೆಸಿದ್ದಾನೆ, ಉತ್ಸವ ಮೂರ್ತಿ, ಕಲ್ಯಾಣ ರಂಗನಾಥ, ಅಮ್ಮನವರು ಅಮೃತವಲ್ಲಿ, ತಿರುವಾಲಿಯಲ್ಲಿ ಇರುವಂತೆಯೇ ತಿರುನಗರಿಯಲ್ಲೂ ಅಷ್ಟಾಕ್ಷರೀವಿಮಾನ, ಲಕ್ಷಣಿ ಪುಷ್ಕರಿಣಿ, ಆಹ್ಲಾದ ಪುಷ್ಕರಿಣಿ ಇರುವುದರಿಂದ ತಿರುವಾಲಿ, ತಿರುನಗರಿ ಎರಡನ್ನೂ ಸೇರಿಸಿ ಒಂದೇ ದಿವ್ಯ ದೇಶವೆಂದು ಪರಿಗಣಿಸುತ್ತಾರೆ. ಹಾಗೇ ಈ ತಿರುನಗರಿ ಕ್ಷೇತ್ರವು ಬಿಲ್ವಾರಣ್ಯ, ಲಕ್ಷ್ಮೀಪುರಂ, ಆಲಿಂಗನಪುರಂ, ಶ್ರೀನಗರಿ, ಶ್ರೀಪುರಿ ಎಂಬ ಹೆಸರಗಳಿಂದ ಕರೆಯಲ್ಪಡುತ್ತಿದೆ.

## ತಿರುವಾಲಿ

| | |
|---|---|
| ಭಗವಂತ | : ವಯಲಾಳಿಮಣವಾಳನ್, ಲಕ್ಷ್ಮೀನರಸಿಂಹಸ್ವಾಮಿ |
| ಅಮ್ಮನವರು | : ಅಮೃತಘಟವಲ್ಲಿ |
| ತೀರ್ಥ | : ಲಕ್ಷಣಿ ಪುಷ್ಕರಿಣಿ , ಆಹ್ಲಾದ ಪುಷ್ಕರಿಣಿ |
| ವಿಮಾನ | : ಅಷ್ಟಾಕ್ಷರೀ ವಿಮಾನ |
| ಪ್ರತ್ಯಕ್ಷ | : ಕರ್ದಮ ಪ್ರಜಾಪತಿ, ತಿರುಮಂಗೈ ಆಳ್ವಾರ್ |
| ಮಂಗಳಾಶಾಸನ | : ತಿರುಮಂಗೈಆಳ್ವಾರ್, ಕುಲಶೇಖರ ಆಳ್ವಾರ್ |
| ಆಗಮ ಶಾಸ್ತ್ರ | : ವೈಖಾನಸ ಆಗಮ ಶಾಸ್ತ್ರ |



## ತಿರುನಗರಿ

| | |
|---|---|
| **ಭಗವಂತ :** | **ವೇದರಾಜನ್ (ವಯಲಾಳಿ ಮಣವಾಳನ್)** |
| **ಉತ್ಸವ ಮೂರ್ತಿ :** | **ಕಲ್ಯಾಣರಂಗನಾಥ** |
| **ಅಮ್ಮನವರು :** | **ಅಮೃತವಲ್ಲಿ ತಾಯಾರ್** |
| **ವಿಮಾನ :** | **ಅಷ್ಟಾಕ್ಷರೀ ವಿಮಾನ** |
| **ತೀರ್ಥ :** | **ಲಕ್ಷಣಿ ಪುಷ್ಕರಿಣಿ, ಆಹ್ಲಾದ ಪುಷ್ಕರಿಣಿ** |
| **ಪ್ರತ್ಯಕ್ಷ:** | **ತಿರುಮಂಗೈ ಆಳ್ವಾರ್** |
| **ಮಂಗಳಾಶಾಸನ :** | **ಕುಲಶೇಖರಾಳ್ವಾರ್, ತಿರುಮಂಗೈ ಆಳ್ವಾರ್** |
| **ಆಗಮಶಾಸ್ತ್ರ:** | **ವೈಖಾನಸ ಆಗಮ ಶಾಸ್ತ್ರ** |



**ಸ್ಥಳ ಪುರಾಣ :**

ಕರ್ದಮ ಪ್ರಜಾಪತಿಯು ಕಲಿಯುಗದಲ್ಲಿ ತಿರುಕ್ಕುರೈಯಲೂರ್ ಎಂಬ ದಿವ್ಯಸ್ಥಳದಲ್ಲಿ ನೀಲನೆಂಬ ಹೆಸರಿನಿಂದ ಜನಿಸಿ 86 ದಿವ್ಯದೇಶಗಳಿಗೆ ಮಂಗಳಾಶಾಸನವನ್ನು ರಚಿಸಿ ತಿರುಮಂಗೈ ಆಳ್ವಾರರು ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದ ಮಹಾನುಭಾವರು.

ಈ ತಿರುವಾಲಿಯಲ್ಲಿ ನೆಲೆಸಿರುವಂತಹಾ ಈ ಲಕ್ಷ್ಮೀ ನರಸಿಂಹ ಸ್ವಾಮಿಯೇ ಆ ಆಳ್ವಾರರನ್ನು ಇಷ್ಟು ದಿವ್ಯದೇಶಗಳಿಗೆ ಮಂಗಳಾಶಾಸನ ಮಾಡುವಂತೆ ಅನುಗ್ರಹಿಸಿದ್ದಾನೆ.

ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ನಂತರ ಕ್ರೋಧದಿಂದ ತುಂಬಿದ್ದ ಸ್ವಾಮಿಯು ಈ ತಿರುವಾಲಿಯಲ್ಲಿ ಉಗ್ರರೂಪನಾಗಿ ನೆಲೆಸಿರುವಾಗ ದೇವತೆಗಳೆಲ್ಲರು ಮಹಾಲಕ್ಷ್ಮಿಯ ಬಳಿಗೆ ಹೋಗಿ ಶ್ರೀನರಸಿಂಹ ಸ್ವಾಮಿಯ ಕ್ರೋಧವನ್ನು ಶಾಂತಗೊಳಿಸಬೇಕೆಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯ ಮೇರೆಗೆ ಆಕೆ ಜಗನ್ಮಂಗಳಕ್ಕಾಗಿ ದೇವದೇವನನ್ನು ಕೋಪವನ್ನು ಕಡಿಮೆಮಾಡಿಕೊಳ್ಳಬೇಕೆಂದು ಪರಿಪರಿ ವಿಧದಲ್ಲಿ ಬೇಡಿಕೊಂಡಾಗ ಭಗವಂತನು, ಅಮ್ಮನವರ ಪ್ರಾರ್ಥನೆಯನ್ನು ಆಲಿಸಿದ, ಕೇವಲ ಅನುಗ್ರಹ ಮಾಡುವುದೇ ಅಲ್ಲದೇ ಅಮ್ಮನವರನ್ನು ತನ್ನ ದಕ್ಷಿಣ ಭಾಗದ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಲಿಂಗನ ಮಾಡಿಕೊಂಡ. ಭಗವಂತನು ಅಮ್ಮನವರನ್ನು ಆಲಿಂಗನ ಮಾಡಿಕೊಂಡ ಪ್ರದೇಶವಾದ್ದರಿಂದ ಈ ದಿವ್ಯದೇಶವನ್ನು ತಿರು-ಆಲಿ ಎಂದು ಕರೆಯುತ್ತಾರೆ. ಇಲ್ಲಿ ಸ್ವಾಮಿ ಲಕ್ಷ್ಮೀ ದೇವಿಯನ್ನು ಆಲಿಂಗನ ಮಾಡಿಕೊಂಡಿರುವ ಭಂಗಿಯಲ್ಲಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ.

ಈ ದಿವ್ಯದೇಶವು ತಿರುಮಂಗೈ ಆಳ್ವಾರರ ಮಹಿಮೆಯನ್ನು ಚೆನ್ನಾಗಿ ತಿಳಿಸುತ್ತದೆ. ತಿರುಮಂಗೈ ಆಳ್ವಾರರು ನೀಲನಾಗಿದ್ದ ಸಂದರ್ಭದಲ್ಲಿ ಸಾವಿರಾರು ಶ್ರೀವೈಷ್ಣವರಿಗೆ ಪ್ರತಿದಿನವೂ ಭಾಗವತ ತದಿಯಾರಾಧನೆಯನ್ನು (ಭೋಜನ) ಮಾಡುವಂತೆ ಕುಮುದವಲ್ಲಿ ನಾಚ್ಚಿಯಾರ್ ಷರತ್ತನ್ನು ವಿಧಿಸಿದಳು. ಆಳ್ವಾರರ ಹಣವೆಲ್ಲಾ ಇದಕ್ಕೇ ವಿನಿಯೋಗಿಸಲ್ಪಟ್ಟು ಕಪ್ಪವನ್ನು ಕಟ್ಟುವುದಕ್ಕೂ ಹಣವಿಲ್ಲದ ಪರಿಸ್ಥಿತಿಯಲ್ಲಿ ಅರಣ್ಯದಲ್ಲಿ ಯಾತ್ರಿಕರನ್ನು ಅಡ್ಡ ಹಾಕಿ ಅವರಿಂದ ಹಣವನ್ನು ದೋಚಿಕೊಂಡು ಅದರ ಮೂಲಕ ಭಾಗವತತದಿಯಾರಾಧನೆಯನ್ನು ಮಾಡುತ್ತಿದ್ದರು. ನೀಲನನ್ನು ಅನುಗ್ರಹಿಸಬೇಕೆಂದು ಸಂಕಲ್ಪಸಿದ ಶ್ರೀಯಃ ಪತಿಯು ಅಲಿ ನಗರದಲ್ಲಿ ವಯಲಾಲಿ ಮಣವಾಳನ್ ಆಗಿ ಅವತರಿಸಿ ಅಮ್ಮನವರನ್ನು ಪೂರ್ಣ ಮಹರ್ಷಿಯ ಮಗಳಾಗಿ ಅವತರಿಸುವಂತೆ ಮಾಡಿ ಆಕೆಯನ್ನು ವಿವಾಹವಾದನು. ನಂತರ ನವದಂಪತಿಗಳಾಗಿ ತಿರುನಗರಿಯಿಂದ ಒಂದು ಕಿ.ಮೀ. ದೂರದಲ್ಲಿರುವ ವೇದರಾಜಪುರಂ ಎಂಬ ಊರಿಗೆ ಬರುತ್ತಿದ್ದ ಸಂದರ್ಭದಲ್ಲಿ ನೀಲವಾದ ಆಳ್ವಾರರು ದಿವ್ಯ ದಂಪತಿಗಳೆಂದು ತಿಳಿಯದೇ ಅಪಾದಮಸ್ತಕವಾಗಿ ಆಭರಣಗಳನ್ನು ಧರಿಸಿದ್ದ ಅವರ ಆಭರಣಗಳನ್ನು ದೋಚಿ ಕೊನೆಗೆ ಕಾಲಿನ ಉಂಗುರವನ್ನೂ ತೆಗೆದುಕೊಡು ಎಂದು ಬೆದರಿಸಿದಾಗ "ನಮ್ಮಿಂದ ಆಗುವುದಿಲ್ಲ ನೀನೇ ನಿನ್ನ ಶಕ್ತಿಯಿಂದ ಅವುಗಳನ್ನು ತೆಗೆದುಕೋ'' ಎಂದು ಭಗವಂತನು ಹೇಳಿದ. ಕೂಡಲೇ ಹಲವಾರು ಬಾರಿ ತನ್ನ ಬಲವನ್ನು ಉಪಯೋಗಿಸಿ ಆ ಕಾಲುಂಗುರವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಅದು ಬರಲೇ ಇಲ್ಲ ಆಗ ನೀಲನು ತನ್ನ ಹಲ್ಲಿನಿಂದ ಅವುಗಳನ್ನು ಎಳೆಯುತ್ತಿದ್ದಾಗ ದಿವ್ಯ ದಂಪತಿಗಳ ಪಾದ ಸ್ಪರ್ಶದಿಂದ ಪುನೀತನಾಗಿ ಜ್ಞಾನೋದಯವನ್ನು ಪಡೆದು ಲಕ್ಷ್ಮೀ ನಾರಾಯಣರನ್ನು ಸ್ತುತಿಸಿ ನೀಲನು ತಿರುಮಂಗೈ ಆಳ್ವಾರರಾಗಿ ಕಲಿಯುಗದಲ್ಲಿ ಪ್ರಸಿದ್ಧಿಯನ್ನು ಪಡೆದರು. ಇಂದಿಗೂ ಈ ಉತ್ಸವವು ತಿರುವಾಲಿನತ್ತಿರುನಗರಿಯಲ್ಲಿ ನಡೆಯುತ್ತದೆ.

**ವಿಶೇಷಗಳು:**

1. ತಿರುಮಂಗೈ ಆಳ್ವಾರರು ಈ ಸ್ವಾಮಿಯ ಅನುಗ್ರಹದಿಂದ ಆರು ದಿವ್ಯ ಪ್ರಬಂಧಗಳನ್ನು ಅನುಗ್ರಹಿಸಿದರು.

2. ತಿರುಮಂಗೈ ಆಳ್ವಾರರ ಮೂಲಕ ಆರಾಧಿಸಲ್ಪಟ್ಟ ಪಂಚ ನೃಸಿಂಹ ಮೂರ್ತಿಗಳನ್ನು ಈ ಕ್ಷೇತ್ರದಲ್ಲಿ ದರ್ಶಿಸಬಹುದು.

3.ಅಷ್ಟಾಕ್ಷರೀ ಮಂತ್ರವನ್ನು ಸಾಕ್ಷಾತ್ತು ಮಹಾಲಕ್ಷ್ಮಿಯೊಂದಿಗೆ ನಾರಾಯಣನು ಈ ಆಳ್ವಾರರನ್ನು ಅನುಗ್ರಹಿಸಿದನು.

4. ವೇದರಾಜಪುರದಲ್ಲೇ ತಿರುಮಂಗೈ ಆಳ್ವಾರರು ದಿವ್ಯ ಪ್ರಬಂಧಗಳನ್ನು ಗಾನ ಮಾಡಿದರು.

# ಹೊಯ್ಸಳರ ಕಲಾ ಕುಸುಮ ಹೊಸಹೊಳಲಿನ ಲಕ್ಷ್ಮೀ ನಾರಾಯಣ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

61

ಕನ್ನಡ ನಾಡಿನ ಪ್ರಮುಖ ಜಿಲ್ಲೆಯಾದ ಮಂಡ್ಯ ಜಿಲ್ಲೆಯಲ್ಲಿ ಅನೇಕ ಸ್ಥಳಗಳಲ್ಲಿ ಹೊಯ್ಸಳ ದೇವಾಲಯಗಳಿವೆ. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯ, ಹೊಸಬೂದನೂರಿನ ಕಾಶೀವಿಶ್ವೇಶ್ವರ ದೇವಾಲಯ, ಅನಂತಪದ್ಮನಾಭ ದೇವಾಲಯ, ಹೊಸಹೊಳಲಿನ ಲಕ್ಷ್ಮೀನಾರಾಯಣ ದೇವಾಲಯ ಸಿಂಧಘಟ್ಟದ ಲಕ್ಷ್ಮೀನಾರಾಯಣ ದೇವಾಲಯ, ಸಂಗಮೇಶ್ವರ ದೇವಾಲಯ, ಬಸರಾಳಿನ ಮಲ್ಲಿಕಾರ್ಜುನ ದೇವಾಲಯ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ ಮುಂತಾದ ದೇವಾಲಯಗಳನ್ನು ಉದಾಹರಿಸಬಹುದು. ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸ ಹೊಳಲು ಎಂಬ ಗ್ರಾಮವು ತಾಲ್ಲೂಕು ಕೇಂದ್ರದಿಂದ ಎರಡು ಕಿಲೋಮೀಟರ್ ದೂರದಲ್ಲಿದೆ. ಇಲ್ಲಿ ಅತ್ಯಂತ ಕಲಾತ್ಮಕವಾದ ಕೆತ್ತನೆಗಳಿಂದ ಕೂಡಿರುವ ಲಕ್ಷ್ಮೀನಾರಾಯಣ ದೇವಾಲಯವಿದೆ. ಹೊಯ್ಸಳರ ಕಾಲದ 13 ನೆಯ ಶತಮಾನಕ್ಕೆ ಸೇರಿರುವ ಈ ದೇವಾಲಯವು ಬಹಳ ಸುಂದರವಾಗಿದ್ದು ವಿಶ್ವ ಪ್ರಸಿದ್ಧ ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳನ್ನು ನೆನಪಿಸುತ್ತದೆ. ಇಡೀ ದೇವಾಲಯದ ಹೊರ ಮತ್ತು ಒಳಭಾಗ ಎರಡೂ ಕಡೆಯೂ ಸೂಕ್ಷ್ಮಕೆತ್ತನೆಗಳಿಂದ ಕೂಡಿದ್ದು ನೋಡುಗರನ್ನು ಬೇರೊಂದು ಲೋಕಕ್ಕೆ ಒಯ್ಯುತ್ತದೆ. ಪ್ರಧಾನ ಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣ ಸ್ವಾಮಿ ಉತ್ತರ ಗರ್ಭಗುಡಿಯಲ್ಲಿ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ಹಾಗೂ ದಕ್ಷಿಣ ಗರ್ಭಗುಡಿಯಲ್ಲಿ ಅಂದದ ವೇಣುಗೋಪಾಲಸ್ವಾಮಿಯ ಮೂರ್ತಿಗಳಿವೆ. ಮಧ್ಯದ ಗರ್ಭಗುಡಿಯಲ್ಲಿರುವ ನಾರಾಯಣನನ್ನು ನಂಬಿದವರನ್ನು ಕೈಬಿಡದ ನಂಬಿ ನಾರಾಯಣ ಎಂದು ಕರೆಯುವರು. ಮಹಾವಿಷ್ಣುವಿನ ಚತುರ್ವಂಶತಿ ಮೂರ್ತಿಗಳಲ್ಲಿ ನಾರಾಯಣನು ಒಂದು. ಕೇಶವನು ಶಂಖ, ಚಕ್ರ, ಗದಾ, ಪದ್ಮಧಾರಿಯಾಗಿದ್ದರೆ. ನಾರಾಯಣನು ಕಮಲ, ಗದಾ ಚಕ್ರ ಶಂಖಧಾರಿಯಾಗಿರುತ್ತಾನೆ. ದೇವಾಲಯದ ಉತ್ತರದ ಗರ್ಭಗುಡಿಯಲ್ಲಿರುವ ಲಕ್ಷ್ಮೀನರಸಿಂಹದೇವನು ಸಹಾ ಅತ್ಯಂತ ಸೊಗಸಾದ ಮೂರ್ತಿಯಾಗಿದೆ. ತನ್ನ ಪತ್ನಿಯನ್ನು ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ದೇವನ ಬಲಬದಿಯಲ್ಲಿ ಭಕ್ತ ಪ್ರಹ್ಲಾದನ ಸಣ್ಣ ಮೂರ್ತಿ ಇರುವುದು ಗಮನಾರ್ಹ ಹಾಗಾಗಿ ಪ್ರಸ್ತುತ ದೇವನನ್ನು ನರಸಿಂಹಸ್ವಾಮಿಯ ಪ್ರಭೇದಗಳಲ್ಲಿ ಒಂದಾದ ಪ್ರಹ್ಲಾದ ವರದ ನರಸಿಂಹ ದೇವನೆಂದು ಕರೆಯಬಹುದು. ನರಸಿಂಹ ಸ್ವಾಮಿಯ ಸುತ್ತಲೂ ಇರುವ ಪ್ರಭಾವಳಿಯಲ್ಲಿ ದಶಾವತಾರದ ಸಣ್ಣ ಮೂರ್ತಿಗಳಿವೆ.ಲಕ್ಷ್ಮೀನರಸಿಂಹ ದೇವನ ಗರ್ಭಗುಡಿಯ ಲಲಾಟ ಬಿಂಬದಲ್ಲಿ ಗರ್ಭಗುಡಿಯಲ್ಲಿರುವಂತೆ ಪ್ರಹ್ಲಾದವರದ ಲಕ್ಷ್ಮೀ ನರಸಿಂಹನ ಕಿರುಶಿಲ್ಪವಿದೆ.







ದಕ್ಷಿಣ ಗರ್ಭಗುಡಿಯಲ್ಲಿ ವೇಣುಗೋಪಾಲಸ್ವಾಮಿಯ ಮೂರ್ತಿ ಇದೆ. ಇಲ್ಲಿರುವ ವೇಣುಗೋಪಾಲ ಸ್ವಾಮಿಯ ಮೂರ್ತಿಯು, ಇತ್ತೀಚಿನ ಮೂರ್ತಿಯಾಗಿರುವುದು. ದೇವಾಲಯದ ನವರಂಗದ ಕಂಬಗಳು ಕುಸರಿ ಕೆಲಸಗಳ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ನೋಡುಗರನ್ನು ಮನಸೂರೆ ಗೊಳಿಸುವುದು. ಇಲ್ಲಿರುವ ಸ್ಥಂಭಗಳ ಮೇಲ್ಭಾಗದಲ್ಲಿ ವಿವಿಧ ಭಂಗಿಯಲ್ಲಿ ನರ್ತಿಸುತ್ತಿರುವ ನರ್ತಕಿಯರ ಕಿರುಶಿಲ್ಪಗಳು ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ದೇವಾಲಯದ ನವರಂಗದಲ್ಲಿ ಹತ್ತು ಭುವನೇಶ್ವರಿಗಳಿದ್ದು ನಡುವಿನ ಭುವನೇಶ್ವರಿ ಬಹಳ ಕಲಾತ್ಮಕವಾಗಿದೆ. ಇಲ್ಲಿ ಮಧ್ಯದಲ್ಲಿ ಕಾಳಿಂಗಮರ್ದನ ಕೃಷ್ಣನ ಕಿರು ಶಿಲ್ಪವು ಬಹಳ ಕಲಾತ್ಮಕವಾಗಿದೆ. ಬಾಳೆ ಮೊಗ್ಗಿನ ಕೆತ್ತನೆ, ನಕ್ಷತ್ರಾಕಾರದ ವಿನ್ಯಾಸ, ಕಲಾತ್ಮಕ ಬಹು ವೃತ್ತಾಕಾರದ ರಚನೆ ಮುಂತಾದ ಭುವನೇಶ್ವರಿಗಳ ರಚನೆ ಬಹು ಆಕರ್ಷಕ.

ದೇವಾಲಯದ ಒಳಗಿನ ಸೌಂದರ್ಯದಂತೆ ಹೊರಗಿನ ಸೌಂದರ್ಯವು ವರ್ಣನಾತೀತ. ಅಧಿಷ್ಠಾನದ ಪಟ್ಟಿಗೆ ಗ' ಳ' ಲ್ಲಿ ಆನೆಗಳು ಕುದುರೆಗಳು, ಹಂಸಗಳ ಸಾಲು, ರಾಮಾಯಣ, ಭಾಗವತ, ಮಹಾಭಾರತದ ಕಥಾನಕಗಳನ್ನು ಸೊಗಸಾಗಿ ಚಿತ್ರಿಸಲಾಗಿದೆ. ಲಕ್ಷ್ಮೀನರಸಿಂಹನ ಅವತಾರದಲ್ಲಿ ಬರುವ ಪ್ರಹ್ಲಾದನ ಕಥಾನಕವನ್ನು ನಿರೂಪಣಾತ್ಮಕವಾಗಿ ಬಿಂಬಿಸಲಾಗಿದೆ. ದೇವಾಲಯದ ಹೊರ ಭಿತ್ತಿಯಲ್ಲಿ ಪರ ವಾಸುದೇವ, ಕಾಳಿಂಗಮರ್ದನ, ಬಲೀಂದ್ರ ವಾಮನ, ಮಹೇಂದ್ರ, ಲಕ್ಷ್ಮೀ ನರಸಿಂಹ, ಯೋಗಾನರಸಿಂಹ, ಭೂವರಾಹ ಮುಂತಾದ ಮೂರ್ತಿಗಳು ಅನುಪಮ ಸೌಂದರ್ಯದಿಂದ ಕೂಡಿವೆ. ಲಕ್ಷ್ಮೀನಾರಾಯಣ ಸ್ವಾಮಿಯ ದೇವಾಲಯದ ಮೂಲ ಗರ್ಭಗುಡಿಗೆ ಅಂದದ ಶಿಖರವಿದೆ. ಲಕ್ಷ್ಮೀ ನಾರಾಯಣ ಸ್ವಾಮಿಗೆ ಪ್ರತಿ ವರ್ಷ ಫಾಲ್ಗುಣ ಮಾಸದಲ್ಲಿ ರಥ ಸಪ್ತಮಿಯ ದಿನ ಬ್ರಹ್ಮ ರಥೋತ್ಸವವು ವೈಭವವಾಗಿ ಜರಗುವುದು. ಕೇಂದ್ರ ಪುರಾತತ್ವ ಇಲಾಖೆಯ ಉತ್ತಮ ನಿರ್ವಹಣೆಯಲ್ಲಿ ದೇವಾಲಯ ಇರುವುದು. ದೇವಾಲಯದ ಸುತ್ತಲೂ ಹಸಿರು ಉದ್ಯಾನವನವನ್ನು ನಿರ್ಮಿಸಿ ದೇವಾಲಯದ ಸೌಂದರ್ಯವನ್ನು ಇಮ್ಮಡಿ ಗೊಳಿಸಿರುವರು.

## ಹೀಗೆ ಬನ್ನಿ :

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕು ಹೊಸ ಹೊಳಲು ಗ್ರಾಮವು ಕೃಷ್ಣರಾಜಪೇಟೆ-ಅಕ್ಕೀ ಹೆಬ್ಬಾಳು ರಸ್ತೆಯಲ್ಲಿ ಕೃಷ್ಣರಾಜಪೇಟೆಯಿಂದ 2 ಕಿ.ಮೀ ದೂರದಲ್ಲಿದೆ, ಮತ್ತೊಂದು ತಾಲ್ಲೂಕು ಕೇಂದ್ರ ಪಾಂಡವಪುರಕ್ಕೆ, ಕೃಷ್ಣರಾಜಪೇಟೆಯು 40 ಕಿ.ಮೀ.ದೂರದಲ್ಲಿದೆ. ಹೊಸ ಹೊಳಲಿನಲ್ಲಿ ಹೊಯ್ಸಳರ ಕಾಲದ ಬಸದಿಯೂ ಇದ್ದು ಗರ್ಭಗುಡಿಯಲ್ಲಿ 23 ನೆಯ ತೀರ್ಥಂಕರ ರಾದ ಪಾರ್ಶ್ವನಾಥರ ಸುಂದರ ಬಿಂಬವಿದೆ ಹೊಸ ಹೊಳಲಿನಲ್ಲಿ ಮಾರುತಿಯ ಮಂದಿರ' ವ'್ರ ಇದೆ.







# ಡಿಸೆಂಬರ್ 2025
## ತಿಂಗಳ
# ರಾಶಿ ಫಲಗಳು

ಶ್ರೀಮಾತಾ ಅನುಗ್ರಹ





**ಮೇಷ**

ಆಕಸ್ಮಿಕ ಧನ ಲಾಭವಾಗುವುದು. ಸುಖಾನುಕೂಲತೆಗಳು ಹೆಚ್ಚುವುವು. ಭೋಗ ವಿಲಾಸದ ಜೀವನ ನಡೆಸುವಿರಿ. ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣುವಿರಿ. ಕಲಾವಿದರುಗಳಿಗೆ ಛಾಯಾ ಚಿತ್ರಗ್ರಾಹಕರಿಗೆ ಉತ್ತಮವಾಗಿರುವುದು. ನರಸಿಂಹ ದೇವರ ಆರಾಧನೆ ಮಾಡುವುದು ಒಳ್ಳೆಯದು.



**ವೃಷಭ**

ಒಳ್ಳೆಯ ಆಹಾರ ಸವಿಯುವ ಸಂದರ್ಭಗಳು ಒದಗುತ್ತವೆ. ಮಾನಸಿಕವಾಗಿ ನೆಮ್ಮದಿ ಇರುತ್ತದೆ. ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಪ್ರಗತಿ. ಬರವಣಿಗೆಯಿಂದ ಹೆಸರು ಮಾಡುವಿರಿ. ಹಲವಾರು ಮೂಲಗಳಿಂದ ಧನ ಆಗಮನವಾಗಿ ಹಣಕಾಸಿನ ಸ್ಥಿತಿ ಗತಿ ಉತ್ತಮವಾಗುತ್ತದೆ. ಅಮ್ಮನವರ ದರ್ಶನ ಮಾಡಿಕೊಂಡು ಬರುವುದರಿಂದ ಬಹಳ ಒಳ್ಳೆಯದಾಗುವುದು.



**ಮಿಥುನ**

ಕೈಕೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ. ಆರೋಗ್ಯ ಸುಧಾರಿಸುತ್ತದೆ. ಮೇಲಧಿಕಾರಿಗಳಿಂದ ಅನುಕೂಲವಾಗುವುದು. ಸ್ಥಿತಿಗತಿ ಉತ್ತಮವಾಗುವುದು. ಉದ್ಯೋಗದಲ್ಲಿ ಬಡ್ತಿ ದೊರೆಯುವುದು. ದೂರ ಪ್ರಯಾಣದಿಂದ ಲಾಭವಿರುವುದು. ಮನೆಯಲ್ಲಿ ಶುಭಕಾರ್ಯಗಳು ನೆರವೇರುವುವು.



**ಕರ್ಕಾಟಕ**

ಆಕಸ್ಮಿಕ ಧನ ಲಾಭವಾಗುವುದು. ಪಂಡಿತರ ಸಾಂಗತ್ಯ ಲಭಿಸುವುದು. ಆಸ್ತಿ ಮಾಡಿಕೊಳ್ಳುವಿರಿ. ಕುಟುಂಬದ ಜೀವನ ಚೆನ್ನಾಗಿರುವುದು. ಹೊಸ ವಾಹನ ಖರೀದಿಸುವಿರಿ. ವ್ಯಾಪಾರ ನಿಮಿತ್ತವಾಗಿ ಪ್ರಯಾಣ ಮಾಡಿ ಆದರಿಂದಲೂ ಸಾಕಷ್ಟು ಲಾಭ ಪಡೆಯುವಿರಿ. ಭೋಗ ಭಾಗ್ಯಗಳನ್ನು ಅನುಭವಿಸುವಿರಿ.



**ಸಿಂಹ**

ನಿಮ್ಮ ಆಸೆಗಳು ಫಲಿಸುತ್ತವೆ. ಅನೇಕ ಮೂಲಗಳಿಂದ ಧನಲಾಭವಾಗುತ್ತದೆ. ವಾಹನ ಖರೀದಿ ಯೋಗವಿದೆ. ಬಂಧು ಬಾಂಧವರಿಂದ ಸಹಾಯಸಿಗುತ್ತದೆ. ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತೀರಿ ಮನೆ ಕಟ್ಟುವ ನಿಮ್ಮ ಯೋಜನೆ ಸಫಲವಾಗುವುದು. ಆದಿತ್ಯ ಹೃದಯ ಪಠಿಸಿ ಒಳ್ಳೆಯದಾಗುವುದು.



**ಕನ್ಯೆ**

ಹಲವು ರೀತಿಯಲ್ಲಿ ಧನಾಗಮನ. ದಾನ ಕಾರ್ಯಗಳನ್ನು ಮಾಡುವಿರಿ. ಆರೋಗ್ಯವಂತರಾಗಿರುವಿರಿ. ಸಾಲದಿಂದ ಮುಕ್ತರಾಗುವಿರಿ. ಕೆಲಸ ಕಾರ್ಯಗಳಲ್ಲಿ ಜಯಕಾಣುವಿರಿ. ನಿಮ್ಮ ತೀರ್ಮಾನ ಸರಿಯಾಗಿ ಇದ್ದು ಕೆಲಸಗಳೆಲ್ಲವೂ ಕೈಗೂಡುವುವು. ನಿಮಗೆ ಇಷ್ಟ ಬಂದ ಜಾಗಕ್ಕೆ ವರ್ಗಾವಣೆಯಾಗುವುದು. ಮಕ್ಕಳಿಂದಲೂ ಆದಾಯ.



**ತುಲಾ**

ನಿರಂತರ ಧನಾಗಮನ. ಆರೋಗ್ಯದಲ್ಲಿ ಚೇತರಿಕೆ ಕಂಡು ಬರುವುದು. ನೂತನ ವಸ್ತ್ರಾಭರಣಕೊಳ್ಳುವಿರಿ. ಕುಟುಂಬದಲ್ಲಿ ಸೌಖ್ಯವಿರುವುದು. ಸಂತಾನದಿಂದಲೂ ಸೌಖ್ಯವಿರುವುದು. ಸರ್ಕಾರದಿಂದ ಲಾಭ. ವಿದ್ಯಾರ್ಥಿಗಳಿಗೆ ಪ್ರಗತಿ ಕಂಡು ಬರುವುದು. ಸಂಗೀತಗಾರರಿಗೆ ಶುಭದಾಯಕ.



**ವೃಶ್ಚಿಕ**

ಉತ್ತಮ ಆದಾಯ. ಸ್ನೇಹಿತರಿಂದ ಸಹಕಾರ ದೊರೆಯುವುದು. ವಸ್ತ್ರಾಭರಣಗಳನ್ನು ಖರೀದಿಸುವಿರಿ. ಕುಟುಂಬದಲ್ಲಿ ಸೌಖ್ಯ. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುವು. ಕೈಹಾಕಿದ ಕೆಲಸಗಳೆಲ್ಲವೂ ಕೈಗೂಡುವುವು. ಸರ್ಕಾರದಿಂದ ಸನ್ಮಾನಿತನಾಗುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ.



**ಧನಸ್ಸು**

ವಿದ್ಯಾಭ್ಯಾಸದಲ್ಲಿ ಪ್ರಗತಿ. ಅವಿವಾಹಿತರಿಗೆ ವಿವಾಹ ಭಾಗ್ಯ. ಸಂತಾನಾಪೇಕ್ಷಿಗಳಿಗೆ ಸಂತಾನ. ವ್ಯಾಪಾರದಲ್ಲಿ ಅಭಿವೃದ್ಧಿ. ಆರೋಗ್ಯದಲ್ಲಿ ಅಭಿವೃದ್ಧಿ. ಕುಟುಂಬದವರೊಂದಿಗೆ ಸಂತೋಷದಿಂದ ಕಾಲ ಕಳೆಯುವಿರಿ. ಉತ್ತಮ ವಾಗ್ಮಿಯಾಗಿ ಲಾಭ ಪಡೆಯುವಿರಿ.



**ಮಕರ**

ಆದಾಯಕ್ಕೆ ಅನೇಕ ದಾರಿಗಳಿರುವ ಕಾರಣ ನಿಮ್ಮ ಚಿಂತೆ ದೂರವಾಗುತ್ತದೆ. ಪ್ರಯತ್ನದಿಂದ ಜಯ ಸಿಗುತ್ತದೆ. ಮಾತಿನಿಂದ ಗೆಲ್ಲುವಿರಿ. ಆರೋಗ್ಯದಲ್ಲಿ ಚೇತರಿಕೆ. ವಿರೋಧಿಗಳು ದೂರ ಸರಿಯುವರು. ಅವಿವಾಹಿತರಿಗೆ ವಿವಾಹ ಭಾಗ್ಯ. ವಿವಾಹಿತರಿಗೆ ಸಂತಾನ ಭಾಗ್ಯ ಮುಂತಾದ ಶುಭಫಲಗಳು ಉಂಟಾಗುತ್ತವೆ.



**ಕುಂಭ**

ವೇದಾಂತದಲ್ಲಿ ಮನಸ್ಸು ವಾಲುವುದು. ನೀವಂದುಕೊಂಡಿದ್ದನ್ನು ಸಾಧಿಸುವಿರಿ. ಸರ್ಕಾರದಿಂದ ಸಹಾಯ. ಉದ್ಯೋಗದಲ್ಲಿ ಬಡ್ತಿ ಹೊಸ ಉದ್ಯೋಗ ಸಿಗುವುದು. ಪ್ರಾಚೀನ ವಿಜ್ಞಾನವನ್ನು ಕಲಿಯುವ ಮನಸ್ಸು ಆಗುತ್ತದೆ. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವಿರಿ.



**ಮೀನ**

ಮಕ್ಕಳಿಂದ ಸಂತೋಷ ಉಂಟಾಗುತ್ತದೆ. ಶತ್ರುಗಳು ಸೋಲುತ್ತಾರೆ. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಉಂಟಾಗುತ್ತದೆ. ಸರ್ಕಾರದ ಕೃಪೆಗೆ ಪಾತ್ರರಾಗುವಿರಿ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು. ಮಿತ್ರರಿಂದ ಅನುಕೂಲವಾಗುವುದು. ವಿದ್ಯಾಭ್ಯಾಸದಲ್ಲಿ ಅಭ್ಯುದಯ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ|| ಅನಸೂಯ ಎಸ್. ರಾಜೀವ್

**1. ಮಗುವಿಗೆ ಕಿವಿಚುಚ್ಚುವುದರ ವಿಶೇಷತೆ ಏನು?**

**ಉತ್ತರ :** ಕಿವಿ ಚುಚ್ಚುವುದರಲ್ಲಿ ಶಿಶು ಮನೋವಿಜ್ಞಾನವಿದೆ. ಕಿವಿಯನ್ನು ಚುಚ್ಚಿದಾಗ ಮಗುವಿಗೆ ಕರಕ್ ಎಂಬ ಶಬ್ದ ಕೇಳಿಸುವುದರ ಜತೆಗೆ ಚುಚ್ಚುವ ನೋವಿನ ಅನುಭವವೂ ಆಗಿರುತ್ತದೆ. ಎರಡನೇ ಕಿವಿಯನ್ನು ಚುಚ್ಚಿದಾಗ ಇದೇ ಅನುಭವದ ಪುನರಾವರ್ತನೆಯಾಗುತ್ತದೆ. ಜಗತ್ತಿನ ಅನುಭವಗಳನ್ನು ತನ್ನದೇ ಆದ ರೀತಿಯಲ್ಲಿ ಸ್ವೀಕರಿಸುವ ಸೂಕ್ಷ್ಮಗ್ರಾಹಿ ಮಗುವು ಆ ಶಬ್ದಕ್ಕೂ ನೋವಿಗೂ ಸಂಬಂಧವಿದೆ ಎಂಬುದನ್ನು ಗ್ರಹಿಸಿಬಿಡುತ್ತದೆ. ಆದ್ದರಿಂದ ಮುಂದೆ ಮಗುವು ಅಂಥಹ ಶಬ್ದಗಳನ್ನು ದ್ವೇಷಿಸುವ ಮತ್ತು ಆ ಶಬ್ದಕ್ಕೆ ಹೆದರುವ ಸಂಭವವಿರುತ್ತದೆ. ಕಿವಿ ಚುಚ್ಚಿದ ಅನಂತರ ಕಿವಿಯ ಬಳಿ ಕೊಬ್ಬರಿಯನ್ನು ಮುರಿಯುವುದರಿಂದಲೂ ಮಗುವಿಗೆ ಮತ್ತೆ ಕರಕ್ ಎಂಬ ಶಬ್ದವೇ ಕೇಳುತ್ತದೆ. ಆದರೆ ನೋವಿನ ಅನುಭವವಾಗುವುದಿಲ್ಲ. ಆದ್ದರಿಂದ ಮಗುವು ಆ ಶಬ್ದ ಬಂದಾಗಲೆಲ್ಲ ತನಗೆ ನೋವಾಗುವ ಕಾರಣವಿಲ್ಲ ಎಂದು ಗ್ರಹಿಸುವ ಕಾರಣ ಮುಂದೆ ಅದು ಆ ಶಬ್ದಕ್ಕೆ ಹೆದರುವುದಿಲ್ಲ.

**2. ವೆಂಕಟರಮಣನ ಗಲ್ಲದ ಮೇಲೆ ಕರ್ಪೂರ ಏಕೆ ಇದೆ?**

**ಉತ್ತರ :** ವೇಂಕಟೇಶ್ವರನ ಗಲ್ಲದ ಮೇಲೆ ಬಿಳಿ ಚುಕ್ಕೆ ಇರಲು ಕಾರಣ ಈ ಕಥೆಯನ್ನು ನೋಡೋಣ. ಸಾವಿರಾರು ವರ್ಷಗಳ ಹಿಂದೆ ತಿರುಮಲೆಯಲ್ಲಿ ಈಗಿನಂತೆ ಜನದಟ್ಟಣೆಗಳು ಏನೂ ಇಲ್ಲದ ಕಾಲ ಶ್ರೀ ವೆಂಕಟೇಶ್ವರನ ಪೂಜೆಗಳನ್ನು ನಡೆಸುವ ಅರ್ಚಕರಲ್ಲದೆ ಆಗೊಮ್ಮೆ ಈಗೊಮ್ಮೆ ಸ್ವಾಮಿಯ ದರ್ಶನಕ್ಕೆಂದು ಬರುವ ಭಕ್ತರುಗಳನ್ನು ಹೊರತುಪಡಿಸಿದರೆ ಮತ್ಯಾರು ಅಲ್ಲಿರುವ ಸಾಹಸ ಮಾಡದ ಕಾಲವದು. ಆಗ ಅಲ್ಲಿಗೆ ಬಂದ ರಾಮಾನುಜಾಚಾರ್ಯರು ಯೋಚಿಸಿ ನಿತ್ಯಾಲಂಕಾರ ಪ್ರಿಯನಾಗಿರುವ ವೆಂಕಟೇಶ್ವರನ ಅಲಂಕರಿಸಲು ಬೇಕಾದ ಹೂವುಗಳಿಗಾಗಿ ಅಲ್ಲೇ ನೆಲೆಸಿ ಹೂ ತೋಟವೊಂದನ್ನು ನಿರ್ಮಿಸಿ ಸ್ವಾಮಿಯ ಸೇವೆ ಮಾಡಲಿಕ್ಕಾಗಿ ತಮ್ಮ ಶಿಷ್ಯರಲ್ಲಿ ಆನಂದಚಾರ್ಯರನ್ನು ನೇಮಿಸಿದರು. ಮೊದಲು ಹೂ ತೋಟದ ನಿರ್ಮಾಣವಾಗಬೇಕಿತ್ತು. ಹೂವಿನ ಗಿಡಗಳಿಗಾಗಿ ಬಾವಿ ಒಂದನ್ನು ನಿರ್ಮಿಸಲು ಪ್ರಾರಂಭ ಮಾಡಿದ ಆನಂದಾಚಾರ್ಯರು ಹಾರೆಯಿಂದ ಮಣ್ಣು ತೆಗೆದು ಮಣ್ಣಿನ ಬುಟ್ಟಿಯನ್ನು ತನ್ನ ಗರ್ಭಿಣಿ ಪತ್ನಿಯ ತಲೆಯ ಮೇಲಿಟ್ಟರೆ ಆಕೆ ಆ ಮಣ್ಣನ್ನು ಹೊತ್ತು ದೂರದಲ್ಲಿ ಬಿಸಾಡಿ ಬರುತ್ತಿದ್ದರು. ತನಗಾಗಿ ತನ್ನ ಭಕ್ತರು ಪಡುತ್ತಿದ್ದ ಶ್ರಮವನ್ನು ಕಂಡ ಶ್ರೀನಿವಾಸನು ವೇಷಮರೆಸಿ ಬಾಲಕನ ರೂಪ ಧರಿಸಿ ಆನಂದಾಚಾರ್ಯರ ಬಳಿ ಬಂದು "ಅಯ್ಯಾ ನಾನು ನಿಮ್ಮ ಕೆಲಸದಲ್ಲಿ ಭಾಗಿಯಾಗಲೇ ಪಾಪ ನಿಮ್ಮಿಬ್ಬರ ಶ್ರಮ ಕಂಡು ನನಗೂ ಸಹಾಯ ಮಾಡಬೇಕೆನ್ನುವ ಮನಸ್ಸಾಗಿದೆ'' ಎಂದರು. ಆನಂದಾಚಾರ್ಯರು ಆ ಹುಡುಗನ ಮಾತನ್ನು ಕೇಳಿ ಹುಡುಗ ಇದು ಭಗವಂತನಿಗೆ ನಾನು ನನ್ನ ಪತ್ನಿಯೂ ಮಾಡುತ್ತಿರುವ ಸೇವೆ ಇದರಲ್ಲಿ ನೀನು ಭಾಗಿಯಾಗುವುದೇನು ಬಂತು? ಹೊರಡು ಎಂದು ಬಿಟ್ಟರು. ಆ ಬಾಲಕನು ಎಷ್ಟು ಕೇಳಿದರೂ ಒಪ್ಪದ ಅವರನ್ನು ಬಿಟ್ಟು ಶ್ರೀನಿವಾಸನು ಆನಂದಾಚಾರ್ಯರ ಪತ್ನಿಯ ಬಳಿ ಹೋಗಿ ಅನುನಯಿಸಿ ಆಕೆಯ ಕೈಯಲ್ಲಿದ್ದ ಮಣ್ಣಿನ ಬುಟ್ಟಿಯನ್ನು ಒಯ್ದು ಮಣ್ಣನ್ನು ಹಾಕಿ ಬರುವ ಕೆಲಸ ಮಾಡಿದನು. ತುಂಬಿಕೊಟ್ಟ ಮಣ್ಣನ್ನು ಇಷ್ಟು ಬೇಗ ಬಿಸಾಡಿ ಬರುತ್ತಿದ್ದ ಪತ್ನಿಯನ್ನು ವಿಚಾರಿಸಿದಾಗ ಆಕೆ ತನ್ನ ಸಹಾಯಕ್ಕೆ ಹುಡುಗನೊಬ್ಬ ಬಂದ ವಿಷಯವನ್ನು ಹೇಳಲೇ ಬೇಕಾಯಿತು. ಅವರು ಆ ಹುಡುಗನ ಬೆನ್ನಟ್ಟಿದರು. ತನ್ನನ್ನು ಹೊಡೆಯಲು ಹಾರೆ ಹಿಡಿದು ಬರುತ್ತಿದ್ದ ಆಚಾರ್ಯರನ್ನು ಕಂಡು ಆ ಬಾಲಕನಿಗೆ ನಗುವೋ ನಗು. ಕೈಗೆ ಸಿಗದಂತೆ ತಪ್ಪಿಸಿಕೊಂಡು ಓಡುತ್ತಿದ್ದ ಬಾಲಕನನ್ನು ನೋಡಿ ಕೈಯಲ್ಲಿದ್ದ ಹಾರೆಕೋಲನ್ನೇ ಆ ಬಾಲಕನಿಗೆ ತಾಗುವಂತೆ ಆನಂದಾಚಾರ್ಯರು ಬೀಸಿದರು. ಆ ಹಾರೆ ಬಾಲಕನ ಗಲ್ಲವನ್ನು ಸವರಿಕೊಂಡು ಹೋಗೇ ಬಿಟ್ಟಿತು. ಆಗಲೂ ಆ ಬಾಲಕ ಅವರ ಕೈಗೆ ಸಿಗದೇ ಓಡಿಹೋಗಿ ಗರ್ಭಗುಡಿಗೆ ನುಗ್ಗಿ ಮಾಯವಾಗಿ ಬಿಟ್ಟ ಈ ವಿಷಯವನ್ನು ಆನಂದಾಚಾರ್ಯರು ಅರ್ಚಕರಿಗೆ ತಿಳಿಸಿದರು. ಅರ್ಚಕರು ಗರ್ಭಗುಡಿಯಲ್ಲಿ ಹುಡುಕಿದರೂ ಬಾಲಕನ ಪತ್ತೆ ಇಲ್ಲ ಆದರೆ ವೆಂಕಟೇಶ್ವರನ ಗಲ್ಲದಿಂದ ದಳ ದಳನೆ ರಕ್ತ ಸುರಿಯುತ್ತಿತ್ತು. ಅರ್ಚಕರು ಭಯದಿಂದ ಗಡಗಡನೆ ನಡುಗಿ ಹೋದರು. ಆನಂದಾಚಾರ್ಯರು ಸಹ ಹೆದರಿ ಆ ಬಾಲಕ ಶ್ರೀನಿವಾಸನೆ ಎಂದು ತಿಳಿದರು. "ಅಯ್ಯೋ ಯಾವ ಸ್ವಾಮಿಯ ಸೇವೆ ಮಾಡುವ ಸೌಭಾಗ್ಯ ನನಗೆ ಒದಗಿತ್ತೋ ಅವನೇ ನನ್ನ ಸಹಾಯಕ್ಕೆ ಬಂದಾಗ ನಾನೆಂಥ ಪಾಪಿ, ನನ್ನ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವೇ ಎಂದು ಆರ್ತರಾಗಿ ಕಣ್ಣೀರು ಸುರಿಸಿದರು'' ಅಷ್ಟರಲ್ಲಿ ಅರ್ಚಕರು ಅಲ್ಲಿಯೇ ಇದ್ದ ಕರ್ಪೂರವನ್ನು ಪುಡಿ ಮಾಡಿ ಗಾಯದಿಂದ ರಕ್ತ ಸುರಿಯುತ್ತಿದ್ದ ಗಲ್ಲಕ್ಕೆ ಹಚ್ಚಿದರಂತೆ ಆಗ ರಕ್ತಸ್ರಾವ ನಿಂತಿತಂತೆ ಆಗ ಅಲ್ಲಿ ಅಶರೀರವಾಣಿಯೊಂದು ಕೇಳಿಸಿ "ಇನ್ಮುಂದೆ ವಿಗ್ರಹದ ಗಲ್ಲಕ್ಕೆ ಕರ್ಪೂರದ ಪುಡಿಯದೆ ಅಲಂಕಾರವಾಗಬೇಕೆಂದು ಹೇಳಿದಂತೆ'' ಹೀಗೆ ಶ್ರೀನಿವಾಸನಿಗೆ ಗಲ್ಲಕ್ಕೆ ಕರ್ಪೂರದ ಅಲಂಕಾರ ಸೇರಿತು.

# ಕೋಪದ ಪ್ರಸಂಗದಲ್ಲೂ ಸಂಯಮದ ದೀಪ ಬೆಳಗಬೇಕು

– ಎ. ಆರ್. ರಘುರಾಮ
99161 38436

ಮಿಥಿಲಾನಗರದಲ್ಲಿ ಸನ್ಯಾಸಿಯೊಬ್ಬರು ಪೂಜಾದಿಗಳ ನಂತರ ಮನೆ ಮನೆಗೆ ಭಿಕ್ಷೆಗೆ ಹೋಗುತ್ತಿದ್ದರು ಇದ್ದವರು ಹಾಕುತ್ತಿದ್ದರು. ಇಲ್ಲದಿದ್ದರೆ ಅಂದು ಸ್ವಾಮೀಜಿಗೆ ನೀರೇ ಆಧಾರ. ಒಂದು ದಿನ ಹೀಗೇ ಭಿಕ್ಷಾಟನೆ ಆರಂಭಿಸಿ ಮನೆಯೊಂದರ ಮುಂದೆ ನಿಂತರು.

ಭವತಿ ಭಿಕ್ಷಾಂದೇಹಿ..ಸ್ವಾಮೀಜಿ ದನಿ ಕೇಳಿ ಗೃಹಿಣಿ ಕೋಪದಿಂದಲೇ ಬಂದಳು. ಆಕೆ ಅಡುಗೆ ಮನೆಯಲ್ಲಿ ಕಾರ್ಯನಿರತಳಾಗಿದ್ದ ಕಾರಣ ಕೈ ಒರಸುವ ಬಟ್ಟೆ ಕರದಲ್ಲೇ ಇತ್ತು. ಹಾಗೇ ಬಂದಿದ್ದಳು. ಸ್ವಾಮಿಗಳು ಭಿಕ್ಷಾ ಪಾತ್ರೆಗೆ ಅದೇ ಬಟ್ಟೆಯನ್ನು ಎಸೆದಳು. ಸ್ವಾಮಿಗಳು ಶಾಂತವಾಗಿಯೇ ಇದನ್ನು ಸ್ವೀಕಾರ ಮಾಡಿದರು. (ಕೆಲ ಸಮಯದ ನಂತರವೂ ಗೃಹಿಣಿಗೆ ಅವಳ ವರ್ತನೆಯೇ ಅವಳನ್ನು ಕಾಡತೊಡಗಿತು) ನಗುನಗುತ್ತಲೇ ಮುಂದಿನ ಮನೆಗೆ ಹೋದರು. ಆ ಮನೆಯವರು ತುಪ್ಪವನ್ನು ದಾನವಾಗಿ ನೀಡಿದರು. ನಿಮ್ಮ ಆಶ್ರಮದಲ್ಲಿ ದೀಪ ಬೆಳಗಿಲಿ. ಇದರಿಂದ ಲೋಕಕ್ಕೆ ಮಂಗಳವಾಗಲಿ ಎಂದು ಪ್ರಾರ್ಥಿಸಿ ಎಂದು ಕೇಳಿ ಕೊಂಡರು. ಅದನ್ನೂ ಸ್ವಾಮೀಜಿ ಶಾಂತವಾಗಿಯೇ ಸ್ವೀಕಾರ ಮಾಡಿದರು.

ಆಶ್ರಮಕ್ಕೆ ಹೋದರು. ಮೊದಲನೇ ಮನೆಯಾಕೆ ನೀಡಿದ ಬಟ್ಟೆಯನ್ನು ಸ್ವಾಮೀಜಿ ಚೆನ್ನಾಗಿ ಒಗೆದು ಶುಭ್ರಗೊಳಿಸಿದರು. ಅದರಲ್ಲಿದ್ದ ನೂಲು ಬಿಡಿಸಿದರು. ದೀಪಕ್ಕೆ ಬೇಕಾದ ಬತ್ತಿ ಮಾಡಿಕೊಂಡರು. ದೀಪ ಬೆಳಗಿದರು. "ಸರ್ವೇಜನಾಃಸುಖಿನೋಭವಂತು" ಎಂದು ದೇವರಲ್ಲಿ ಪ್ರಾರ್ಥಿಸಿದರು. ಸದುದ್ದೇಶ ಈಡೇರಿತು. ದೇವರ ಧ್ಯಾನದಲ್ಲೇ ಸುಖವಾಗಿ ನಿದ್ರಿಸಿದರು. ಮರುದಿನ ಮತ್ತೆ ಮನೆ-ಮನೆ ಭಿಕ್ಷಾಟನೆ. ಹಿಂದಿನ ದಿನ ಬಟ್ಟೆ ಎಸೆದಿದ್ದ ಮಹಿಳೆ ಮನೆ ಬಂತು. ಆಕೆ ಹಿಂದಿನ ದಿನ ಮಾಡಿದ ತಪ್ಪಿಗೆ ಕ್ಷಮಾ ಮಾಡಬೇಕು ಎಂದು ಸ್ವಾಮೀಜಿ ಕಾಲಿಗೆ ಬಿದ್ದಳು.

ಹಿಂದಿನ ಇಡೀ ದಿನ ಆಕೆಗೆ ಅವಳು ಮಾಡಿದ ತಪ್ಪಿನ ಅರಿವಾಗಿ ಪಶ್ಚಾತ್ತಾಪವಾಗಿತ್ತು. ಅವರು ಮುಗುಳು ನಗುತ್ತಲೇ ಆಕೆಗೆ ಉತ್ತರ ನೀಡಿದರು.

ನೀನು ಕೋಪದಲ್ಲಿ ಬಿಸಾಕಿದ ಮಸಿ ಬಟ್ಟೆ ಒಂದು ಜ್ಯೋತಿಯನ್ನು ಬೆಳಗಲು ಸಹಾಯಕವಾಗಿದೆ. ಧನ್ಯವಾದ ಎಂದರು. ಗೃಹಿಣಿ ಪೆಚ್ಚಾದಳು! ಮತ್ತೆ ಸ್ವಾಮೀಜಿ ಹೇಳಿದರು.

ನಮಗೆ ಯಾರೇ ಏನೇ ಮಾಡಿದರೂ ನಮ್ಮ ಮನಸ್ಸು ಸದಾ ಧನಾತ್ಮಕವಾಗಿರಬೇಕು ನಮ್ಮತ್ತ ಕಲ್ಲುಗಳನ್ನು ಹೊಡೆದರೂ ಅದರಲ್ಲೇ ಒಂದು ಮನೆ ಕಟ್ಟುವ ಉತ್ಸಾಹವನ್ನು ನಾವು ತೋರಬೇಕು. ಕೋಪದಿಂದ ಯಾರು ಏನನ್ನೂ ಗೆಲ್ಲಲು ಆಗುವುದಿಲ್ಲ. ಆದರೆ ಕೋಪದ ಪರಿಣಾಮಕ್ಕೆ ಎದುರಿಗಿದ್ದ ವ್ಯಕ್ತಿಯೂ ಒಳಗಾಗಬಾರದು. ಆಗ ಕೇವಲ ದ್ವೇಷ ಮತ್ತು ವೈಮನಸ್ಯ ಹೆಚ್ಚುತ್ತದೆ. ಸಮಾಧಾನ ಚಿತ್ತರಾಗಿದ್ದುಕೊಂಡು, ಪರಿಸ್ಥಿತಿಯಿಂದ ಏನು ಉತ್ತಮವಾದದ್ದು ಆಗಬಹುದು ಎಂಬ ಚಿಂತನೆ ಮಾಡಬೇಕು. ಆ ನಿಟ್ಟಿನಲ್ಲಿ ಕಾರ್ಯಶೀಲರಾಗಬೇಕು ಎಂದರು. ಗೃಹಿಣಿ ಮೌನವಾದಳು. ಆಕೆ ಜೀವನದಲ್ಲಿ ಮುಂದೆ ಎಂದೂ ಇಂಥ ಕೆಲಸ ಮಾಡಿಲ್ಲ. ಸದಾ ಶಾಂತಚಿತ್ತಳಾಗಿ ಕುಟುಂಬವನ್ನು ಮುನ್ನಡೆಸಿದಳು, ಯಶ ಕಂಡಳು.



**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಪುಟಾಣಿ ಮಕ್ಕಳಿಗಾಗಿ




ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.

ಬಣ್ಣವನ್ನು ತುಂಬಿರಿ.



## ಮಾರ್ಗ ಅನ್ವೇಷಣೆ

ಮಕ್ಕಳೇ, ಇಲ್ಲಿರುವ ಆಂಡಾಳ್ ಯಾವ ಹಾದಿಯಲ್ಲಿ ಹೋಗಿ ಕೃಷ್ಣನನ್ನು ಸೇರುತ್ತಾಳೆ ಎಂದು ಕಂಡು ಹಿಡಿಯಿರಿ ನೋಡೋಣ !





## ಈ ದೀಪಗಳನ್ನು ಗಮನಿಸಿ

ಈ ದೀಪಗಳಲ್ಲಿ ಯಾವುದು ವಿಭಿನ್ನವಾಗಿವೆ ಎಂದು ಕಂಡು ಹಿಡಿಯಿರಿ ಮಕ್ಕಳೆ ನೋಡೋಣ

ಉತ್ತರಗಳು: ಮೊದಲನೆ ಸಾಲಿನಲ್ಲಿ ಐದನೆಯದು, ಎರಡನೆಯ ಸಾಲಿನಲ್ಲಿ ಕೊನೆಯದು, ಮೂರನೆಯ ಸಾಲಿನಲ್ಲಿ ನಾಲ್ಕನೆಯದು, ನಾಲ್ಕನೆಯ ಸಾಲಿನಲ್ಲಿ ಎರಡನೆಯದು, ಐದನೆಯ ಸಾಲಿನಲ್ಲಿ ಮೊದಲನೆಯದು

## ಮಕ್ಕಳೇ ಇದು ನಿಮಗಾಗಿ

# ರಸ ಪ್ರಶ್ನೆಗಳು

01. ವಿಷ್ಣುವಿನ ವಾಸ ಯಾವುದು?..............................................................................................
02. ಮಾರ್ಗಶಿರ ಮಾಸದ ಮಹತ್ವವನ್ನು ಯಾವ ಶ್ಲೋಕದಲ್ಲಿ ಪ್ರತಿಬಿಂಬಿಸಿದೆ?. ..........................................
03. ಗುರು ಗೋವಿಂದವಿಠಲದಾಸರ ತಂದೆ ತಾಯಿ ಹೆಸರೇನು?.............................. ..................................
04. ಭಗವದ್ಗೀತೆಯನ್ನು ಉಪದೇಶಿಸಿದವರು ಯಾರು? ................................................ ....................
05. ಶ್ರೀ ಮದಾನಂದತೀರ್ಥರು ಎಷ್ಟನೇ ಶಿಷ್ಯರು? ........ ........................................................................
06. ಬಂಗಾರದ ಬಟ್ಟಲನ್ನು ಕದಿಯಲಿಲ್ಲ ಎಂದು ಯಾರು ಹೇಳಿದರು?........................................................
07. ಅನಂತಪ್ಪನಿಗೆ ಏನೆಂದು ನಾಮಕರಣ ಮಾಡಿದರು? ..............................................................
08. ಪರಮಾತ್ಮನಿಗೆ ಏನೆಂದು ಹೆಸರು? . ....................................................................................
09. ಘಂಟೆಯು ಏನನ್ನು ಉತ್ಪಾದಿಸುತ್ತದೆ?................. ..............................................................
10. ಶೇಷಾದ್ರಿಯ ಶಿರದಲ್ಲಿ ಏನು ಇದೆ? ........................................................................ ..........
11. ತಿರುವಿರುತ್ತಂ ಪಾಶುರದಲ್ಲಿ ಏನು ಇದೆ? ................................................................................
12. ಎಲ್ಲಿಂದ ಬಂದರೆಂದು ವೈಕುಂಠಾದ್ರಿಯೆಂದು ಹೆಸರು ವಾಸಿಯಾದರು?.............................................
13. ಯಾವ ಎರಡು ದೇಶಗಳನ್ನು ಒಂದೇ ದಿವ್ಯದೇಶ ಎಂದು ಪರಿಗಣಿಸಿದರು? .........................................
14. ಹೊಸ ಹೊಳಲಿನಲ್ಲಿ ಯಾವ ದೇವಾಲಯವಿದೆ? ............................................... ......................
15. ಆಳ್ವಾರರಲ್ಲಿ ಕೊನೆಯ ಆಳ್ವಾರ್ ಯಾರು? ..................................................................................

## ಸೂಚನೆಗಳು

**41 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಆಂಡಾಳ್ ನ ಮತ್ತೊಂದು ಹೆಸರೇನು?

ಆಳ್ವಾರ್ ಸಂತರಲ್ಲಿ ಏಕೈಕ ಮಹಿಳೆ ಯಾರು?

ಆಂಡಾಳ್ ರವರ ತಂದೆಯ ಹೆಸರೇನು?

ಆಂಡಾಳ್ ರವರ ತುಳಸಿ ತೋಟವನ್ನು ಎಲ್ಲಿ ಕಾಣ ಬಹುದು?

ಆಂಡಾಳ್ ರವರು ಮೊದಲ ಕೃತಿ ಯಾವುದು?

ತಿರುಪ್ಪಾವೈಯಲ್ಲಿ ಎಷ್ಟು ಪಾಶುರಗಳಿವೆ?

ಆಂಡಾಳ್ ಯಾರನ್ನು ವಿವಾಹವಾದರು?

ಆಂಡಾಳ್ ವಿಷ್ಣುಚಿತ್ತರಿಗೆ ಎಲ್ಲಿ ಸಿಗುತ್ತಾಳೆ?



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.

1)ಗೋದಾದೇವಿ 2) ಆಡಾಂಳ್ 3) ವಿಷ್ಣುಚಿತ್ತರು 4) ಶ್ರೀ ವಿಲ್ಲಿ ಪುತ್ತೂರು 5)ತಿರುಪ್ಪಾವೈ 6) 30 ಪಾಶುರಗಳು
7)ಶ್ರೀರಂಗನಾಥ ಸ್ವಾಮಿ 8) ತುಳಸಿ ತೋಟದಲ್ಲಿ

ಮಕ್ಕಳೇ! ಈ ಚಿತ್ರದಲ್ಲಿರುವ ರಬ್ಬರ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಪೆನ್ಸಿಲ್ ಬಾಕ್ಸ್‌ನಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !




1) ii 2) vi 3) ii 4)v 5) iv



ಮಕ್ಕಳೇ ಚೆನ್ನಾಗಿದ್ದೀರಾ ನಾನು ಕೃಷ್ಣನ ಕೈಯಲ್ಲಿ ಇರುತ್ತೇನೆ. ಕೃಷ್ಣನು ನನ್ನನ್ನು ನುಡಿಸುವಾಗ ಗೋಪಿಕೆಯರು ಹಾಗೂ ಹಸುಗಳು ತನ್ನ ಬಳಿ ಬರುತ್ತದೆ ಹಾಗೂ ಸಂಗೀತ ವಾದ್ಯದಲ್ಲಿ ಪ್ರಮುಖವಾದುದು ನಾನು ಯಾರು ಎಂದು ಹೇಳಿ ನೋಡೋಣ!

**ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!**

ಕೊಳಲು

## ಚಿತ್ರಕಥೆ

# ತಿರುಮಂಗೈ ಆಳ್ವಾರ್

ಕಥೆ : ತೆಲುಗು ಮೂಲ : ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ.ದ್ವಾರಕನಾಥ








ಲೋಕಾಃ ಸಮಸ್ತಾಃ ಸುಖಿನೋ ಭವಂತು

తిరుమలే తిరుపతి దేవస్థానగళు. తిరుపతి

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತವ್ಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

తిరుమలే తిరుపతి దేవస్థానగళు. తిరుపతి

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.









**ತಿರುಮಲೆ**
**ಸ್ವಾಮಿಯವರ ಆಲಯದಲ್ಲಿ**
**ಅಧ್ಯಯನೋತ್ಸವಗಳು**
**19-12-2025 ರಿಂದ**
**12-01-2026 ರ ವರೆಗೆ**

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-11–2025 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 "Licenced to Post Without Prepayment No. PMGK/RNP/WPP-04(6) / 2024-2026" Posting on 1st of Every Month

